# ಅಪರಂಜಿ

**ತಿಳಿನಗೆಯ ಕಾರಂಜಿ** ಮಾರ್ಚ್ 2018




"ನಮ್ಮಲ್ಲಿ ಒಳ್ಳೇ ಸಾಲದ ಯೋಜನೆ ಇದೆ. ಅದೂ ಇಷ್ಟೇ ಚೆನ್ನಾಗಿದೆ.

ಅದನ್ನೇಕೆ ನೀವು ಪಡೆದುಕೊಳ್ಳಬಾರದು? "

ಬಿಡಿ ಪ್ರತಿ: ರೂ.10.00



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 35**
**ಸಂಚಿಕೆ - 6**
**ಮಾರ್ಚ್ - 2018**

## ಸಂಪಾದಕ ಮಂಡಳಿ

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

## ಆಡಳಿತ ಮಂಡಳಿ

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ವಿ.ಆರ್. ನಾಥ್
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಉಲ್ಲಾಸ್ ರಾಯಸಂ
ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ

## *ಈ ಸಂಚಿಕೆಯಲ್ಲಿ.....*

| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | ೨ |
| ನಮ್ಮ ನಮ್ಮಲ್ಲಿ | ಶಿವಕುಮಾರ್ | ೩ |
| ಸಂದೇಹ | ಓಂಪ್ರಕಾಶ್ | ೪ |
| ಅಪರಂಜಿ ಹಬ್ಬದ ಆಹ್ವಾನ ಪತ್ರಿಕೆ | | ೫ |
| ನಾಮದೊಳಗಿನ | ಕೆ.ರೂಪಾ ರಾವ್ | ೬ |
| ನಾನು ಕಂಪ್ಯೂಟರ್ ಕಲಿತೆ | ರಾಧಾ ಶ್ಯಾಮರಾವ್ | ೮ |
| ಅ.ಬಾ.ಗೋ.ಬಾ.ಸಂಘ | ಎಸ್.ಎನ್.ಕೃಷ್ಣಸ್ವಾಮಿ | ೯ |
| ಚೊಂಬೇಶನೊಂದಿಗೆ | ಸೂರಿ ಹಾರ್ದಳ್ಳಿ | ೧೧ |
| ಸೋಲು ಖಚಿತ | ಸುಧಾ ಸರನೋಬತ್ | ೧೫ |
| 'ಬೇಡಿ'ಗಳಿಂದ ಮುಕ್ತಿ | ಎಚ್ ಶಾಂತರಾಜ ಐತಾಳ | ೧೭ |
| ತುಂತುರು | ದಂನಆ | ೨೦ |
| ರಿಟೈರ್ಡ್ ಲೈಫು | ಎಚ್.ಗೋಪಾಲಕೃಷ್ಣ | ೨೧ |
| ನೂತನ ಸಂವತ್ಸರ ಫಲಂ | ಎಚ್.ಆರ್.ಹನುಮಂತರಾವ್ | ೨೫ |
| ವ್ಯಂಗ್ಯ ಮೆಲುಕು | ಪ್ರಕಾಶ್ ಶೆಟ್ಟಿ | ೨೮ |
| ರೆಸಲ್ಯೂಷನ್ ಹಾವಳಿ | ಲತಾ ಹೆಗಡೆ | ೨೯ |
| ಮಧುರ ಪ್ರೀತಿ | ಸುಧಾಮ | ೩೧ |
| ಟೆಂಪಲ್ ರನ್ | ಗಣೇಶ ಹೆಗ್ಗಡೆ | ೩೩ |
| ಉಡುಗೊರೆ | ಚಿನ್ಮಯಿ | ೩೬ |
| ಮುನಿಸಿಪಾಲಿಟಿಯ ಪಾಲಿಟಿಕ್ಸ್ | ಇ.ಆರ್.ರಾಮಚಂದ್ರನ್ | ೩೭ |

**ಮುಖಪುಟ ವ್ಯಂಗ್ಯಚಿತ್ರ - ಆರ್. ಕೆ. ಲಕ್ಷ್ಮಣ್**

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003. email: koravanji42@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ: ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



ರೋಗ ಯಾವುದೆಂಬುದು ತಿಳಿಯದೆ ಚಿಕಿತ್ಸೆಯ ಕಸರತ್ತು – ರಾಜಕೀಯ ಹೇಳಿಕೆ

*● ವೈದ್ಯರನ್ನು ಏಕೆ ತರಾಟೆಗೆ ತೆಗೆದುಕೊಂಡರು ??*

★★★

ಬಿ.ಜೆ.ಪಿ. ಸೋಲಿಸಲು ಕಾಂಗ್ರೆಸ್ ಜತೆ ಸ್ನೇಹ – ಸುದ್ದಿ

*● ಅಪವಿತ್ರ ಸ್ನೇಹ ?!!*

★★★

ಆರೋಗ್ಯ ಸೇವೆಗೆ ಉಪಕೇಂದ್ರಗಳು ಮೇಲ್ದರ್ಜೆಗೆ – ದೆಹಲಿ ಸುದ್ದಿ

*● ಅಲೋಪತಿ ವೈದ್ಯರೆಲ್ಲ ನಡುಗಿದರಂತೆ !!*

★★★

ದೊಡ್ಡ ಮೊತ್ತದ ವಹಿವಾಟಿನ ಮಾಹಿತಿ ಕೊಡದಿದ್ದರೆ ದಂಡ – ಪತ್ರಿಕೆ

*● ಸಧ್ಯ, ನಾವಂತೂ ಬಚಾವಾದೆವು !!*

★★★

ಸದಸ್ಯರಿಲ್ಲದೆ ಭಣಗುಟ್ಟುತ್ತಿದ್ದ ವಿಧಾನಸಭೆ – ಸುದ್ದಿ

*● ವೀಕ್ಷಿಸಲು ಬಂದಿದ್ದ ವಿದ್ಯಾರ್ಥಿಗಳಿಗೆ ನಮ್ಮ ನಾಡಿನ ಕಠೋರ ಸತ್ಯದ ಅರಿವಾಯಿತು !!*

★★★

ಫೆಬ್ರವರಿ 10ಕ್ಕೆ ಮೆಷೀನ್ ಟೂಲ್ಸ್ ಪಾರ್ಕ್ ಶಂಕು ಸ್ಥಾಪನೆ – ಪತ್ರಿಕೆ

*● ಇದರಲ್ಲಿ ಶಂಕೆ ಬೇಡ ಎಂದಾಶಿಸೋಣ !!*

★★★

'ಅಮೆರಿಕ ಮೊದಲು ಎಂದರೆ ಅಮೆರಿಕವೊಂದೇ ಎಂದಲ್ಲ' – ಟ್ರಂಪ್ ಹೇಳಿಕೆ

*● ಇದು ಅವರಿಗೆ ತೋಚಿದ್ದು ಬಹು ಆಶ್ಚರ್ಯಕರ !!*

★★★

ನಾಲ್ಕು ಬಾರಿ ತಪ್ಪಿದ ಮುಖ್ಯಮಂತ್ರಿ ಪದವಿ – ಶ್ರೀ ಜನಾರ್ಧನ ಪೂಜಾರಿ

*● ದೇವರು ವರ ಕೊಟ್ಟರೆ ತಾನೆ ?!*

★★★

## ನಮ್ಮ ನಿಮ್ಮಲ್ಲಿ

"ಶ್ರೀರಂಗದ ಒನಕೆ" ವಿಷಯ ನೀವು ಕೇಳಿರಬಹುದು ಅಥವಾ ಕೇಳಿಲ್ಲದಿರಬಹುದು. ನಾವೆಲ್ಲಾ ಚಿಕ್ಕೋರಾಗಿದ್ದಾಗ ನಮ್ಮ ಅಮ್ಮ ಈ ಪದ ಸಮುಚ್ಚಯಾನ ಯಾವಾಗ್ಲೂ ಬಳಸ್ತಾ ಇದ್ರು. ಶ್ರೀರಂಗಂ ದೇವಸ್ಥಾನದ ಪಾಕಶಾಲೆಯಲ್ಲಿ ಅಡುಗೆ ತಯಾರಿ ಸದಾಕಾಲ ನಡೆಯುತ್ತಿರುತ್ತದಂತೆ. ನಡೆಯಲೇಬೇಕಲ್ಲ, ಭಕ್ತಾದಿಗಳಿಗೇನು ಬರಾನೇ ಆ ಸುಪ್ರಸಿದ್ಧ ದೇಗುಲದಲ್ಲಿ. ಈ ಮೆಗಾ ಕಿಚನ್‌ಗೆ ಅಕ್ಕಿಹೊಂದಿಸಲು ಭತ್ತಾನ ನಿರಂತರವಾಗಿ ಕುಟ್ಟುತ್ತಿದ್ದರಂತೆ ಒಂದು ಕಾಲದಲ್ಲಿ. ಆ ಕುಟ್ಟುವಿಕೆಗೆ ವಿರಾಮವೇ ಇರುತ್ತಿರಲಿಲ್ಲವಂತೆ. ಇನ್ನೊಬ್ಬರು ಬಂದು ವಹಿಸಿಕೊಳ್ಳುವವರೆಗೆ ಕುಟ್ಟುತ್ತಾ ಇದ್ದವರು ಕುಟ್ಟುತ್ತಲೇ ಇರಬೇಕಾಗಿತ್ತಂತೆ. ಇಲ್ಲವಾದರೆ ಸ್ವಾಮಿ ರಂಗನಾಥನ ಕೋಪಕ್ಕೆ ಗುರಿಯಾಗುವ ಭಯ. ಇದರಿಂದಾಗಿ "ಶ್ರೀರಂಗದ ಒನಕೇ ಥರಾ" ಅನ್ನೋ ಗಾದೆ ಹುಟ್ಟಿಕೊಂಡಿತಂತೆ. ಯಾವುದಾದರೊಂದು ಕೆಲಸಾನ ಇಷ್ಟವಿರಲೀ ಬಿಡಲೀ, ಬೇರೆಯೋರು ಬಂದು ರಿಲೀವ್ ಮಾಡೋವರ್ಗೂ ಮಾಡ್ತಾನೇ ಇರಬೇಕಾದ ಪರಿಸ್ಥಿತೀನ ಈ ಗಾದೆಗೆ ಹೋಲಿಸ್ತಾರೆ.

ಯಾಕೆ ಹೇಳಕ್ಕೆ ಬಂದೆ ಅಂದರೆ, ಅಪರಂಜಿ ಪ್ರಾರಂಭವಾದಂದಿನಿಂದ ಅಪರಂಜಿ ಪತ್ರಿಕೇನ ಸಂಪಾದಿಸುವುದರ ಜೊತೆಗೆ ಅದರ ಪ್ರಕಟಣೆಯ ಭಾರವನ್ನೂ ನಾನೇ ವಹಿಸಿಕೊಳ್ಳುವ ಅನಿವಾರ್ಯತೆ ಒದಗಿ ಬಂದಿತ್ತು. ಕೊರವಂಜಿ ಅಪರಂಜಿ ಟ್ರಸ್ಟ್ ಪ್ರಾರಂಭವಾಗಿ ಹಲವು ಗೆಳೆಯರು ನನ್ನ ನೆರವಿಗೆ ಬಂದು ನಿಂತ ನಂತರ ನಿರ್ವಹಣೆಯ ಭಾರ ಕಡಿಮೆಯಾದರೂ, 'ಯಾರಾದರೂ ಯುವಕರು ಬಂದು ಟ್ರಸ್ಟ್ ಅನ್ನು ನಿರ್ವಹಿಸುವ ಜವಾಬ್ದಾರಿ ವಹಿಸಿಕೊಂಡರೆ ಎಷ್ಟು ಚೆನ್ನ!' ಎಂಬ ಹಗಲುಗನಸು ಹಿನ್ನೆಲೆಯಲ್ಲಿ ತಂಬೂರಿ ಶ್ರುತಿಯಂತೆ ಮೀಟುತ್ತಲೇ ಇತ್ತು. ಅಪರಂಜಿಯನ್ನು ಕಾಯುವ ಕೊರವಂಜಿ ದೇವಿಗೆ ನನ್ನ ಮೊರೆ ಕೇಳಿಸಿತೆಂದು ಕಾಣುತ್ತದೆ. ಅಂತಹ ಉತ್ಸಾಹೀ ತರುಣರೊಬ್ಬರು ಪ್ರತ್ಯಕ್ಷವಾಗಿ ಟ್ರಸ್ಟ್ ವ್ಯವಹಾರಗಳ ಒನಕೆಯನ್ನು ನನ್ನ ಕೈಯಿಂದ ವಹಿಸಿಕೊಳ್ಳಲು ಮುಂದಾಗಿದ್ದಾರೆ.

ಹೊಸ ವಿತ್ತ ವರ್ಷ ಏಪ್ರಿಲ್ ಒಂದರಿಂದ ನಮ್ಮ ನವ ಟ್ರಸ್ಟಿ ಶ್ರೀ ಉಲ್ಲಾಸ್ ರಾಯಸಮ್ ಅವರು ನಮ್ಮ ಟ್ರಸ್ಟಿನ ನಿರ್ವಹಣಾ ಟ್ರಸ್ಟಿಯಾಗಿ ಅಧಿಕಾರ ವಹಿಸಿಕೊಳ್ಳುವರು. ನಾನು ಎಂದಿನಂತೆ ಸಂಪಾದಕ ಮಂಡಳಿಯ ನೆರವಿನಿಂದ ಸಂಪಾದಕತ್ವವನ್ನು ಮುಂದುವರಿಸುವೆ. ನಮ್ಮ ನೂತನ ನಿರ್ವಹಣಾ ಟ್ರಸ್ಟಿ ಉಲ್ಲಾಸ್‌ಗೆ ಆದರದ ಸ್ವಾಗತ.

ಇನ್ನೊಂದು ಸಂತಸದ ಸುದ್ದಿ. ಏಪ್ರಿಲ್ ಒಂದರಂದು ಭಾರತೀಯ ವಿದ್ಯಾಭವನದಲ್ಲಿ ಅಪರಂಜಿ ಹಬ್ಬ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಭಾನುವಾರ ಬೆಳಗಿನ ಈ ಸಮಾರಂಭದಲ್ಲಿ ಅನೇಕ ಸ್ವಾರಸ್ಯಮಯ ಅಂಶಗಳನ್ನು ಕಲೆಹಾಕಿದ್ದೇವೆ. ಮೊದಲಿಗೆ ಸುಪ್ರಸಿದ್ಧ ವ್ಯಂಗ್ಯ ಚಿತ್ರಕಾರ ಶ್ರೀಯುತ ಪ್ರಕಾಶ್ ಶೆಟ್ಟಿಯವರು ತಮ್ಮ ವ್ಯಂಗ್ಯಚಿತ್ರ ರಚನಾ ಕೌಶಲವನ್ನು ಚಮತ್ಕಾರದ ಶೈಲಿಯಲ್ಲಿ ನಿಮ್ಮ ಮುಂದೆ ಪ್ರದರ್ಶಿಸಲಿದ್ದಾರೆ. ಇನ್ನೊಂದು ಸ್ವಾರಸ್ಯಮಯ ವಿಷಯವೆಂದರೆ ಖ್ಯಾತ ಲೇಖಕಿ ಶ್ರೀಮತಿ ಭುವನೇಶ್ವರಿಯವರು ನಡೆಸಿಕೊಡುವ ಸಂದರ್ಶನ

ಕಾರ್ಯಕ್ರಮ. ಅಪರಂಜಿ ಬರಹಗಾರ ಬಳಗದ ಮಹಿಳಾ ಲೇಖಕಿಯರಾದ ಸರ್ವ ಶ್ರೀಮತಿ ಸಹನಾ ಪ್ರಸಾದ್, ಗಾಯತ್ರಿ ಮೂರ್ತಿ, ವಾಣಿ ಸುರೇಶ್, ಶ್ಯಾಮಲಾ ರವಿಶಂಕರ್ ಹಾಗೂ ಕುಮುದಾ ಪುರುಷೋತ್ತಮ್ ಇವರುಗಳು ಭುವನೇಶ್ವರಿಯವರ ಪ್ರಶ್ನಾಂಬುಗಳನ್ನು ದಿಟ್ಟತನದಿಂದ ಇದುರಿಸಿ ತಕ್ಕ ಪ್ರತ್ಯಸ್ತ್ರಗಳನ್ನು ನೀಡಲಿದ್ದಾರೆ. ಅಪರಂಜಿ ಕಿಡಿಯ ಲೇಖಕ ಪ್ರಕಾಶ್ ತಮ್ಮ ಕಿಡಿಗಳ ಉಗಮದ ಬಗ್ಗೆ ಒಂದು ಪವರ್ ಪಾಯಿಂಟ್ ಷೋ ನೀಡಲಿರುವರು. ಅಪರಂಜಿ ನಡೆದುಬಂದ ಮೂವತ್ತ ನಾಲ್ಕು ವರ್ಷಗಳ ಸುದೀರ್ಘ ಹಾದಿಯಲ್ಲಿನ ಹಲವು ಮೈಲುಗಲ್ಲುಗಳನ್ನು ಮೆಲಕು ಹಾಕುವ ಜವಾಬ್ದಾರಿ ನನ್ನ ಹೆಗಲನ್ನು ಏರಿದೆ. ಇನ್ನೂ ಹಲವು ಸ್ವಾರಸ್ಯಗಳನ್ನು ನೀವು ಅಲ್ಲಿಗೆ ಬಂದೇ ಸವಿಯಬೇಕು.

ಮುಂದಿನ ಪುಟದಲ್ಲಿ ಆಹ್ವಾನ ಪತ್ರಿಕೆ ಇದೆ. ಅಪರಂಜಿಯ ಚಂದಾದಾರರು ದಯಮಾಡಿ ಇದನ್ನೇ ವೈಯಕ್ತಿಕ ಆಹ್ವಾನವೆಂದು ಪರಿಗಣಿಸಿ ಸಮಾರಂಭಕ್ಕೆ ಬನ್ನಿ.

ನಿಮ್ಮ ಆಗಮನವನ್ನೇ ನಿರೀಕ್ಷಿಸುತ್ತಿರುತ್ತೇವೆ.

**ಶಿವಕುಮಾರ್**

---

# ಸಂದೇಹ

**– ಪ್ರಕಾಶ್**

'ನಾನು' ಮಾತ್ರ ಸ್ವಾರ್ಥಿಯಲ್ಲ
ಅಹಂಕಾರವೆನಗೆ ಇಲ್ಲ
ಎಂದು ಹಲವು ವರ್ಷ ಕಾಲ
ಕುಣಿಯುತ್ತಿದ್ದೆನು

ದು:ಖದಿಂದ ಬಿಕ್ಕುವವರ
ಕಂಬನಿಯನು ಸುರಿಸುವವರ
'ನೆರವಿಗಿಹೆನು" ಎಂದು
ಮುಂದೆ ನುಗ್ಗುತ್ತಿದ್ದೆನು

ಕಾಲಚಕ್ರ ಉರುಳಿದಂತೆ
ನಿಲುವು ಬದಲಿತು
ಅಂತರಾಳದಿಂದ ಸಣ್ಣ
ಧ್ವನಿಯು ನುಡಿಯಿತು

ಇವನು 'ಸ್ವಾರ್ಥಿಯಲ್ಲ' ಎಂದು
ಜನರು ನುಡಿದೊಡೆ
ಹಿಗ್ಗಿ ಹೆಮ್ಮೆ ಪಡುವುದೇನು
'ಸ್ವಾರ್ಥವಲ್ಲವೇ'?

ಭಾರತೀಯ ವಿದ್ಯಾ ಭವನ, ಬೆಂಗಳೂರು
ಮತ್ತು
ಕೊರವಂಜಿ ಅಪರಂಜಿ ಟ್ರಸ್ಟ್, ಬೆಂಗಳೂರು ಅರ್ಪಿಸುವ

# ಅಪರಂಜಿ ಹಬ್ಬ 2018

ಭಾನುವಾರ, 1.4.2018, ಬೆಳಗ್ಗೆ 10 ಗಂಟೆಯಿಂದ

ಸ್ಥಳ : ಖಿಂಚಾ ಸಭಾಂಗಣ, ಭಾರತೀಯ ವಿದ್ಯಾ ಭವನ
ರೇಸ್ ಕೋರ್ಸ್ ರಸ್ತೆ, ಬೆಂಗಳೂರು 560 001

ಚಾಲನೆ ಕೊಡುವವರು – ಶ್ರೀ ಎನ್. ರಾಮಾನುಜ
ಅಧ್ಯಕ್ಷರು, ಭಾರತೀಯ ವಿದ್ಯಾಭವನ, ಕರ್ನಾಟಕ

ಅಪರಂಜಿ ವಿಶೇಷಾಂಕ ಬಿಡುಗಡೆ – ಡಾ. ಡಿ.ವಿ. ಗುರುಪ್ರಸಾದ್
ನಿವೃತ್ತ ಹಿರಿಯ ಪೋಲೀಸ್ ಅಧಿಕಾರಿಗಳು ಮತ್ತು ಲೇಖಕರು

ಅಧ್ಯಕ್ಷತೆ – ಶ್ರೀ ಶ್ರೀನಿವಾಸ ವೈದ್ಯ
ಹಿರಿಯ ಲೇಖಕರು – ಮತ್ತು ಕೇಂದ್ರ
ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು

ಎಲ್ಲರಿಗೂ ಪ್ರೀತಿಪೂರ್ವಕ ಆಹ್ವಾನ

ಎನ್. ರಾಮಾನುಜ
ಅಧ್ಯಕ್ಷರು, ಭಾರತೀಯ ವಿದ್ಯಾಭವನ ಕರ್ನಾಟಕ

ಶ್ರೀ ಎಂ. ಶಿವಕುಮಾರ್
ಮ್ಯಾನೇಜಿಂಗ್ ಟ್ರಸ್ಟಿ, ಕೊರವಂಜಿ ಅಪರಂಜಿ ಟ್ರಸ್ಟ್

## ಅಪರಂಜಿ ಹಬ್ಬದ ಕಾರ್ಯಕ್ರಮಗಳು

1 ಅಪರಂಜಿ ನಡೆದು ಬಂದ ಹಾದಿಯತ್ತ ಒಂದು ಕಿರುನೋಟ – ಎಂ. ಶಿವಕುಮಾರ್
2. ಅಪರಂಜಿ ಕಿಡಿಯ ಕುಡಿಗಣ್ಣೋಟ – ಡಾ. ಎಂ. ಓಂಪ್ರಕಾಶ್
3. ಬದುಕು ಬರಹ : ಅಪರಂಜಿ ಲೇಖಕಿಯರೊಂದಿಗೆ ಮಾತುಕತೆ
ಶ್ರೀಮತಿ ವಾಣಿ ಸುರೇಶ್ – ಶ್ರೀಮತಿ ಕುಮುದ ಪುರುಷೋತ್ತಮ್
ಶ್ರೀಮತಿ ಶ್ಯಾಮಲ ರವಿಶಂಕರ್ – ಶ್ರೀಮತಿ ಸಹನಾ ಪ್ರಸಾದ್ – ಶ್ರೀಮತಿ ಗಾಯತ್ರಿ ಮೂರ್ತಿ
ಗೋಷ್ಠಿ ನಿರ್ವಹಣೆ : ಶ್ರೀಮತಿ ಭುವನೇಶ್ವರಿ ಹೆಗಡೆ
4. ಹಾಸ್ಯ ಮಧುರ ಗೀತೆಗಳ ಗಾಯನ - ಶ್ರೀ ವೈ.ವಿ.ಗುಂಡೂರಾವ್
5. ಕ್ಯಾರಿಕೇಚರ್ ಲೈವ್ – ಪ್ರಕಾಶ್ ಶೆಟ್ಟಿ ಅವರ ಕಾರ್ಯ–ಕರ್ಮ

ಕಾರ್ಯಕ್ರಮದ ನಂತರ ಲಘುಭೋಜನ ಏರ್ಪಡಿಸಿದೆ

ಅಪರಂಜಿ ಹಬ್ಬದ ಪ್ರಾಯೋಜಕರು : ರಾಮಯ್ಯ ಸಮೂಹ ಸಂಸ್ಥೆಗಳು – ಬೆಂಗಳೂರು

# ನಾಮದೊಳಗಿನ ನಾಮಧೇಯಗಳು

**- ಕೆ. ರೂಪಾ ರಾವ್**

**ಓ!** ಶೀರ್ಷಿಕೆ ನೋಡಿ ಹುಬ್ಬೇರಿಸಬೇಡಿ ಇದೇನಪ್ಪಾ ಅಂತ! ವಿಷಯವೇ ಹಾಗಿದೆ, ತಲೆ ಕೆಡುವಂತೆ, ಇದು ನಾನು ಕಂಡ, ಕೇಳಿದ ನಾಮದೊಳಗಿನ ನಾಮಧೇಯಗಳ ಕಥೆ ನೋಡಿ!

ನಮ್ಮ ಎದುರುಮನೆಯ ಜಯಂತಿಯ ಮಗನ ಹೆಸರು ದಿಲೀಪ. ಒಬ್ಬನೇ ಮಗನೆಂಬ ಮುದ್ದಿಗೆ ಅವನು 25 ವರ್ಷಗಳ ಕುಂಟಿಕೋಣನಾಗಿದ್ರೂ ದೀಪೂ, ದೀಪ್, ದಿಲಿ, ದಿಲ್, ಲೀಪ್ ಅಂತೆಲ್ಲಾ ಕರೆಯೋರು. ಇದ್ರಲ್ಲೇನು ವಿಶೇಷ ಅಂತೀರಾ? ಇದೇರೀ, ಅದನ್ನೇ ನಾ ಹೇಳಕ್ಕೆ ಹೊರಟಿರೋದು. 'ದೀಪೂ, ದೀಪೂಽಽಽಽಽಽಽ... ಅಂತ ಕರೆದರೆ ಮುದ್ದಿನಿಂದ ರಾಗವಾಗಿ ಹೊರಡೋ ಸ್ವರ. 'ದೀಪ್' ಅಂದ್ರೆ ಅವಸರದಿಂದ ಹೊರಡುವ ಧ್ವನಿ. 'ದಿಲಿ' ಅಂದ್ರೆ ಅಪ್ಯಾಯಂತೆ, ಕಕ್ಕುಲಾತಿಗಳಿಂದ ಕರೆಯುವ ಭಾವ. 'ದಿಲ್' ಅಂತ ಕರೆದರೆ ಹೆಮ್ಮೆ, ಜಂಭದಿಂದ ಕೂಗುವ ಪರಿ. 'ಲೀಪ್' ಅಂದ್ರೆ ಹೆರವರ ಎದುರಿಗೆ ಹೀಗೂ ಕರೀತೇವೆ ಎಂದು ತೋರಿಸಿಕೊಳ್ಳುವ ಹೆಚ್ಚುಗಾರಿಕೆಯ ಗತ್ತು.

ಇನ್ನು ಪಕ್ಕದ್ಮನೆ ಪದ್ಮಾವತಿ ಮಗಳು ಪ್ರತೀಕ್ಷಾ, ಮಗ ಅಭಿಷೇಕ. ಮಕ್ಕಳನ್ನು ಅಂಕೆಶಂಕೆಯಲ್ಲೇ ಬೆಳೆಸುವ ಬಾಯಾಳಿ ಪದ್ಮಳೂ ಮಕ್ಕಳನ್ನು ಮುದ್ದುಗರೆಯಲು ಕರೆಯುವ ಹೆಸರುಗಳನ್ನು ಕೇಳಿದ್ರೆ ಮೂಗಿನ ಮೇಲೆ ಬೆರಳಿಡಬೇಕು. ಮಕ್ಕಳನ್ನು ಕರೆಯುವಾಗ ಅವಳ ಧ್ವನಿಯಲ್ಲಿ ಜೇನು ಒಸರುತ್ತೆ. ಮುದ್ದು ಸೂಸುವ ಆ ಕರೆಗಳನ್ನು ಕೇಳಿಯೇ ಆನಂದಿಸಬೇಕು. ಮಗಳಿಗೆ 'ಪ್ರತೀಽಽಽಽಽಽಽ... ಎಂದು ಕೂಗಿದರೆ ಜೋರಾಗಿ ಕಿರುಚಿ ಕರೆದಳೆಂದೇ ಅರ್ಥ. ಅರ್ಥ ಸಿಟ್ಟು, ಹತಾಶೆ ಬೆರೆತ ಧ್ವನಿ. ಟಿ.ವಿ. ನೋಡುತ್ತಿದ್ದರೆ, ಮೊಬೈಲ್ ಕಿವಿಗಿಟ್ಟುಕೊಂಡಿದ್ದರೆ ಮಗಳು ಕಿವುಡಿಯಾಗಿರ್ತಾಳೆ ಎಂದು ಗೊತ್ತಿರೋದ್ರಿಂದ ಪದ್ಮಾ ಆ ರೀತಿ ಕಿರುಚುತ್ತಾಳೆ. ಆಗಾಗ 'ಪ್ರತೀಶೂಽಽಽ... ಎಂದರೆ ಮುದ್ದು ಒಸರುವ ಧ್ವನಿ. ಆದರೂ ವಿಷಯ ಹೇಳಬೇಕೆಂದಿರುವಾಗ ...................... ಎಂದರೆ ಕೆಲಸಕ್ಕೆ ಸಹಾಯ ಮಾಡಲು ಕರೆ. 'ಅಮ್ಮುಲು....' ಅಂದ್ರೆ ತನಗೆ ಸುಸ್ತಾದಾಗ ಕೆಲಸ ಹೇಳಿ ಮಾಡಿಸುವ ಪರಿ. ಅವಳ ಗಂಡ ಸುಬ್ಬು ಮಗಳನ್ನು 'ಹತ್ತು ಪೈಸಾ' ಅಂತಲೇ ಕರೀತಾನೆ ತಮಾಷೆಯಾಗಿ.

ಇನ್ನು ಮಗನಿಗೆ ಅಭಿ, ಅಬ್ಬಿ, ಅಭೀಷು, ಅಭೀಷೂ, ಭಿಷಾ, ಭಿಷೂ, ಅಭಿಷಕ್, ಅಭಿಷುಕ್, ಅಭೀಷೇಕೂಽಽಽಽಽಽಽ..... ಬಿಷಾಕೂ, ಬಿಸಾಕೂ, ಬಬ್ಬು, ಬಬ್ಬಲೀ, ಬಬ್ಬುಗುಂಡು, ಬಂಗಾರೂ, ಬಲ್ಲೂ, ಪುಟ್ಟಾಣಿ ಹೀಗೆ ನಾನಾ ರೀತಿಯಿಂದ ಕರೆದಾಗ ಆ ಮಕ್ಕಳೂ ಈ ಹೆಸರುಗಳಿಗೆ ಅಡ್ಜಸ್ಟಾಗಿ ಸ್ಪಂದಿಸೋದು ನೋಡುವಾಗ ಆಶ್ಚರ್ಯವಾಗುತ್ತದೆ. ಒಂದು ದಿನವೂ ಆ ಹುಡುಗನ ನಿಜ ಹೆಸರಿನಿಂದ ಅವಳು ಮಗನನ್ನು ಕರೆದದ್ದು ನಾವಂತೂ ಕೇಳಿಲ್ಲ.

ಈಚೆ ಮನೆಯ ರಾಧಾಳಿಗೆ ಎರಡು ಹೆಣ್ಣುಮಕ್ಕಳು. ಗುಜರಾತಿ ಜನ. ಅವಳ ಮಕ್ಕಳ ಹೆಸರು ಖುಷಿ ಮತ್ತು ಡೋಲಿ. ಖುಷಿಯನ್ನು ಖುಷಾ, ಕುಚಾ, ಖುಷೂ, ಖುಷಾಬೂ, ಖುಷಾರಿಬಾ ಹೀಗೆ ಹೇಗೇಗೋ ಕರೆದರೆ ಡೋಲಿಗೆ ಡೋಲು, ಡೋಲೂ, ಡಾಲಿ, ಡಾಲು,

ಡಾಲ್‌ಹೌಸಿ ಹೀಗೆಲ್ಲಾ ಕರೆದಾಗ ಕೇಳುಗರಿಗೆ ವಿಚಿತ್ರವೆನಿಸದೆ ಇರದು.

ನಮ್ಮ ಹಿಂದಿನ ಮನೆಯ ಶಾಂತಾಳ ಮಕ್ಕಳು ಅವಳನ್ನು ಹೆಸರ್ಹಿಡಿದೇ ಕರೀತಾರೆ. ಶಾಂತಿ, ಶಾಂತಮ್ಮ, ಶಾಂತಲಾ, ಶಾಂತಾಬಾಯಿ, ಬೊಂಬಾಯಿ ಎಂದೆಲ್ಲಾ. ನನ್ನ ತಂಗಿಯ ಹೆಸರು ಆಶಾ. ಅವಳಂದ್ರೆ ಎಲ್ರಿಗೂ ಅಚ್ಚುಮೆಚ್ಚು. ಅದಕ್ಕೇ ಏನೋ ಅವಳನ್ನು ಒಬ್ಬರೂ ಪೂರಾ ಹೆಸರಿನಿಂದ ಕರೆಯರು. 'ಆಶೀ, ಆಶೂऽऽऽ..., ಆ್ಯಶ್, ಆಶಾಪುಟ್ಟಿ, ಆಶಮ್ಮ, ಆಶಾಬೋಸ್ಲೆ ಹೀಗೆ ಕುಚೋದ್ಯದಿಂದಲೂ ಕರೆಯೋರು. ಈ ಎಲ್ಲಾ ಕರೆಗಳಿಗೂ ಅವಳು ಓಕೆ. ನನ್ನ ತಂದೆಗೆ ನಮ್ಮಿಬ್ರ ಹೆಸರು ಕರೆದು ಗೊತ್ತೇ ಇಲ್ಲ. ಸದಾಕಾಲ ಅಪ್ಪೀ, ಪುಟ್ಟಿ ಅಂತಲೇ ಕರೆದು ಅಭ್ಯಾಸ. ಒಮ್ಮೊಮ್ಮೆ ಅಪ್ಪಿ ಸೋಡದ ..... ಕರೆಯುವುದಿತ್ತು.

ನನ್ನ ಹೆಸರಿನ ವೈಚಿತ್ರ ನೋಡಿ; ನನ್ನ ಹೆಸರು ರೂಪಾ. ಇಲ್ಲಿಯ ಬಹು ಜನರಿಗೆ ಆ ರೀತಿ ಕರೆಯಲು ಕಷ್ಟ. ಒಬ್ಬ ಗೆಳತಿ 'ರೂಬಾ' ಅಂದ್ರೆ, ಮತ್ತೊಬ್ಬಾಕೆ 'ರೂಬಿ' ಅಂತಾಳೆ. 'ರೂಪಮ್ಮ' ಅಂತ ಒಬ್ಬಳೆಂದರೆ ರೂಬಮ್ಮ ಅಂತ ಮತ್ತೊಬ್ಬಾಕೆ. ಇನ್ನೊಬ್ಬರು ರೂಪಾದೇವಿ ಅಂತಲೇ ನಾಮಕರಣ ಮಾಡಿಬಿಟ್ಟಿದ್ದಾರೆ. ಕೆಲ ಜನರು ಪೊಡವೆ ಕಾರಮ್ಮ (ಸೀರೆ ಮಾರುವವಳು), ನಗ ಕಾರಮ್ಮ (ಆಭರಣ ಮಾರುವವಳು), ಐಯ್ಯರಮ್ಮ (ಬ್ರಾಹ್ಮಣತಿ), ಕೆಲವರು ನನ್ನ ಮಕ್ಕಳ ಹೆಸರು ಹೇಳಿ ಜೊತೆಗೆ ಅಮ್ಮ ಎಂದು ಸೇರಿಸಿಬಿಡೋರು. ಅಪ್ಪ, ಅಮ್ಮ ಇಟ್ಟ ಹೆಸರು 'ರೂಪಶ್ರೀ'. ಮುದ್ದಿನಿಂದ ಕರೆದದ್ದು 'ಬೇಬಿ' ಎಂದು. ಇಲ್ಲಿಗೆ ಬಂದ ನಂತರ ಕರ್ನಾಟಕದ ಜನಗಳಿಗೆ ಮತ್ತು ವ್ಯವಹಾರಿಕ ಕ್ಷೇತ್ರಗಳಲ್ಲಿ 'ರೂಪಾ ರಾವ್' ಆದೆ. ಜನರ ಬಾಯಲ್ಲಿ ವಿವಿಧ ಹೆಸರುಗಳಿಂದ ರೂಪಾಂತರ ಹೊಂದಿ ಅಂತೂ ಈ ಎಲ್ಲಾ ಕರೆಗಳಿಗೂ ಸ್ಪಂದಿಸುವ ಮನಸ್ಥಿತಿಗೆ ತಲುಪಿದ್ದೇನೆ.

ನಾನು ಹುಟ್ಟಿದಾಗ ಬೆಳ್ಳಗೆ ಗುಂಡಗಿದ್ದುದರಿಂದ ಆಸ್ಪತ್ರೆಯ ನರ್ಸ್ ಬೇಬಿ ಬೇಬಿ ಎಂದು ಕಡೆಗೆ ಅದೇ ಹೆಸರು ಖಾಯಂ ಆಯ್ತು. ಈ ಖಾಯಂ ಹೆಸರಿನಿಂದ ನನ್ನ ಬಹಳ ಜನ ಸಂಬಂಧಿ ಕರಿಗೆ ನನ್ನ ನಿಜ ನಾಮಧೇಯವೇ ಮರೆತು ಹೋಗಿದೆ. ಅಪ್ಪಿ ತಪ್ಪಿ ಅವರು ನನ್ನ ಹೆಸರನ್ನು ನೆನಪು ಮಾಡಿಕೊಂಡು ಕರೆದರೂ ಅಪರಿಚಿತರನ್ನು ಕರೆದಂತೆನಿಸುತ್ತದೆ. ಹಾ! ನನ್ನ ಈ ಹೆಸರಿಗೂ ಅಡ್ಡ ಹೆಸರುಗಳು ತಪ್ಪಲಿಲ್ಲ. ಬೇಬಿ, ಬಾಬಿ, ಬಾಬ್ಬಿ, ಬಾಬ್ಬಿನ್, ಬೇಬಮ್ಮ, ಗೂಬಮ್ಮ, ಬೂಬು, ಬೂಬಮ್ಮ ಹೀಗೆ. ಚಿಕ್ಕಂದಿನಲ್ಲಿ ಮನೆಯಲ್ಲಿ ಹೀಗೆಲ್ಲಾ ಯಾರಾದರೂ ಕರೆದು ರೇಗಿಸಿದಾಗ ಅಪಮಾನವೆನಿಸಿ ಅಸಹಾಯಕತೆಯಿಂದ ............... ಈಗ ನಗೆ ಬರುತ್ತದೆ. ಇಷ್ಟೊಂದು ಹೆಸರುಗಳಿವೆ ನನಗೆ ಅಂತ ಕೊಂಚ ಹೆಮ್ಮೆಯೂ ಆಗುತ್ತದೆ.

ನನಗೆ ಸಿಕ್ಕ ಸ್ಯಾಂಪಲ್ಲುಗಳಲ್ಲಿ ಕೆಲವನ್ನು ಮಾತ್ರಾ ಉದಾಹರಿಸಿದ್ದೇನೆ. ನಿಮ್ಮ ಸುತ್ತಮುತ್ತಲೂ ಈ ಥರ ಹೆಸರಿನೊಳಗೊಂದು ಹೆಸರಿರುವವರು. ಬಹು ಹೆಸರಿನವರೂ ಇರಬಹುದಲ್ವೇ? ಮತ್ತೇಕೆ ತಡ? ಗಮನಿಸಿ, ಕೇಳಿ, ಆನಂದಿಸಿ, ಹೊಟ್ಟೆ ತುಂಬಾ ನಕ್ಕು ಬಿಡಿ. ನಮ್ಮ ಅಕ್ಕಪಕ್ಕದಲ್ಲೇ ಪಡೆಯುವ ಇಂಥಾ ಕಿಂಚಿತ್ ವಿದ್ಯಾಮಾನಗಳಿಂದ ಅಲ್ಪಮಟ್ಟಿಗಾದ್ರೂ ರಂಜನೆ ಪಡೆದು ಆನಂದಿಸೋಣ ಆಗದೇ?

# ನಾನು ಕಂಪ್ಯೂಟರ್ ಕಲಿತೆ

**-ರಾಧಾ ಶ್ಯಾಮರಾವ್**

**ನ**ನ್ನ ಮಕ್ಕಳು ಸೊಸೆಯಂದಿರು ಕಂಪ್ಯೂಟರ್, ಲ್ಯಾಪ್‌ಟಾಪ್‌ನ ಮುಂದೆ ಕುಳಿತು ಕೆಲಸ ಮಾಡುತ್ತಿದ್ದನ್ನು ನೋಡಿ ಬೆಕ್ಕಸ ಬೆರಗಾಗುತ್ತಿದ್ದೆ. ಆದರೆ ನನಗೆ ಆಪರೇಟ್ ಮಾಡಲು ಬರುವುದಿಲ್ಲವಲ್ಲ ಎಂಬುದೇ ಪೇಚಾಟ. ಮಕ್ಕಳನ್ನು ''ಸ್ವಲ್ಪ ಹೇಳೋ'' ಎಂದಾಗ ''ಅದರ ಮುಂದೆ ಕೂತು ಶುರು ಮಾಡು'' ತಾನೇ ಬರ್ತದ ಅನ್ನುತ್ತಿದ್ದರು. ಸೊಸೆಯಂದಿರು ''ಕಂಪ್ಯೂಟರ್ ಮುಂದ ಬಂದ ಕೂಡ್ರಿ, ನಿಮಗೇನ ಬೇಕೋ ಅದನ್ನ ಹೇಳತೀವಿ'' ಅಂತಿದ್ದರು. ಆದರ ಅವರೆಲ್ಲ ಹಬ್ಬಕ್ಕಂತ ಬಂದಾಗ ತಿಂಡಿ, ತಿನಿಸು, ಓಡಾಟ, ಮೊಮ್ಮಕ್ಕಳ ಧಾಂದಲೆಯೊಳಗೆ ಪುರುಸೊತ್ತೆಲ್ಲಿ?'' ಮದುವಿ ಆಗಾಂಗಿಲ್ಲ , ಮದುವಿ ಆಗಲದ್ ಹುಚ್ಚು ಬಿಡಾಂಗಿಲ್ಲ ಹಂಗ ಆಗಿತ್ತು ನನ್ನ ಕತೆ.

ನಾ ಅಷ್ಟ ಅಲ್ಲಾ ನನ್ನ ಕೆಲ ಗೆಳತಿಯರದೂ ಅದೇ ಪಾಡು. ದಿನಾ ಮನಿಯವರು ಮಕ್ಕಳಿಂದ ''ನಿನಗೇನ ಗೊತ್ತಾಗತದ?'' ''ನಿನಗೇನ ಬರ್ತದ?'' ಅಂತ ಹೀಯಾಳಿಸಿ ಕೊಂಡು ಸಾಕಾಗಿತ್ತು. ಆದರ ಅಲ್ಲಾ ಉದ್ದಿನನ ದೀಪ ಸಿಕ್ಕಾಂಗ ಒಂದಿನ ಮಹಿಳಾಮಂಡಲದಲ್ಲೊಂದು ಬಂತು ಸಿಹಿ ಸುದ್ದಿ. ''ಮೂರು ತಿಂಗಳಲ್ಲಿ ಕಂಪ್ಯೂಟರ್ ಕಲಿಕೆ'' 1000 ರೂ. ಮಾತ್ರ. ಎಲ್ಲರೂ ನಿರ್ಧರಿಸಿದೆವು. ಆಗಲೇ ಕನಸು. 3 ತಿಂಗಳಲ್ಲೇ ಎಲ್ಲಾ ಕಲಿತು, ಆನ್‌ಲೈನ್ ಬುಕಿಂಗ್, ಶಾಪಿಂಗ್!!! ಏನುಂಟು ಏನಿಲ್ಲ?

ಮರು ದಿನದಿಂದಲೇ 2.30 ಆಗುತ್ತಲೇ ಕಂಪ್ಯೂಟರ್ ಇನ್ಸ್ಟಿಟ್ಯೂಟ್ ಕಡೆಗೆ ದಾರಿ ಶುರು ಆಯ್ತು. ಬಸ್ ತಪ್ಪಿ ಹೊತ್ತಾಗುತ್ತೆಂದು ಆಟೋ ಹಿಡಿದಿದ್ದಾಯಿತು. ಶುರು ಆಯಿತು ಪೇಂಟಿಂಗ್‌ನಿಂದ ಟೀಚರ್ ತೋರಿಸುತ್ತಿದ್ದರು. ''ವ್ಹಾ ಎಷ್ಟು ಚನ್ನಾಗಿದೆ!'' ಎನಿಸುತ್ತಿತ್ತು. ಮಾಡಲು ಹೋದಾಗ ಎಲ್ಲಾನೂ ಸೊಟ್ಟಾ ಪಟ್ಟ - ಮುಂದ ಮೈ ಪಿಕ್ಚರ್ಸ್, ವರ್ಡ್ ಪ್ಯಾಡ್, ಎಮ್.ಎಸ್. ವರ್ಡ್ ದಿಗ್ಭ್ರಮೆ ಆಯಿತು. ಬ್ಯಾಕ್ ಸ್ಪೇಸ್ ಎಂಟರ್ ಎಲ್ಲಕ್ಕೂ ಹುಂ, ಹುಂ, ಎಂದೆವು. ಎಂಟರ್ ಮಾಡಬೇಕೆನ್ನುವಾಗ ಡಿಲೀಟ್ ಒತ್ತಿ ಎಲ್ಲವೂ ಅಯೋಮಯ. ಟೀಚರ್ ಅದ ಹಂಗಲ್ಲರೀ. ಹಿಂಗ ಅಂತ ಸಾವಿರ ಸಲ ಹೇಳಿದ್ದೂ ಆತು. 5.30 ಆಗಿದ್ದ ತಡ ಮನಿಕಡೆ ಓಟ. ಸ್ವಲ್ಪ ತಡಾ ಆದರ ಚಹಾಕ್ಕಾಗಿ ಕಾಯುತಿದ್ದ ರಾಯರಿಂದ ಸಹಸ್ರನಾಮಾರ್ಚನೆ ಆಗುತ್ತಿತ್ತು. ಆಗ ಗಡಿಬಿಡಿಯಲ್ಲಿ ಒಮ್ಮೊಮ್ಮೆ ಸೇವ್ ಮಾಡದೇ ಎಲ್ಲವೂ ಮಂಗಮಾಯ. ಮರುದಿನ ಮತ್ತು ಅದನ್ನೇ ಮಾಡೋದು ಇದೊಂದು ಪರಿ. ಅದರ ಇನ್ನೊಂದು, ಅವತ್ತು ಮಹಿಳಾಮಂಡಲ ವಿಶೇಷ ಕಾರ್ಯಕ್ರಮ, ನಾಳೆ ಮದುವೆ, ಇನ್ನೊಂದು ದಿನ ಗೆಳತಿ ಮನೆ ವಾಸ್ತು, ಮತ್ತೆ ಮೊಮ್ಮಗನ ಮುಂಜಿ ತಯಾರಿಗೆ 8 ದಿನ ಮುಂಚೇ ಬೆಂಗಳೂರಿಗೆ ಹೋಗಬೇಕು. ಇದರಲ್ಲೇ 3 ತಿಂಗಳು ಕಳೆದವು. ಥ್ಯಾಂಕ್ಸ್ ವಿ ಎಂಜಾಯ್ಡ್ ಎಂದಾಗ 'ಅಮ್ಮಾ ಆ ಕ್ಲಾಸ್‌ಗೆ ಮಣ್ಣು ಹೊತ್ತದ್ದೇತಕ್ಕೆ?' ಎಂದ ಇವರು ''ಸಾವಿರಕ್ಕೆ 3 ಸಾವಿರ ಸುರದ್ದಾತು ಇನ್ನು ಮತ್ತೇನೂ ಅವಾಂತರ ಮಾಡದ ತಣ್ಣಗಿರು'' ಮಾರಾಯ್ತಿ ಎಂದರು.

ಆಗ ಮನಿಯೊಳಗೆ ಕಂಪ್ಯೂಟರ್ ಮುಂದ ಕೂತಾಗ ಯು ವಾಂಟ್ ಟು ಚೇಂಜ್ ದ ಪ್ಲೇಸ್? ಯು ವಾಂಟ್ ರೀಪ್ಲೇಸ್ ದ ಪ್ಲೇಸ್? ................ ಒಂದೇ ಪ್ರಶ್ನೆ ''ನಾನೇನು ಕಲಿತೆ?''

# ಅ.ಬಾ.ಗೋ.ಬ. ಸಂಘ

**- ಎಸ್. ಎನ್. ಕೃಷ್ಣಸ್ವಾಮಿ**

ನೀವು ಮೇಲಿನ ಶೀರ್ಷಿಕೆಯನ್ನು ಓದಿದಾಗ, ಇದೇನೋ ಒಂದು ಹೊಸ ಸಹಕಾರ ಸಂಘವೋ ಅಥವಾ ಸಾಲ ಕೊಡುವ ಸಹಕಾರ ಸಂಸ್ಥೆಯೋ ಎಂದು ಅನುಮಾನಿಸಬಹುದು. ಆದರೆ ಈ ಸಂಘ ಅದಾವದೂ ಅಲ್ಲ ಹಾಗೂ ಹೊಸ ಸಂಸ್ಥೆಯೂ ಅಲ್ಲ.

ಈ ಸಂಘವು ಈಗ್ಗೆ 40-50 ವರ್ಷಗಳ ಹಿಂದೆಯೇ ಸಂಸ್ಥಾಪನೆಯಾಗಿ ನೊಂದಣಿಯಾಗಿದೆ. ಇದರ ಬಗ್ಗೆ ಪರಿಚಯ ಲೇಖನ ಕೊರವಂಜಿಯಲ್ಲೋ ಅಥವಾ ಇತರ ಮಾಸ ಪತ್ರಿಕೆಯಲ್ಲೋ ಪ್ರಕಟಗೊಂಡು ನಾನು ಓದಿದ ಜ್ಞಾಪಕ. ಇದರಲ್ಲಿ ನನ್ನ ಸ್ವಂತಿಕೆ ಏನೂ ಇಲ್ಲ. ಈ ಸಂಘದ ಪೂರ್ಣ ಹೆಸರು ''ಅಖಿಲ ಭಾರತ ಗೋಡೆ ಬರಹಗಾರರ ಸಂಘ'' ಎಂದು. ಇಂದಿನ ಕಿಶೋರರು ಈ ಸಂಘ ಸ್ಥಾಪನೆಯಾದಾಗ ಹುಟ್ಟೇ ಇರಲಿಲ್ಲ. ಆಗಿನ ಕಿಶೋರರು ಈಗ ವಯಸ್ಸಾದವರಾಗಿದ್ದಾರೆ. ಹಾಗಾಗಿ ನಾನು ಈ ಸಂಘದ ಬಗ್ಗೆ ಒಂದು ಪರಿಚಯ ಲೇಖನವನ್ನ ಬರಿಯುತ್ತಿದ್ದೇನೆ. ಈ ಸಂಘದ ಸರ್ವಸದಸ್ಯರ ಸಭೆಯು ಕೆಲವು ಠರಾವುಗಳನ್ನು ಮಂಡಿಸಿ ಸರ್ವಾನುಮತದಿಂದ ಸದಸ್ಯರ ಅನುಮೋದನೆಯನ್ನು ಪಡೆದಿತ್ತು. ಈ ಠರಾವುಗಳ ನಕಲನ್ನು ಸರ್ಕಾರಕ್ಕೆ ಕಳುಹಿಸಲಾಗಿತ್ತು ಮತ್ತು ಸರ್ಕಾರದ ಅನುಮೋದನೆಯನ್ನು ಪಡೆಯಲಾಗಿತ್ತು. ಅಂದಿನ ಮತ್ತು ಇಂದಿನ ಸರ್ಕಾರಗಳು ಈ ಸಂಘದ ಕಾರ್ಯಚಟುವಟಿಕೆಗಳಿಗೆ ಸಹಕಾರ ಕೊಡುತ್ತಾ ಬಂದಿವೆ.

ಈ ಸಂಘದ ಅನೇಕ ಠರಾವುಗಳಲ್ಲಿ ನನಗೆ ಜ್ಞಾಪಕವಿರುವ ಮುಖ್ಯವಾದವುಗಳನ್ನು ನಮೂದಿಸಿದ್ದೇನೆ. ಕೆಲವನ್ನೇನಾದರೂ ನಾನು ಬಿಟ್ಟಿದ್ದರೆ ಮತ್ತು ಯಾರಿಗಾದರೂ ಜ್ಞಾಪಕವಿದ್ದರೆ ಅವುಗಳನ್ನು ಪಟ್ಟಿ ಮಾಡಿ ಸಂಬಂಧಪಟ್ಟವರಿಗೆ ಕಳುಹಿಸಬಹುದು. ಈಗ ಠರಾವುಗಳ ಬಗ್ಗೆ ಗಮನ ಹರಿಸೋಣ.

1. ಸರ್ಕಾರವು ಗೋಡೆ ಬರಹಗಾರರಿಗೆ ಸೂಕ್ತ ರೀತಿಯಲ್ಲಿ ತರಬೇತಿಯನ್ನು ಕೊಡಬೇಕು.
2. ಸಾಮಾನ್ಯವಾಗಿ ಗೋಡೆ ಬರಹದ ಕಾರ್ಯವು ರಾತ್ರಿವೇಳೆಯಲ್ಲಿ ನಡೆಯುವುದರಿಂದ ಬೀದಿ ದೀಪಗಳು ಸದಾ ಉರಿಯುವಂತೆ ನೋಡಿಕೊಳ್ಳಬೇಕು. ಕೆಟ್ಟುಹೋದ ಬಲ್ಬುಗಳನ್ನು ತಕ್ಷಣವೇ ಬದಲಿಸಬೇಕು.
3. ರಾತ್ರಿಯ ಹೊತ್ತು ಗಸ್ತು ಪೋಲೀಸರು ಗೋಡೆ ಬರಹಗಾರರಿಗೆ ಯಾವ ತೊಂದರೆಯನ್ನು ಕೊಡಬಾರದು.
4. ಮನೆ ಮಾಲೀಕರು ನಾಯಿಗಳನ್ನು ಸಾಕಿದ್ದಲ್ಲಿ ಅವುಗಳನ್ನು ಕಟ್ಟಿಹಾಕಿರಬೇಕು. ಇವುಗಳಿಂದ ಗೋಡೆ ಬರಹಗಾರರಿಗೆ ಯಾವ ತೊಂದರೆಯೂ ಆಗಬಾರದು.
5. ಹಾಗೇನಾದರು ಅಪ್ಪಿ ತಪ್ಪಿ ಈ ನಾಯಿಗಳು ಬರಹಗಾರರನ್ನು ಕಚ್ಚಿದ್ದಲ್ಲಿ ಬರಹಗಾರರ ವೈದ್ಯಕೀಯ ಖರ್ಚನ್ನು ಮಾಲೀಕರೇ ವಹಿಸಿಕೊಳ್ಳಬೇಕು.

6. ಗೋಡೆ ಬರಹಗಾರರನ್ನು ಕೆಲಸಕ್ಕೆ ಸೇರಿಸಿಕೊಳ್ಳುವ ಸಂಸ್ಥೆಗಳು, ಬರಹಗಾರರ ವೇತನವನ್ನು ರಾಜ್ಯ ಸರ್ಕಾರದ ಕನಿಷ್ಟ ವೇತನದ ಕಾಯಿದೆ ಅಡಿಯಲ್ಲಿ ಏನಿದೆಯೋ ಅಷ್ಟನ್ನೇ ಕೊಡಬೇಕು.

7. ಗೋಡೆ ಬರಹವು ರಾತ್ರಿ ಕೆಲಸವಾದುದರಿಂದ ಸ್ತ್ರೀಯರನ್ನು ಈ ಕೆಲಸಕ್ಕೆ ಸೇರಿಸಿಕೊಳ್ಳಬಾರದು.

9. ಈ ವಸ್ತುಗಳು ಸಂಬಂಧಪಟ್ಟ ಅಂಗಡಿಗಳಲ್ಲಿ ರಿಯಾಯಿತಿ ದರಗಳಲ್ಲಿ ದೊರೆಯುವಂತೆ ಮಾಡಬೇಕು.

10. ಮನೆಯ ಮಾಲೀಕರು ಅವರ ಮನೆಯ ಮುಂಜಿ, ಮದುವೆ ಮುಂತಾದ ಮಂಗಳ ಕಾರ್ಯಗಳಿಗೆ ಸುಣ್ಣ ಬಣ್ಣ ಮಾಡಿಸಬೇಕಾದಲ್ಲಿ ಸಂಘದ ವತಿಯಿಂದ ಪರವಾನಗಿಯನ್ನು ಪಡೆಯಬೇಕು. ಇಂತಹ ಸಂದರ್ಭಗಳಲ್ಲಿ ಮೂರು ತಿಂಗಳ ನಂತರ ಹಳೆಯ ಸಂದೇಶಗಳನ್ನು ಅಥವಾ ಹೊಸ ಸಂದೇಶಗಳನ್ನು ಬರೆಯಲು ಅಡ್ಡಿಮಾಡಬಾರದು.

11. ಗೋಡೆ ಬರಹದ ಸಂದೇಶ ಸರ್ಕಾರದ ಧೋರಣೆಯ ವಿರುದ್ಧ ಅಥವಾ ಸರ್ಕಾರದ ನಿಲುವುಗಳ ವಿರುದ್ಧವಾಗಿದ್ದರೆ ಕನಿಷ್ಠ ಪಕ್ಷ ಒಂದು ತಿಂಗಳವರೆವಿಗೂ ಅಳಿಸಬಾರದು ಹಾಗೂ ಗೋಡೆ ಬರಹಗಾರರ ಸಂಸ್ಥೆಯ ವಿರುದ್ಧ ಕ್ರಮವನ್ನು ತೆಗೆದುಕೊಳ್ಳಬಾರದು.

12. ದಲಿತರ ಶೋಷಣೆಯ ವಿರುದ್ಧ ಬರೆದ ಸಂದೇಶಗಳನ್ನು ಅಳಿಸಿಹಾಕಬಾರದು.

13. ಮಾಲೀಕರು ಕಾಂಪೌಂಡ್ ಇಲ್ಲದ ಮನೆಗಳನ್ನು ಕಟ್ಟಲು ಅನುಮತಿ ಕೊಡಬಾರದು.

14. ಯಾವುದಾದರೂ ನಿರ್ದಿಷ್ಟ ವ್ಯಕ್ತಿಗಳ ಅನಾಚಾರದ ವಿರುದ್ಧ ಗೋಡೆ ಬರಹವಾಗಿದ್ದರೆ ಯಾರೂ ಕೂಡ ಅಖಿಲ ಭಾರತ ಗೋಡೆ ಬರಹಗಾರರ ಸಂಘದ ಬಗ್ಗೆ ಮತ್ತು ಅದರ ಸದಸ್ಯ ಸಂಸ್ಥೆಗಳ ವಿರುದ್ಧ ಮಾನನಷ್ಟ ಮೊಕದ್ದಮೆ ಹಾಕುವಂತಿಲ್ಲ, ಅಂತಹ ಸಂದಂರ್ಭದಲ್ಲಿ ಸರ್ಕಾರವು ಸಂಘಕ್ಕೆ ಸೂಕ್ತ ರಕ್ಷಣೆ ಕೊಡಬೇಕು.

15. ಕೇಂದ್ರ ಸರ್ಕಾರವು ಅಖಿಲ ಭಾರತ ಗೋಡೆ ಬರಹಗಾರರ ಕಾರ್ಮಿಕರ ಕಲ್ಯಾಣ ಕಾಯಿದೆಯನ್ನು ಕೂಡಲೇ ಜಾರಿಗೆ ತರಬೇಕು ಮತ್ತು ತಿದ್ದು ಪಡಿಗಳನ್ನು ಮಾಡಬೇಕಿದ್ದರೆ ಸರ್ಕಾರದ ಪ್ರತಿನಿಧಿಗಳು ಮತ್ತು ಸಂಘದ ಪ್ರತಿನಿಧಿಗಳು ಚರ್ಚೆಮಾಡಿ ಕಾರ್ಮಿಕರ ಒಳಿತನ್ನು ಗಮನದಲ್ಲಿಟ್ಟುಕೊಂಡು ತಿದ್ದುಪಡಿ ಮಾಡಬೇಕು.

# ಚೊಂಬೇಶನೊಂದಿಗೆ ಸಂದರ್ಶನ

**- ಸೂರಿ ಹಾರ್ದಳ್ಳಿ**

'**ನ**ಮಸ್ಕಾರ ಚೆಂಬಣ್ಣ...'

ನಾನು ಇನ್ನೂ ಮಾತು ಮುಗಿಸಿರಲಿಲ್ಲ, ಹಸಿದ ಹೆಬ್ಬುಲಿ ತನ್ನ ಬಲಿಯ ಮೇಲೆ ಒಮ್ಮೆಗೇ ಎಗರುವಂತೆ, ಚೆಂಬೇಶ (ಚೊಂಬೇಶ) ನನ್ನ ಮೇಲೆ ವಾಕ್‍ಪ್ರಹಾರ ಮಾಡಿದ, 'ಈಗೇನು ನಮಸ್ಕಾರ ಅಂತಿ? ಈಗ ಬಂತೋ ನನ್ನ ನೆನಪು? ನಾನೂ ಒಬ್ಬ ಇದೀನಿ, ಈ ಮೂಲೇಲಿ, ಹಸರಣಿಗಳ ನಡುವೆ, ಕತ್ತಲೆ ಕವಿದ ಜಾಗದಲ್ಲಿ, ಅಂತ? ನನ್ನ ಮೇಲೆ ಇಲಿಗಳು, ಅಕ್ಕಳೆಗಳು ಓಡಾಡುತ್ತಿವೆ, ನಿಮ್ಮ ಮನೆಯವರು ತಂದ ದರಲೆ, ಚೆರುಬುಗಳನ್ನ ನನ್ನ ಮೇಲೇ ಎಸೆಯುತ್ತಾರೆ. ಆಗ ನನ್ನ ಅಸ್ತಿತ್ವ ಇರೋದು ತಿಳಿಯೋಲ್ಲ.'

'ಹಾಗಲ್ಲ ಚೆಂಬಣ್ಣ..' ನಾನು ಮಾತು ಶುರುಮಾಡಲಿಲ್ಲ, ಆಗಲೇ ಆಪಾದನೆಗಳ ಸರಣಿ.

'ಚೆಂಬಣ್ಣ ಅಂತೆ, ಚೆಂಬಣ್ಣ. ಬಾಯಿ ತುಂಬಿ ಮರ್ಯಾದೆಯಿಂದ ನನ್ನಂಥಹ ಹಿರಿಯನನ್ನ ಚೆಂಬೇಶಪ್ಪಾ ಎಂದು ಕರೆದರೆ ನಿನ್ನ ಗಂಟಲೇನು ಸಿಡಿದು ಹೋಗುತ್ತಾ? ಕಳೆದ ಐವತ್ತು ವರ್ಷಗಳಿಂದ ನಿಮ್ಮ ಕುಟುಂಬದ ಸೇವೆ ಮಾಡಿಕೊಂಡು ಬಂದಿದ್ದೀನಿ ಅನ್ನುವ ಕೃತಜ್ಞತೆಯಾದರೂ ಬೇಡವೇ? ಹಿರಿಯರಿಗೆ ಒಂದಿಷ್ಟು ಗೌರವವಾದರೂ ಬೇಡವೇ? ನೀವು, ಮನುಷ್ಯ ಜಾತಿ, ಈ ಜಗತ್ತಿನಲ್ಲಿ ಇರೋದೆಲ್ಲಾ ತನ್ನ ಸೇವೆಗೆ ಎಂದು ಭಾವಿಸುವವರೇ.'

ನಾನು ನಾಚಿಕೆಯಿಂದ ತಲೆ ತಗ್ಗಿಸಿದೆ.

'1972ರಲ್ಲಿ ಅದೆಲ್ಲೋ ಬೆಂಗಳೂರೆಂಬ ಊರಿಗೆ, ಅಲ್ಲಿಯೇನೋ ಸ್ವರ್ಗ ಇದೆ ಎಂದು ಹೋದೆಯಲ್ಲ, ಆಗ ಒಮ್ಮೆಯಾದರೂ ಬಾಯಿ ತುಂಬಿ 'ಹೋಗಿ ಬರುತ್ತೇನೆ ಚೆಂಬೇಶಪ್ಪ ಎಂದು ಹೇಳಿದೆಯಾ?' ಇಲ್ಲ, ನನ್ನ ನೆನಪೇ ಆಗಲಿಲ್ಲ. ನೀನು ಎಲ್ಲಾದರೂ ಇರು, ಸಂತೋಷವಾಗಿದ್ದರೆ ಸಾಕು ಎಂದು ನಾನು ಪದೇ ಪದೇ ಆಶೀರ್ವದಿಸುತ್ತೇನೆ ಎಂಬುದು ನಿನಗೆ ಗೊತ್ತಾ? ಇಲ್ಲ, ಇಲ್ಲ. ನಿಮಗೆಲ್ಲಾ ನನ್ನ ನೆನಪಾಗುವುದು ಬೆಳಗ್ಗೆ, ಕರಿ ಕತ್ತಲಲ್ಲಿ, ಹೊಟ್ಟೆ ಗುಡುಗುಡು ಎಂದಾಗ. ರಾತ್ರಿ ಮಾಡಿದ ಪಾಪಗಳನ್ನು ಪರಿಹರಿಸಿಕೊಳ್ಳುವ ಒತ್ತಡ ಬಂದಾಗ.'

'ನೀವನ್ನೋದು ಖಂಡಿತಾ ನಿಜ ಚೆಂಬೇಶಪ್ಪ. ಅದಕ್ಕಾಗಿ ನಾನು ಈಗ ಕ್ಷಮೆ ಯಾಚಿಸುತ್ತೇನೆ. ಹದಿನೇಳನೆಯ ವಯಸ್ಸಿನಲ್ಲಿಯೇ ನಾನು ಊರು ಬಿಟ್ಟಿದ್ದು. ಆಗ ಇನ್ನೂ ಹುಡುಗು ಬುದ್ಧಿ. ತಿಳಿಯಲಿಲ್ಲ' ಕ್ಷಮೆ ಯಾಚಿಸಿದೆ.

'ಹೌದು, ನಿನ್ನಪ್ಪನೂ ಹಾಗೆಯೇ ಅಂತಿದ್ರು, 'ಹುಡುಗು ಬುದ್ಧ್ಯೋ, ನೆಗೆದು ಬಿದ್ಯೋ' ಅಂತ. ಸರಿಯೋ ಸೂರಿ, ಈಗೇನು ನನ್ನ ನೆನಪಾಯಿತು?' ಚೆಂಬಣ್ಣನ ಸಿಟ್ಟು ಇಳಿದುದು ತಿಳಿಯಿತು, ಸಂತೋಷವಾಯಿತು. 'ಈಗಲೂ ನಿನ್ನ ಏತಿ ಅಂದರೆ ಪ್ರೇತಿ ಎನ್ನುವ ಬುದ್ಧಿ, ಮುಂಗೋಪ, ಇವೆಲ್ಲಾ ಇದೆಯೋ? ಅಥವಾ ಎಲ್ಲಾ ಬಿಟ್ಟು ಮನುಷ್ಯನಾದೆಯೋ? ಅದೇನು ಕಡಿದು ಕಟ್ಟೆ ಹಾಕಿದೆ ಬೆಂಗಳೂರಿನಲ್ಲಿ?' ಕೇಳಿತು.

'ನನ್ನ ಕತೆ ಇರಲಿ ಚೆಂಬೇಶಪ್ಪ, ನೀನು ಹೇಗಿದ್ದಿ ಎಂದು ಕೇಳಬೇಕು ಎನಿಸಿತು, ಬಂದೆ ಅಷ್ಟೇ' ಎಂದೆ.

‘ಹೇಳೋಕೆ ಏನಿದೆ, ಅದೇ ಬರೀ ಗೋಳಿನ ಕತೆ. ನಾನು ಸಾವಿರಾರು ಚೆಂಬುಗಳ ನಡುವೆ, ಎಲ್ಲರಲ್ಲೊಂದಾಗಿ ಜನಿಸಿದೆ. ಆದರೆ ನೀವು, ಅಂದರೆ ಮನುಷ್ಯರು, ನನ್ನನ್ನು ಅಸ್ಪೃಶ್ಯರನ್ನಾಗಿಸಿ, ‘ಹೊರಕಡೆ ಚೆಂಬು’ ಎಂದು ಹಣೆಪಟ್ಟಿ ಅಂಟಿಸಿ ಮೂಲೆಯಲ್ಲಿ ಕುಳ್ಳಿರಿಸಿದಿರಿ. ‘ಹೊರಕಡೆ’ ಎಂದರೇನು ಗೊತ್ತಾ? ಬೆಂಗಳೂರಿನ ನೀವು ಕಕ್ಕಸು ಎಂದು ಮೂಗು ಮುಚ್ಚಿಕೊಂಡು ಕರೆಯುತ್ತೀರಲ್ಲ ಅದು. ಬೇರೆಲ್ಲಾ ಚೆಂಬುಗಳು ರಾಜಾರೋಷವಾಗಿ ಜಂಭದಿಂದ, ಕೈ ಬೀಸಿಕೊಂಡು ಎಲ್ಲರ ನಡುವೆ, ಅಡುಗೆ ಮನೆ, ದೇವಸ್ಥಾನದ ಗರ್ಭಗುಡಿ, ಹೀಗೆ ಎಲ್ಲೆಂದರಲ್ಲಿ ಓಡಾಡುತ್ತಿರುವಾಗ ನಾನು ಈ ಕತ್ತಲೆಯ ಮೂಲೆಯಲ್ಲಿ ಕುಕ್ಕರು ಬಡಿದಿರಬೇಕು. ನಿಮಗೆ ನನ್ನ ಅಸ್ತಿತ್ವದ ಪ್ರಜ್ಞೆ ದಿನವೆಲ್ಲಾ ಇರೋಲ್ಲ, ಆದರೆ ಬೆಳಗಾಗುತ್ತಲೇ ನಾನು ಅವಶ್ಯಕವಾಗಿ ಬೇಕಾಗುತ್ತೇನೆ. ಒಂದು ಕ್ಷಣ ಕಣ್ಣಿಗೆ ಕಾಣಿಸದಿದ್ದರೆ ಭೂಮ್ಯಾಕಾಶ ಒಂದು ಮಾಡುವ ಹಾಗೆ ಕಿರಿಚಿಬಿಡುತ್ತೀರಿ. ನನ್ನಲ್ಲಿ ನೀರು ತುಂಬಿಕೊಂಡು ಹಾಡಿಗೋ, ಗುಡ್ಡಕ್ಕೋ, ಹೋಗಿ, ಅಲ್ಲಿ ಹಳುವಿನ ಹಿಂದೆ ಕುಳಿತು ಮೈ ಭಾರ ಕಡಿಮೆ ಮಾಡಿಕೊಳ್ಳುವ ತನಕ ನನ್ನ ನೆನಪು. ನಂತರ? ನಿನ್ನ ಅಪ್ಪ  ಹೇಲು.. ಅಲ್ಲಲ್ಲ, ಹೇಳುತ್ತಿದ್ದಾ ಹಾಗೆ, ‘ಸೂತಿಕಾ ದೂತಿಕಾಚೈವ ನದೀ ತೀರೇಚ ನಾವಿಕ. ಉಪಾಧ್ಯಾಯಶ್ಚ ವೈದ್ಯಶ್ಚ ಕಾರ್ಯಾಂತೇ ಅಪ್ಪ.... ಅಲ್ಲಲ್ಲ, ಅಪ್ರಯೋಜಕಃ’ ಅಂತ, ನಾನು ಯಾರಿಗೂ ಬೇಡವಾಗುತ್ತೇನೆ.’

ನನಗೆ ಅಚ್ಚರಿಯೋ ಅಚ್ಚರಿ. ‘ಅರೆ, ನಿಮಗೂ ಸಂಸ್ಕೃತ ಬರುತ್ತೆಯೇ ಚೆಂಬೇಶಪ್ಪ?’ ಕೇಳಿದೆ.

‘ಬರದೇ ಏನು? ನಿನ್ನ ಅಪ್ಪ  ಕಾಶಿ ಮತ್ತು ಶೃಂಗೇರಿಗಳಲ್ಲಿ ಸಂಸ್ಕೃತ ಕಲಿತು ಬಂದು, ನಿನ್ನ ತಲೆಯಲ್ಲಿ ತುಂಬಲು ಪ್ರಯತ್ನಿಸಲಿಲ್ಲವೇ? ಅವರು ಎಷ್ಟು ಹೇಳಿದರೇನು, ಗೋರ್ಕಲ್ಲ ಮೇಲೆ ಮಳೆಗರೆದಂತೆ ನೀನು ನಿರ್ಲಕ್ಷಿಸಿಬಿಟ್ಟೆ. ಉದರಂಭಣಕ್ಕೆ ಸಂಸ್ಕೃತವೊಂದು ಚಲಾವಣೆಯಿಲ್ಲದ ನಾಣ್ಯ ಎಂದು ಹೇಳಿ, ಅಂಡು ತಿರುಗಿಸಿಕೊಂಡು ಹೋದವನಲ್ಲವೇ ನೀನು? ಆದರೆ ನಾನು? ದಿನವೆಲ್ಲಾ ಏನು ಕೆಲಸ ಹೇಳು? ನಿನ್ನ ಅಪ್ಪ  ದಿನಾಲೂ ಹೇಳುವುದನ್ನು ಕೇಳಿ ಕೇಳಿ ಕಂಠಸ್ಥವಾಗಿದೆ. ಅದೇ ಕೈಯಲ್ಲಿ ನಾನಿರುವಾಗ ಒಂದೇ ಒಂದು ಸಂಸ್ಕೃತ ಪದ ಬಾಯಿಯಿಂದ ಹೊರ ಬಂದರೆ ಹೇಳು’ ಮತ್ತೆ ಆಪಾದನೆ! ನಾನು ಬಾಯಿ ಮುಚ್ಚಿಕೊಂಡೇ ಇದ್ದೆ. ತುಸು ಹೊತ್ತು ಎರಡೂ ಕಡೆಯಿಂದ ವಿರಾಮ. ಕೊನೆಗೆ ನಾನೇ ಮಾತು ಮುಂದುವರಿಸಿದೆ,

‘ಗೊತ್ತು ಚೆಂಬಣ್ಣ, ಅಲ್ಲಲ್ಲ, ಚೆಂಬೇಶಪ್ಪ. ನಾನು ನಿಮ್ಮ ಋಣವನ್ನು ಸಂದಾಯ ಮಾಡೋಣ, ಎಂದೇ ಇಲ್ಲಿಗೆ ಬಂದಿದ್ದು. ಬೇರೆ ಚೆಂಬುಗಳ ಹಾಗೆ ನಿಮಗೆ ನಾವು ಗೌರವ ಕೊಡಲಿಲ್ಲ. ಹಂಡೆಯೊಳಗಿನ ನೀರು ತೆಗೆಯಲೂ ನಿಮ್ಮನ್ನು ಬಳಸುತ್ತಿರಲಿಲ್ಲ. ಬೇರೆ ಚೆಂಬಿನಿಂದ ತುಂಬಿಕೊಂಡು, ನಿಮ್ಮೊಳಗೆ ಸುರಿಯುತ್ತಿದ್ದೆವು. ನಿಮ್ಮನ್ನು ಒಂದು ನಿಕೃಷ್ಟ ಜಾತಿಯವರಂತೆ ನಡೆಸಿಕೊಳ್ಳುತ್ತಿದ್ದರು’ ನಾನು ತಪ್ಪೊಪ್ಪಿಕೊಂಡೆ. ತಪ್ಪನ್ನು ಒಪ್ಪಿಕೊಳ್ಳುವುದೂ ಒಂದು ದೊಡ್ಡತನ!

‘ದೇಹವನ್ನು ಮುದ್ದೆ ಮಾಡಿಕೊಂಡು ಬಚ್ಚಲಿನ ಮೂಲೆಯಲ್ಲಿ ಕುಳಿತ ನನ್ನನ್ನು ಉದ್ದೇಶಿಸಿ, ನನ್ನ ಮಹತ್ವವನ್ನು ಅರಿತು, ಕನಿಷ್ಠ ಬಾಯಿ ಮಾತಲ್ಲಾದರೂ ಅಯ್ಯೋ, ಪಾಪ, ಅಂದೆಯಲ್ಲ, ಸಾಕು ಬಿಡು, ನನಗಿನ್ನೇನು ಬೇಕು? ನಾವೇನು ನಿಮ್ಮ ಹಾಗೆ ಆಸೆಯ ಕೂಪದಲ್ಲಿ ಬಿದ್ದವರೇ? ತಿಳಕೋ, ನೀವು ಬೇರೆ ಚೆಂಬುಗಳನ್ನು ಆಗಾಗ ಹುಣಸೆಹಣ್ಣು ಬಳಿದು, ತುಸು ಕಾಲ ಬಿಟ್ಟು,

ನಂತರ ಬೂದಿಯಿಂದ ತಿಕ್ಕಿ ತೊಳೆಯುತ್ತೀರಿ. ಅವು ಥಳಪಳ ಹೊಳೆಯುತ್ತಾ, ಮುಖದ ತುಂಬಾ ನಗು ತುಂಬಿಕೊಂಡು, ಲೇವಡಿಗೆಂಬಂತೆ ನನ್ನತ್ತ ನೋಡಿ ನನ್ನ ಹೊಟ್ಟೆ ಉರಿಸುತ್ತವೆ. ದೀಪಾವಳಿ ಬಂತೆಂದರೆ ಹಂಡೆ, ಚೆಂಬುಗಳನ್ನೆಲ್ಲಾ ಶುಚಿಗೊಳಿಸಿ, ಬೂದಿ, ಬಣ್ಣದ ನಾಮ ಬಳಿದು, ಅದಾವುದೋ ಬಳ್ಳಿ ಸುತ್ತಿ ಶೃಂಗರಿಸುತ್ತೀರಿ. ನಾನೇನು ಪಾಪ ಮಾಡಿದ್ದೇನೆ? ನನಗೇಕೆ ಇತರರಿಗೆ ಸಿಗುವ ಆಕರಾಸ್ಥೆ ಸಿಗದು. ನನ್ನ ಕರ್ಮ ಎಂದು ಕೊರಗುತ್ತಾ ಕುಳಿತುಕೊಂಡಿದ್ದರೂ ಆಗಾಗ ನೆನಪುಗಳ ಭರ್ಜಿ ನನ್ನನ್ನು ಚುಚ್ಚುತ್ತದೇ ಇರುತ್ತದೆ. ಅದಿರಲಿ, ನೀವು ಮನುಷ್ಯರು, ಇತರರ ಮನಸ್ಥಿತಿಯನ್ನೂ ಅರಿತುಕೊಳ್ಳಬೇಕು. ಶುಭ ಬೆಳಗ್ಗೆ, ಇನ್ನೂ ರವಿ ಕಣ್ಣು ಬಿಟ್ಟಿರದ ಹೊತ್ತಿನಲ್ಲಿ, ಮಂಜಾನೆಯ ನಿದ್ರೆಯ ಸುಖವನ್ನು ಅನುಭವಿಸಬೇಕು ಎನ್ನುವ ಹೊತ್ತಿನಲ್ಲಿ, ನನ್ನನ್ನು ಎಚ್ಚರಿಸಿಬಿಡುತ್ತೀರಿ. ನನ್ನಲ್ಲಿ ತಣ್ಣಗಿರುವ ನೀರನ್ನು ತುಂಬಿಕೊಂಡು, ಎಡಗೈಯಲ್ಲಿಯೇ ಹಿಡಿದುಕೊಂಡು, ಆಗ ಜಗತ್ತಿನ ಎಲ್ಲಾ ಸಮಸ್ಯೆಗಳಿಗಿಂತ ಬಹಿರ್ದೆಶೆಯೊಂದೇ ದೊಡ್ಡ ಸಮಸ್ಯೆ ಎಂದು ಭಾವಿಸುತ್ತಾ ಗುಡ್ಡದ ಅಥವಾ ಮಕ್ಕಿಯ ಕಡೆಗೆ ದೌಡಾಯಿಸುತ್ತೀರಿ. ನನ್ನನ್ನು ಜಾರದಂತೆ, ಉರುಳದಂತೆ ಅಲ್ಲೆಲ್ಲೋ ಇಟ್ಟು, ಪಾಣಿಪಂಚೆ ಎತ್ತಿ ನನ್ನೆದುರೇ ನಾಚಿಕೆ ಇಲ್ಲದೇ ಕುಳಿತುಬಿಡುತ್ತೀರಿ. ನಾನು ಎಷ್ಟು ಹೊತ್ತು ತಾನೇ ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳಲು ಆಗುತ್ತದೆ? ನಂತರ ಆ ಹೇಸಿಗೆಯನ್ನು ಮತ್ತೆ ನೋಡಬೇಕು. ಏನನ್ನು ನೋಡಬಾರದೋ ಅದನ್ನು ನೋಡುವ ಕರ್ಮವನ್ನು ವಹಿಸಬೇಕಾದ ನನ್ನನ್ನು ಯಾಕೆ ಇಷ್ಟು ನಿಕೃಷ್ಟವಾಗಿ ನೋಡುತ್ತಾರೋ ತಿಳಿಯದು.'

ನಾನು ಅದರ ನೋವನ್ನು ಕಡಿಮೆ ಮಾಡಲು ಎಂದೆ, 'ನನಗೆ ತಿಳಿಯುತ್ತದೆ ಚೆಂಬೇಶಪ್ಪ. ಅಸ್ಪೃಶ್ಯತೆ, ಜಾತಿ ಪದ್ಧತಿಗಳು ಮಾನವ ಲೋಕದಲ್ಲಿ ಮಾತ್ರವಲ್ಲ, ಚೆಂಬುಗಳ ಸಾಮ್ರಾಜ್ಯದಲ್ಲಿಯೂ ಇವೆ ಎಂಬುದು ನನಗೂ ದುಃಖ ತರುವ ವಿಷಯ.'

'ಸರಿ ಸೂರಿ, ನೀನೀಗ ಬೆಂಗಳೂರಿಗನೇ ಆಗಿದ್ದೀಯಾ ಬಿಡು. ಅಲ್ಲಿಯ ಚೆಂಬುಗಳಿಗೂ ನನ್ನ ಪರಿಸ್ಥಿತಿ ಇದೆಯೇ? ನನ್ನಂತಹ, ನೋವಿನಲ್ಲಿಯೇ ಬಾಳು ಸವೆಸುವ ಚೆಂಬುಗಳು ಅಲ್ಲೂ ಇವೆಯೇ?' ಪ್ರೀತಿಯಿಂದ ಕೇಳಿದ ಚೆಂಬಣ್ಣ.

'ಇಲ್ಲ ಚೆಂಬೇಶಪ್ಪ, ಅಲ್ಲಿಯ ಜನ ಇಲ್ಲಿನ ಹಾಗೆ ಬೆಳಗ್ಗೆ ಚೆಂಬು ತೆಗೆದುಕೊಂಡು ದೂರಕ್ಕೆ ಹೊರಡುವುದಿಲ್ಲ. ಅಲ್ಲಿ ಶೌಚಾಲಯ, ಕಕ್ಕಸು ಮನೆ ಎಂಬುದಿರುತ್ತವೆ. ಇಂಗ್ಲಿಷ್ ಓದಿದ ಜನ ಅದನ್ನು ರೆಸ್ಟ್ ರೂಮ್, ಟಾಯಲೆಟ್, ವಾಷ್ ರೂಮ್ ಎಂದು ಕರೆಯುತ್ತಾರೆ' ಎಂದೆ.

'ರೆಸ್ಟ್ ರೂಂ ಎಂದರೆ ವಿಶ್ರಾಂತಿ ಗೃಹವಲ್ಲವೇ? ಯಾಕೆ ಅಂತಹ ಹೆಸರು?' ಎಂದು ಚೆಂಬೇಶಪ್ಪ ಕೇಳಿದಾಗ ಏನು ಉತ್ತರಿಸಬೇಕೋ ತಿಳಿಯದು. ವಿದೇಶದವರು ಏನೇನೋ ಹೆಸರಿಡುತ್ತಾರೆ. ಅದಕ್ಕೆ ಲಾಜಿಕ್ ಇರೋಲ್ಲ.

'ಅಲ್ಲಿಯ ಈ ಕೋಣೆಗಳು ಮನೆಯೊಳಗೇ, ಅದೂ ಕೋಣೆಯೊಳಗೇ ಇರುತ್ತವೆ. ಅಲ್ಲಿ ನಲ್ಲಿ ಎಂಬುದೊಂದು ಇರುತ್ತದೆ. ಅದರ ಕಿವಿ ತಿರುವಿದರೆ ನೀರು ಬರುತ್ತದೆ. ನಿನಗೆ ಗೊತ್ತಿಲ್ಲ ಅಲ್ಲವಾ? ನಗರಗಳಲ್ಲಿ ನಿಮ್ಮ ಹಳ್ಳಿಗಳಲ್ಲಿ ಇರುವ ಹಾಗೆ ಬಾವಿಗಳಿರೋಲ್ಲ. ಎಲ್ಲಿಂದಲೋ ನಲ್ಲಿಯ ಮೂಲಕ ನೀರು ದೊರಕಿಸುತ್ತಾರೆ. ಅದನ್ನು ನಮ್ಮ ಮನೆಗಳಲ್ಲಿ ಅಳವಡಿಸಿಕೊಳ್ಳಬೇಕು. ಮತ್ತೆ ಅದಕ್ಕೆ ಕಾಸು ಕೊಡಬೇಕು.'

‘ರಾಮ ರಾಮಾ’ ಎಂದನು ಚೆಂಗೇಶಪ್ಪ. ‘ನೀರಿಗೂ ಹಣ ಕೊಡಬೇಕೇ? ಅದು ಮನುಷ್ಯ-ಪ್ರಾಣಿಗಳಿಗಾಗಿ, ತರುಲತೆಗಳಿಗಾಗಿ ಪ್ರಕೃತಿ ನೀಡಿದ ಕೊಡುಗೆ ಅಲ್ಲವೇ?’

‘ಅದು ಹಳ್ಳಿಗಳಲ್ಲಿ ನಗರಗಳಲ್ಲಿ ಕುಂತರೂ, ನಿಂತರೂ ಶುಲ್ಕ ಕೊಡಬೇಕು. ಅಲ್ಲಿ ಇಲ್ಲಿಯ ಹಾಗೆ ಚೆಂಬನ್ನು ಬಳಸುವುದಿಲ್ಲ. ನಲ್ಲಿಯಿಂದ ನೀರು ವೇಗವಾಗಿ ಹೊರಬರುತ್ತದೆ. ಅದನ್ನು ಜೆಟ್ ಎನ್ನುತ್ತಾರೆ. ಅದರಿಂದ ಜನ ತೊಳೆದುಕೊಳ್ಳುತ್ತಾರೆ’ ನಾನು ವಿವರಿಸಿದೆ. ‘ಅದೂ ಅಲ್ಲದೇ ದೇಹದ ಭಾರ ಇಳಿಸಿದ್ದಕ್ಕೆ ಹೋದವರು ಕಾಸನ್ನೂ ಕೊಡಬೇಕು. ಅದನ್ನು ಪಬ್ಲಿಕ್ ಟಾಯಲೆಟ್ ಅನ್ನುತ್ತಾರೆ. ಎಷ್ಟೋ ಜನಕ್ಕೆ ಅದೇ ಬ್ರೆಡ್ ಅಂಡ್ ಬಟರ್’ ಎಂದೆ.

‘ಟಾಯಲೆಟ್ ಮತ್ತು ಬ್ರೆಡ್ ಅಂಡ್ ಬಟರ್ ಎಂದರೇನು? ನನಗೆ ಗೊತ್ತಿಲ್ಲದ ಭಾಷೆಯಲ್ಲಿ ಮಾತನಾಡುತೀಯಪ್ಪ’ ಎಂದು ಆಕ್ಷೇಪಿಸಿತು. ಅದನ್ನು ವಿವರಿಸಿ ಹೇಳುವುದು ಸೂಕ್ತವಲ್ಲ ಎನಿಸಿ, ‘ಹೋಗ್ಲಿ ಬಿಡು. ಇದು ನಗರಕ್ಕೆ ಸಂಬಂಧಿಸಿದ ವಿಷಯ’ ಎಂದೆ.

‘ಓಹೋ, ಹಾಗೂ ಉಂಟಾ? ನಂಬೋಕೇ ಆಗೋಲ್ಲ.’ ಅದಕ್ಕೆ ಖುಷಿಯಾಯಿತೆನಿಸುತ್ತದೆ. ‘ಸರಿ, ನೀನು ವಿದೇಶಗಳಿಗೂ ಹೋಗಿದ್ದೆ ಎಂದು ಕೇಳಿದ್ದೆ. ಅಲ್ಲಿ ನನ್ನಂಥವರ ಪರಿಸ್ಥಿತಿ ಹೇಗಿದೆ?’

‘ಚೆಂಬೇಶಪ್ಪ, ಅಲ್ಲಿ ಶೌಚಾಲಯಗಳಲ್ಲಿ ಚೆಂಬೂ ಇರುವುದಿಲ್ಲ, ನಲ್ಲಿಯೂ ಇರುವುದಿಲ್ಲ. ನೀರನ್ನೂ ಬಳಸುವುದಿಲ್ಲ. ಅಲ್ಲಿ ಟಾಯಲೆಟ್ ಪೇಪರ್ ಎಂದೊಂದು ರೋಲ್ ಇರುತ್ತದೆ. ಜನ ಆ ಹಾಳೆಯಿಂದ ಒರೆಸಿಕೊಂಡು, ಅಲ್ಲಿರುವ ಡಬ್ಬಕ್ಕೆ ಅಥವಾ ಶೌಚದ ಹುಂಡಿಗೇ ಹಾಕಿಬಿಡುತ್ತಾರೆ’ ನಾನು ವಿವರಿಸಿದೆ.

‘ಹೌದಾ? ಹಾಗಂತ್ಯಾ? ಸರಿ, ಆ ಪೇಪರು, ಅಂದರೆ ಕಾಗದ ಅಂದೆಯಲ್ಲ, ಅದು ವಾರ್ತಾ ಪತ್ರಿಕೆ, ಅಂದರೆ ನ್ಯೂಸ್ ಪೇಪರ್ ಅಂತಾರಲ್ಲ, ಹಾಗಿರುತ್ತದಾ? ಮಕ್ಕಳು ಮನೆಯಲ್ಲಿ ಇಶ್ಶಿ ಮಾಡಿಕೊಂಡಾಗ ಅದನ್ನ ತೆಗೆಯಲು ದಿನಪತ್ರಿಕೆಯ ಚೂರುಗಳನ್ನು, ಆಹ್ವಾನ ಪತ್ರಿಕೆಯ ಹಾಳೆಗಳನ್ನು ಬಳಸುತ್ತಿದ್ದರಲ್ಲ, ಹಾಗೆಯೇ ಇರುತ್ತದಾ?’ ಎಂದು ಕೇಳಿತು ಅದು.

‘ಇಲ್ಲ ಚೆಂಬೇಶಪ್ಪ, ಅಲ್ಲಿ ಈ ಕೆಲಸಕ್ಕೆ ಅಂತಲೇ ತೆಳುವಾದ, ಬಿಳಿಯಾದ ಕಾಗದಗಳ ರೋಲ್‌ಗಳು ಇರುತ್ತವೆ’ ಉತ್ತರಿಸಿದೆ. ‘ನಾವು ಚಿಕ್ಕ ವಯಸ್ಸಿನಲ್ಲಿ ಬರೆಯಲು ಹಾಳೆಗಳನ್ನು, ಪುಸ್ತಕಗಳನ್ನು ಕೊಳ್ಳಲಾಗದೇ ಸಿಕ್ಕ ಸಿಕ್ಕ ಕಾಗದದ ಚೂರುಗಳನ್ನು ಬಳಸಿಕೊಳ್ಳುತ್ತಿದ್ದೆವು. ಆದರೆ ಈ ದೇಶಗಳಲ್ಲಿ ಹೀಗೆ ಬಿಳಿ ಹಾಳೆಯನ್ನು ವ್ಯರ್ಥ ಮಾಡುವುದನ್ನು ಕಂಡು ಬೇಜಾರೇ ಆಗುತ್ತದೆ. ಇರಲಿ ಬಿಡು’ ಎನ್ನುವಷ್ಟರಲ್ಲಿ ಅಮ್ಮ ಅಲ್ಲಿಗೆ ಬಂದು ಕೇಳಿದಳು, ‘ಏನೋ ಸೂರಿ, ಎಂತ ಮಾಡ್ತಾ ಇದ್ಯಾ ಇಲ್ಲಿ?’

‘ಬೇರೇನೂ ಇಲ್ಲಮ್ಮ, ಚೆಂಬೇಶಪ್ಪನವರನ್ನು ಮಾತನಾಡಿಸ್ತಾ ಇದ್ದೆ ಅಷ್ಟೇ’ ಎಂದುತ್ತರಿಸಿದೆ.

‘ಸರಿ ಸರಿ, ನಿಮ್ಮ ಚೆಂಬೇಶಪ್ಪನವರಿಗೆ ಹೇಳು, ನಾಳೆಯಿಂದ ನಮಗೆ ಅವರ ಸೇವೆ ಬೇಕಾಗಿಲ್ಲ, ನಮ್ಮ ಮನೆಯಲ್ಲಿ ಶೌಚಾಲಯ ಕಟ್ಟಿಸಿದ್ದೇವೆ’ ಅಂತ ಎಂದಳು. ನಾನು ಅದನ್ನು ಮತ್ತೊಮ್ಮೆ ಚೆಂಬೇಶಪ್ಪನಿಗೆ ಅರುಹಬೇಕಿರಲಿಲ್ಲ.

❁

*ನಮ್ಮನೆಯ ಬಿಗ್ ಬಾಸ್*

# ಸೋಲು ಖಚಿತ.... ಶಿಕ್ಷೆ ಉಚಿತ

**- ಸುಧಾ ಸರನೋಬತ್**

**''ರೀ,** ಅಟ್ಟದ ಮೇಲಿರುವ, ಹೊಸ ಲಟ್ಟಣಿಗೆ ಮತ್ತು ಚಪಾತಿ ಮಣೆ ಕೆಳಗೆ ತೆಕ್ಕೊಡಿ, ಹಾಗೇ, ದಸರಾ ಬೊಂಬೆ, ಅದಕ್ಕೆ ಬೇಕಾಗುವ ಸ್ಟಾಂಡ್. ಅಟ್ಟದ ಮೇಲೆ ನೆಟ್ಟಗೆ ಇಟ್ಟೀದೀನಿ ಅದನ್ನೂ ತಕ್ಕೊಡಿ.''

ಈ ಟಾಸ್ಕ ಕೊಡುವ ನನ್ನ ಮಡದಿ, ಯಾವ ಬಿಗ್ ಬಾಸ್‌ಗಿಂತ ಕಮ್ಮಿಯಿಲ್ಲ....

**ಒಬ್ಬ ಬಿಗ್ ಬಾಸ್ ಜತೆ ಏಗುತ್ತಿರುವಾಗಲೇ ಇನ್ನೊಂದು ಬಿಗ್ ಬಾಸ್ ಬರಬೇಕೆ?**

'ರೀ, ಈ ಹಾಗಲಕಾಯಿ ಸಿಪ್ಪೆ ಮುಳ್ಳು ಎಲ್ಲಾ ನೀಟಾಗಿ ತೆಗೆದು ಸಣ್ಣಗೆ ಹೆಚ್ಚಿಡಿ, ಗೊಜ್ಜು ಮಾಡತೀನಿ.'' ಶೆಟ್ಟರ ಅಂಗಡಿಗೆ ಹೋಗಿ ಒಳ್ಳೆ ಬೆಲ್ಲ, ಎಳ್ಳು ಕಡಲೇ ಬೀಜ, ಕಡಲೇ ಪೊಪ್ಪು, ಒಣ ಕೊಬ್ರಿ ಎಲ್ಲಾ ತೊಗೊಂಡ್ ಬನ್ನಿ, ಹೋದ ಸಲ ನೀವು ತಂದ ಬೆಲ್ಲ, ಒಣ ಕೊಬ್ಬರಿ ಒಂದೂ ಸರಿ ಇರಲಿಲ್ಲ. ಖಮಟು ಕೊಬ್ರಿ, ಜಿಗುಟು ಬೆಲ್ಲ ತಂದಿದ್ರಿ... ಕಳ್ಳೇ ಬೀಜ ಎಲ್ಲ ಹುಳುಕು.''

ಇಂಥ ಟಾಸ್ಕ್ ಕಳೆದ 30 ವರ್ಷಗಳಿಂದ ಎದುರಿಸುತ್ತಿದ್ದೆ. ಸರಿಯಾಗಿ ನಿಭಾಯಿಸಿದ್ದೇನೆ. ಆದರೆ ಅದಕ್ಕೆ ಪ್ರತಿಫಲವೆಂಬಂತೆ, ನಮ್ಮ ಇನ್ನೊಬ್ಬ ಬಿಗ್ ಬಾಸ್ ನಮ್ಮ ಅತ್ತೆ ನಮ್ಮನೆಗೆ ಬಂದು ಠಿಕಾಣಿ ಹೂಡಿದ್ದಾರೆ! ಯಜಮಾನರು ಹೇಳಿದ ಮಾತು ಸರಿಯಾಗಿ ಪಾಲಿಸುವುದಿಲ್ಲ.. ರಿಟಾಯರ್ಡ್ ಆದರೂ ಕಾಮನ್‌ಸೆನ್ಸ್, ಜನರಲ್ ನಾಲೆಡ್ಜ್ ಒಂದೂ ಬರಲಿಲ್ಲ. ಅದಕ್ಕೇ, ನನ್ನ ಅರ್ಧಾಂಗಿ, ತಮ್ಮ ಅಮ್ಮನನ್ನು ಕರೆಸಿ, ನನಗೆ ಬುದ್ಧಿ ಹೇಳಿಸುವ, ಅವಿರತ ಪ್ರಯತ್ನ ಮಾಡುತ್ತಲೇ ಇದ್ದಾಳೆ. 50 ವರ್ಷಗಳಿಂದ ನಮ್ಮ ಮಾವನವರು, ಯಾವ ಸ್ಪರ್ಧಿಗಿಂತಲೂ ಕಮ್ಮಿಯಿಲ್ಲದೆ, ನಮ್ಮತ್ತೆ ಕೊಟ್ಟ ಎಲ್ಲಾ ಟಾಸ್ಕ್ ಎದುರಿಸಿ ಈಗ ಸೋತು ಸುಣ್ಣವಾಗಿ ಜೋರಾಗಿ ಅಳಲೂ ಆಗದೆ, ಮೂಲೆ ಹಿಡಿದು ಕೂತಿದ್ದಾರೆ. ಈ ಬಿಗ್ ಬಾಸ್ ಟಾಸ್ಕ್‌ಗಳು ಇನ್ನು ನಿಂತಿಲ್ಲ....

ನನ್ನ ಯೋಚನಾ ಲಹರಿಗೆ ಬ್ರೇಕ್ ಬಿತ್ತು. ಒಳಗಿನಿಂದ ಮಡದಿಯ ಕೂಗು, ''ರೀ, ಅಮ್ಮನಿಗೆ ಡಾಕ್ಟರ್ ಹತ್ತಿರ ಕರೆದೊಯ್ದು ಎಲ್ಲ ಟೆಸ್ಟ್ ಮಾಡಿಸಬೇಕು, ಬೇಗ ರೆಡಿಯಾಗಿ, ಮುಂದಿನ ವಾರ ಆಪರೇಷನ್ ಮಾಡಿಸಬಹುದು. ಹಾಗೇ ದುಡ್ಡು ರೆಡಿ ಇಟ್ಕೊಳಿ, ಆಪರೇಶನ್ನಿಗೆ ಸುಮಾರು ಖರ್ಚಾಗಬಹುದು. ನಿಮ್ಮ ದುಡ್ಡು, ಅವರು ತಮ್ಮ ಹಳೇಮನೆ (ಅದಕ್ಕೆ ಮೂರು ಸಾವಿರವೂ ಬರುವುದಿಲ್ಲ) ಮಾರಿದ ಮೇಲೆ ಕೊಡ್ತಾರೆ, ಯೋಚನೆ ಮಾಡಬೇಡಿ.''

ಇದು ''ಭಯಂಕರ ಟಾಸ್ಕ್! ಅವರ ಹಳೇಮನೆ ಎಷ್ಟು ಹಳೆಯದಾಗಿದೆಯೆಂದರೆ, ಇರುವ ಮೂರು ಕೋಣೆಯಲ್ಲಿ ಎರಡು ಕೋಣೆಗಳೂ ಮಳೆಗೆ ಬಿದ್ದು ಹೋಗಿವೆ, ಒಂದೇ ಕೋಣೆಯಲ್ಲಿ ಅತ್ತೆ + ಮಾವನ ವನವಾಸ! ಪುಕ್ಕಟೆ ಕೊಟ್ರೂ ಯಾರೂ ಖರೀದಿಸಲಾರದ

ಸ್ಥಿತಿಯಲ್ಲಿ ಸ್ಮಶಾನದ ಗೋಡೆಗೆ ಹೊಂದಿಕೊಂಡ ಮನೆ! ವೈಕುಂಠವಾಸಿಯಾದರೆ ಆಂಬುಲೆನ್ಸ್ ಖರ್ಚಿಲ್ಲದೆ ಮುಂದಿನ ಕೆಲಸ ಸುಲಭವಾಗಿ ಸಾಗುತ್ತೆ ಎನ್ನುವ ನಂಬಿಕೆಯಿಂದ ನಮ್ಮ ಮಾವ ಆ ಮನೆಯ ಮೇಲೆ ಪ್ರಾಣ ಇಟ್ಕೊಂಡಿದ್ದಾರೆ! ಇದು ಅವರ ಅಂತಿಮ ಟಾಸ್ಕ್!

ಇನ್ನು ಟಾಸ್ಕಗಳಲ್ಲಿ ಅತಿ ದೊಡ್ಡದು ಎಂದರೆ ನನ್ನ ಮಡದಿಯ 7 ಜನ ಸೋದರಿಯರಿಗೆ ಗಂಡು ಹುಡುಕಿ ಮದುವೆ ಮಾಡಿದ್ದು. ಅವರೋ ಈ ಗಂಡು ಬೇಡಾ, ಆ ಗಂಡು ಬೇಡಾ ಎಂಬ ಬಿಂಕದವರು. ಅಂತೂ ನಾ ಗೆದ್ದೆ! ವರ ಹುಡುಕಿ, ಮದುವೇನೂ ಮಾಡಿದೆ! ನಮ್ಮಾವ ಅಷ್ಟೋ ಇಷ್ಟೋ ಹಣ ಕೊಟ್ಟರು. ಮಿಕ್ಕಿದ್ದನ್ನು ನಾನೇ ಭರಿಸಿದೆ. ಇಂಥ ಅದ್ಭುತ ಟಾಸ್ಕ್ ಎದುರಿಸುವಾಗ, ಎಷ್ಟೊಂದು ಅವಮಾನ, ಕಷ್ಟ ನಷ್ಟ ಅನುಭವಿಸಿದ್ದೇನೆಂಬುದು ನನಗೆ ಮಾತ್ರ ಗೊತ್ತು!

ನನ್ನ ನಾದಿನಿಯರಲ್ಲಿ ಒಂದಿಬ್ಬರು ತಮ್ಮ ಗಂಡನೊಡನೆ ಹೊಂದಿ ಬಾಳಲಾಗದೆ, ವಾಪಸ್ ನಮ್ಮ ಮನೆಗೇ (ಅದು, ಅವರ ತವರುಮನೆ ಎಂದೇ ಭಾವಿಸಿ) ಬಂದು ಕುಳಿತಿದ್ದಾರೆ. ಅವರ ಸಂಸಾರ ಸರಿಮಾಡಿಸುವ ಟಾಸ್ಕ್, ನಿಭಾಯಿಸಿ ನನ್ನ ಸಂಸಾರ ಹರಿದು ಚಿಂದಿಯಾಗಿದೆ. ನಮ್ಮಿಬ್ಬರಲ್ಲಿ ದಿನಂಪ್ರತಿ ಜಗಳ. ನಮ್ಮ ಬಿಗ್ ಬಾಸ್ ಜಗಳ, ನಾನು ಹಿಮಾಲಯಕ್ಕೆ ಹೊರಡುವ ದಿನಗಳು ದೂರವಿಲ್ಲ! ಯಾರಾದರೂ ಟಿಕಿಟ್ಟು ಕೊಟ್ಟರೆ!!

ಬಿಗ್ ಬಾಸ್ನಲ್ಲಿ, ಸ್ಪರ್ಧಿಗಳಿಗೆ ಒಳ್ಳೆಯ ಆಹಾರ, ಹೊಸ ವಸ್ತ್ರ, ದೀಪಾವಳಿಯ ಮೃಷ್ಟಾನ್ನ ಭೋಜನ, ಸೆಲಬ್ರಿಟಿಗಳಿಂದ ಉಚಿತ ಮನರಂಜನೆ... ಇವೆಲ್ಲಾ ಉಂಟು! ಆದರೆ ಇಲ್ಲ ನನಗೆ, ಎಲ್ಲಾದಕ್ಕೂ ಬೈಗುಳವೇ ನಂಟು!

ಬಿಗ್ ಬಾಸ್‌ನಲ್ಲಿ ಕೇವಲ ನೂರು ದಿನ, ಆದರೆ ಇಲ್ಲಿ ನಾನು ಆಜೀವ ಶಿಕ್ಷೆ ಅನುಭವಿಸುತ್ತಿದ್ದೇನೆ... ಇಲ್ಲಿ ಗೆಲ್ಲುವ ಪ್ರಶ್ನೆಯೇ ಇಲ್ಲ..

ಸೋಲು ಖಚಿತ... ಶಿಕ್ಷೆ ಉಚಿತ.

''ರೀ...''

ನಮ್ಮ ಬಿಗ್ ಬಾಸ್ ನಿಂದ ಬುಲಾವ್ ಬಂದಿದೆ ಹೊರಡುತ್ತೇನೆ.

## ಬಾಲ್ಯದ ಕಥೆ

ನಾವೆಲ್ಲಾ ಚಿಕ್ಕವರಿದ್ದಾಗ ನಮ್ಮ ಮನೆಯ ದೊಡ್ಡ ಹಿತ್ತಲಿನಲ್ಲಿ ಆಗಾಗ ಆಟಾಡುತ್ತಿದ್ದೆವು. ಅಲ್ಲಿ ಮರಗಳಲ್ಲಿ ವಿಧವಿಧವಾದ ಹಕ್ಕಿಗಳು ಬಂದು ಕೂತಿರುತ್ತಿದ್ದವು. ಅವುಗಳ ಕಿಚಿಪಿಚಿ ಭಾಷೆ ನಮಗಂತೂ ಅರ್ಥವಾಗುತ್ತಿರಲಿಲ್ಲ. ಆದರೆ ಒಂದು ಹಕ್ಕಿ ಕೂಗುವುದು ಮಾತ್ರ ಈ ರೀತಿ ಕೇಳಿಸುತ್ತಿತ್ತು.

"ಮುತ್ತಿನ್ ಶೆಟ್ಟೀ ತೊರೆ ತೊರೆ ತೊರೆ"

ಅದು ಎಷ್ಟು ಸಾರಿ ಕೂಗಿದರೂ ಯಾವ್ಯಾವತ್ತು ಕೂಗಿದರೂ ಹೀಗೇ ಕೇಳುತ್ತಿತ್ತು. ನಾವೆಲ್ಲಾ ಅದಿಕ್ಕೆ ಮುತ್ತಿನಶೆಟ್ಟಿ ಹಕ್ಕಿ ಅಂತ ಹೆಸರಿಟ್ಟಿದ್ದೆವು. ಈ ಹಕ್ಕಿ ಯಾಕಮ್ಮ ಹೀಗೆ ಕೂಗುತ್ತೆ ಅಂತ ಅಮ್ಮನನ್ನು ಕೇಳಿದ್ದಾಗ ಅಮ್ಮ ಅದಕ್ಕೊಂದು ಕಥೆ ಕಟ್ಟಿದ್ದಳು.

ಒಂದು ಸಾರಿ ಮುತ್ತಿನ ಶೆಟ್ಟಿ ಎನ್ನುವವನು ತನ್ನ ಮನೆಯಲ್ಲಿದ್ದ ಬಂಗಾರವನ್ನು ಕರಗಿಸಿ ಮಗಳ ಮದುವೆ ಒಡವೆ ಮಾಡಿಸಲು ಗಂಟು ಕಟ್ಟಿಕೊಂಡು ತಗೊಂಡು ಹೋಗುತ್ತಿದ್ದನಂತೆ. ಆಗಲೂ ಈಗಿನಂತೆ ಕಳ್ಳ ಕಾಕರ ಭಯ ಇತ್ತು. ಮುತ್ತಿನಶೆಟ್ಟಿ ಬಂಗಾರ ತಗೊಂಡು ಹೋಗ್ತಿರೋದನ್ನು ನೋಡಿದ ಹಕ್ಕಿ ಮುಂದೆ ಕಳ್ಳ ಕಾಕರು ಇದ್ದಾರು ಹುಷಾರು ಅಂತ ಮುತ್ತಿನ ಶೆಟ್ಟಿ ತೊರೆ ತೊರೆ ತೊರೆ ( ಅಂದ್ರೆ ನಿಧಾನ, ಸಾವಧಾನ, ಎಚ್ಚರ ಅಂತ) ಕೂಗುತ್ತಿತ್ತಂತೆ.

# ‘ಬೇಡಿ’ಗಳಿಂದ ಮುಕ್ತಿ

**- ಎಚ್ ಶಾಂತರಾಜ ಐತಾಳ್**

**ದೆ**ಹಲಿಯ ಕೆಂಪುಕೋಟೆಯ ಗೋಡೆಯ ಮೇಲೆ ಬರೆದಿದ್ದಾರೆ; ಬಿಜಾಪುರದ ಗೋಲ್‌ಗುಂಬಜ್ ಗೋಡೆ ಮೇಲೆ ಬರೆದಿದ್ದಾರೆ; ವಿಧಾನಸೌಧದ ಶೌಚಾಲಯದ ಗೋಡೆ ಮೇಲೂ ಬರೆದಿದ್ದಾರೆ. ಏನು ಬರೆದಿದ್ದಾರೆ? – ‘ಗೋಡೆಯ ಮೇಲೆ ಬರೆಯ ಬೇಡಿ’ – ಅಂತ.

ಹಳೆಯ ಹಿಂದಿ ಸಿನೆಮಾದಲ್ಲಿ ಕರವಸ್ತ್ರತೊಟ್ಟ ನಾಟ್ಯಗಾತಿ ಕುಣಿಯುತ್ತಿರುವಾಗ ಅಶೋಕ್ ಕುಮಾರ್ ನಂತಹ ಹಿರಿಯ ನಟ ಚುಟ್ಟಾ ಸೇದುತ್ತಿರುತ್ತಾನೆ; ಖಳನಟನೊಬ್ಬ ಶರಾಬು ಕುಡಿಯುವುದರಲ್ಲಿ ಮಗ್ನನಾಗಿರುತ್ತಾನೆ. ಈ ದೃಶ್ಯ ಈಗ ಟಿ.ವಿ.ಯಲ್ಲಿ ಪ್ರಸಾರವಾದರೆ ಜೊತೆಯಲ್ಲಿ ಎಚ್ಚರಿಕೆಯ ಶಬ್ದಗಳೂ ಪ್ರತ್ಯಕ್ಷವಾಗುತ್ತವೆ – ಧೂಮಪಾನ ಆರೋಗ್ಯಕ್ಕೆ ಹಾನಿಕರ; ಕುಡಿತದ ಚಟದಿಂದ ದೂರವಿರಿ – ಇತ್ಯಾದಿ.

ನಗರದ ಕೆಲವು ರಸ್ತೆಗಳ ಮೇಲೆ ಆರಂಭದಲ್ಲೇ ಸ್ವಾಗತ ಫಲಕ ಪ್ರವೇಶವಿಲ್ಲಾ – ಎಂದು. ಇದನ್ನು ಅಕ್ಕಪಕ್ಕದಲ್ಲಿರುವ ಮನೆಗಳಾದ ‘ರೋಸ್ ವಿಲ್ಲಾ’ ‘ಜಾಸ್ಮಿನ್ ವಿಲ್ಲಾ’ ಗಳಂತೆಯೇ ಮನೆಗಳ ಹೆಸರಿರಬೇಕೆಂದುಕೊಂಡು ಮುಂದುವರಿದರೆ ಸಮಸ್ಯೆಯನ್ನು ಎದುರಿಸಬೇಕಾದೀತು. ಪ್ರಮುಖ ರಸ್ತೆಗಳ ಮೇಲೆಯೇ ಈ ನಕಾರಾತ್ಮಕ ಫಲಕಗಳದ್ದೇ ಸಾಮ್ರಾಜ್ಯ – ವೇಗಮಿತಿಯನ್ನು ಮೀರಬೇಡಿ; ಕುಡಿದು ವಾಹನ ಚಲಾಯಿಸಬೇಡಿ; ವೀಲಿಂಗ್ ಮಾಡಬೇಡಿ; ವಾಹನ ನಿಲುಗಡೆ ಮಾಡಬೇಡಿ; ಚಾಲಕನೊಡನೆ ಮಾತಾಡಬೇಡಿ; ಇದರ ಮೇಲೆ ಕಾಲಿಡಬೇಡಿ; ಹಾರ್ನಿಂಗ್ ಮಾಡಬೇಡಿ; ಓವರ್‌ಟೇಕ್ ಮಾಡಬೇಡಿ ಅಬ್ಬ ಎಷ್ಟೊಂದು ವೈವಿಧ್ಯಮಯ ‘ಬೇಡಿ’ಗಳು!

ಯಾರ ಉಸಾಬರಿಯೂ ಬೇಡ – ಜ್ಞಾನಾರ್ಜನೆಯನ್ನಾದರೂ ಮಾಡೋಣ ಅಂತ ವಾಚನಾಲಯಗಳಿಗೆ ಹೋದರೆ ಅಲ್ಲಿಯೂ ಈ ಬೇಡಿಗಳದೇ ದರ್ಬಾರ್. ‘ಪತ್ರಿಕೆಗಳಲ್ಲಿನ ಜಾಹೀರಾತುಗಳನ್ನು–ವ–ಲೇಖನಗಳ್ನು ಕತ್ತರಿಸಬೇಡಿ; ಪುಸ್ತಕಗಳ ಮೇಲೆ ಗೀಚಬೇಡಿ; ಲೈಬ್ರೆರಿ ಪುಸ್ತಕಗಳ ಒಳಪುಟಗಳನ್ನು ಹರಿಯಬೇಡಿ; ಹೊರಪುಟಗಳ ಮೇಲೆ ಬರೆಯಬೇಡಿ; ನಿಶ್ಶಬ್ದತೆಯನ್ನು ಪಾಲಿಸಲು ಮರೆಯಬೇಡಿ’ – ಒಂದೇ ಎರಡೇ!

ಇನ್ನು ಪುಣ್ಯ ಸಂಪಾದನೆ ಮಾಡೋಣ ಎಂದು ದೇವಾಲಯಗಳನ್ನು ಹೊಕ್ಕರೆ – ‘ಗಂಧವನ್ನು ಗೋಡೆಗಳಿಗೆ ಹಚ್ಚಬೇಡಿ; ಪ್ರಸಾದವನ್ನು ಬಿಕ್ಕಬೇಡಿ; ತೀರ್ಥವನ್ನು ನೆಕ್ಕಬೇಡಿ; ದೀಪಕ್ಕೆ ಹಾಕುವ ಎಣ್ಣೆಯ ಪಾತ್ರೆಯನ್ನು ತಲೆಯಮೇಲೆ ಮೂರು ಸಲಕ್ಕಿಂತ ಜಾಸ್ತಿ ಸುತ್ತಬೇಡಿ; ದಕ್ಷಿಣೆ ಕೊಡಬೇಡಿ; ಮಕ್ಕಳ ಕೈ ಬಿಡಬೇಡಿ’ – ‘ಬೇಡಿ’ಗಳ ಮೆರವಣಿಗೆ ನೋಡಿ ಬೇಸತ್ತು ದೇಗುಲದ ಮೂಲೆಯಲ್ಲಿ ಸ್ವಲ್ಪ ಆಯಾಸ ಪರಿಹಾರಕ್ಕಾಗಿ ನಿಂತಿದ್ದರೆ, ಅದೇ ಮೂಲೆಯಲ್ಲಿ ಭಜನೆ ನಡೆಯುತ್ತಿರುತ್ತದೆ ‘ಬಿಡಬ್ಯಾಡಿ ಬಿಡಬ್ಯಾಡಿ; ಬಿಟ್ಟು ಕೆಡಬ್ಯಾಡಿ ಕೆಡಬ್ಯಾಡಿ’.

ದೇವರದರ್ಶನ ಸಾಕು ಎಂದುಕೊಂಡು ಹೊರ ನಡೆಯುತ್ತಿರುವಾಗ ಅಲ್ಲಿನ ಸಭಾಂಗಣದಲ್ಲಿ ಹರಿಕಥಾ ಪ್ರವಚನ ನಡೆಯುತ್ತಿರುತ್ತದೆ. ಹರಿಕಥಾ ಶ್ರವಣದಿಂದ

ಪುನೀತರಾಗೋಣ – ಎನ್ನುತ್ತಾ ಸಭಾಂಗಣದೊಳಗೆ ಕಾಲಿರಿಸುವಾಗಲೇ ನಿಮ್ಮನ್ನೆದುರಿಸುತ್ತವೆ ಫಲಕಗಳು 'ಸೊಸೆಯಂದಿರ ಅಥವಾ ಅತ್ತೆಯಂದಿರ ವಿಷಯ ಪಕ್ಕದಲ್ಲಿ ಕೂತವರೊಡನೆ ಚರ್ಚಿಸಬೇಡಿ – ತಟ್ಟೆಗೆ ದಕ್ಷಿಣೆ ಹಾಕಲು ಮರೆಯಬೇಡಿ – ನಿಮ್ಮ ಧ್ವನಿಪೆಟ್ಟಿಗೆ ಕೈಕೊಟ್ಟಿದ್ದರೆ ಪ್ರವಚನಕಾರರು ಭಜನೆ ಹೇಳುವಾಗ ದನಿಗೂಡಿಸಬೇಡಿ – ನಿಮ್ಮ ಜ್ಞಾನ ಪ್ರದರ್ಶನಕ್ಕಾಗಿ ಪ್ರವಚನಕಾರರ ಜತೆ ವಾಗ್ವಾದಕ್ಕಿಳಿಯಬೇಡಿ.'

ಎಲ್ಲ ನಗರಗಳಲ್ಲೂ ಕಾಣಸಿಗುವ ತಪ್ಪುಗಳೇ ಅಧಿಕವಾಗಿರುವ ಸಾಮಾನ್ಯ ಬೇಡಿಗಳೆಂದರೆ – 'ಪ್ಲಾಸ್ಟಿಕ್ ತ್ಯಾಜ್ಯವನ್ನು ಎಸೆಯಬೇಡಿ; ಇಲ್ಲಿ ಹೇಸಿಗೆ ಮಾಡಬೇಡಿ; ಇಲ್ಲಿ ಮೂತ್ರ ವಿಸರ್ಜನೆ ಮಾಡಬೇಡಿ; ಸಿಸಿ ಟಿವಿ ಕೆಮರಾಗಳಿವೆ – ಆದ್ದರಿಂದ ಜೇಬುಗಳ್ಳತನ ಮಾಡಬೇಡಿ' – ಇಂತಹ ವೈವಿಧ್ಯಮಯ ಬೇಡಿಗಳು.

ನೀರು, ಬಾಗಿಲುಗಳ ಸೌಲಭ್ಯಗಳೇ ಇಲ್ಲದ ನಗರಗಳ ಮಧ್ಯದಲ್ಲೇ ಇರುವ ಶೌಚಾಲಯಗಳಲ್ಲೂ 'ಬೇಡಿ' ಫಲಕಗಳಿಗೆ ಕೊರತೆ ಇಲ್ಲ – 'ನೀರನ್ನು ದುಂದು ಮಾಡಬೇಡಿ; ಒಮ್ಮೆಗೆ ಒಬ್ಬರಿಗಿಂತ ಜಾಸ್ತಿ ಮಂದಿ ಒಳ ನುಗ್ಗಬೇಡಿ – ಇದು ಸರ್ಕಾರಿ ಶೌಚಾಲಯ – ಯಾರಿಗೂ ಶುಲ್ಕ ನೀಡಬೇಡಿ' – ವ್ಹಾ ಎಂತೆಂಥಾ ಬೇಡಿಗಳು!

ಆಯಾಸ ಪರಿಹಾರಕ್ಕಾಗಿ ಊರ ಹೊರಗಿನ ಉದ್ಯಾನವನವನ್ನಾದರೂ ಆಶ್ರಯಿಸೋಣ – ಎಂದುಕೊಂಡು ಅಲ್ಲಿಗೆ ಹೋದರೆ ತರುಲತೆಗಳು ಹುಲ್ಲಿನ ಲಾನ್‌ಗಳು, ಹೂನ ಕುಂಡಗಳು ತಿಂಗಳುಗಟ್ಟಲೆ ನೀರಿನ ಮುಖ ಕಾಣದೆ ಒಣಗಿ ಹೋಗುತ್ತಿರುವ ದೃಶ್ಯವನ್ನು ಎದುರಿಸುತ್ತೀರಿ. ಆದರೆ ಅಲ್ಲಿನ 'ಬೇಡಿ' ಫಲಕಗಳು! 'ಹುಲ್ಲಿನ ಮೇಲೆ ನಡೆಯಬೇಡಿ; ಹೂ ಕೀಳಬೇಡಿ; ಸ್ತ್ರೀ ಪುರುಷರು ಜೊತೆಯಾಗಿ ಕುಳಿತಿದ್ದರೆ ನಿಮ್ಮ ನಿಮ್ಮ ಆಧಾರ್ ಕಾರ್ಡನ್ನು ತೋರಿಸಲು ಮುಜುಗರ ಪಡಬೇಡಿ; ಹೂಗಿಡಗಳ ಜತೆ ಸೆಲ್ಫೀ ಫೋಟೋ ತೆಗೆಯಬೇಡಿ' ಹೀಗೆ ಬಂಜರು ಪ್ರದೇಶದಲ್ಲೂ 'ಬೇಡಿ'ಗಳ ಪ್ರವಾಹ!

ಹಾಗಾದರೆ ಈ 'ಬೇಡಿ'ಗಳ ಬಂಧನದಿಂದ ಬಿಡುಗಡೆಯೇ ಇಲ್ಲವೆ ಎಂದುಕೊಂಡರೆ ಯಾಕಿಲ್ಲ? ಎಂಬ ಉತ್ತರವೂ ದೊರಕೀತು! ದೇಶಕ್ಕೆ ಸ್ವಾತಂತ್ರ್ಯ ದೊರಕಿ ದೀರ್ಘಾವಧಿ ಕಳೆದ ಮೇಲೂ ಇಲ್ಲಿನ ನಾಗರಿಕರಿಗೆ ಸ್ವಇಚ್ಛೆಯಿಂದ ಬದುಕಲು ಯಾಕೆ ಸಾಧ್ಯವಾಗುತ್ತಿಲ್ಲ? ಮನಸ್ಸಿದ್ದರೆ ಮಾರ್ಗವೂ ಇದೆ.

ಉದಾಹರಣೆಗೆ ನಗರಗಳಲ್ಲಿ ಅಳಿದುಳಿದ ಕೆರೆಗಳ ಪಾರ್ಶ್ವಗಳಲ್ಲಿ ಅಳವಡಿಸಬೇಕಾದ ಫಲಕಗಳಲ್ಲಿ 'ತ್ಯಾಜ್ಯ ಪರಿಹಾರಕ್ಕಿಲ್ಲಿದೆ ಸೂತ್ರ – ತುಂಬಲಿ ಕಸಗಳಿಂದ ಕೆರೆಗಳ ಪಾತ್ರ' – ಎಂಬ ಶಬ್ದಗಳಿರಲಿ. ಎಲ್ಲೆಲ್ಲಿ ಖಾಲಿ ಗೋಡೆಗಳು, ಕಂಪೌಂಡುಗಳು ಅಸ್ತಿತ್ವದಲ್ಲಿವೆಯೋ ಅಲ್ಲೆಲ್ಲಾ – ಎಲ್ಲಿ ಭಾಷೆಗಳಲ್ಲೂ ಇಂತಹ ಫಲಕಗಳನ್ನು ಹಾಕಬಹುದು – 'ಇಲ್ಲಿ ಮೂತ್ರ ವಿಸರ್ಜನೆ ಮಾಡಿರಿ' – 'ಸಿಗರೇಟ್ ಸೇವನೆ ಮಾಡಿ ತೂಕ ಇಳಿಸಿರಿ' – 'ಮದ್ಯಪಾನ ಮಾಡಿ; ಬ್ಯಾಂಕ್‌ಗಳು ಸಾಲ ನೀಡಲು ಸದಾ ಸಿದ್ಧವೆ' – 'ದ್ವಿಚಕ್ರ ಸವಾರರೇ – ವೀಲಿಂಗ್ ಮಾಡಿ ತಕ್ಷಣ ಸ್ವರ್ಗದಲ್ಲಿ ಸುಖ ಅನುಭವಿಸಿರಿ' 'ವಾಹನ ಚಾಲಕರೇ ಬ್ರೇಕನ್ನು ಮರೆತುಬಿಡಿ' – 'ವೇಗವರ್ಧಕ ಒಂದೇ ಸಾಕು ಬಿಡಿ!'

ಬಾರ್‌ಗಳ ಹೊರಗೆ ಅಳವಡಿಸಬಹುದಾದ ಫಲಕಗಳೆಂದರೆ ‘ಕುಡಿತಕ್ಕೆ ಮಿತಿಯಿಲ್ಲ – ಬುದ್ಧಿ ಮಾತು ಹೇಳುವವರಿಗೆ ಮತಿ ಇಲ್ಲ’ ವೈನ್‌ಶಾಪ್‌ಗಳ ಎದುರು ದೊಡ್ಡಕ್ಷರಗಳಲ್ಲಿ ಒಂದು ಪ್ರಮುಖ ಫಲಕವನ್ನು ಹಾಕಬಹುದು.

‘ಕೈ ಸಾಲ ಮಾಡಿ ಕುಡಿಯಿರಿ

ಕೈಲಾಸ ಸುಖವ ಪಡೆಯಿರಿ!’

ಇಂತಹ ಧನಾತ್ಮಕ ಚಿಂತನೆಗಳನ್ನೊಳಗೊಂಡ ವೈವಿಧ್ಯಮಯ ಸಂದೇಶಗಳನ್ನು ನೀಡುವ ಫಲಕಗಳಿಂದ ಮಾತ್ರ ದೇಶದ ಪ್ರತಿಯೊಬ್ಬ ಪ್ರಜೆಯೂ ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಿಯಾನು!

❁

## ಆತ್ಮೀಯ ಓದುಗರಲ್ಲಿ ವಿನಂತಿ

ನಮ್ಮ ನಿಮ್ಮ ನಡುವೆ ಸಂಪರ್ಕ ಸೇತುವೆಯನ್ನು ಬಲಪಡಿಸುವ ನಿಟ್ಟಿನಲ್ಲಿ ತಾವು ದಯಮಾಡಿ ತಮ್ಮ ಈ ಮೇಯ್ಲ್ ವಿಳಾಸ, ಮೊಬೈಲ್ ಸಂಖ್ಯೆ, ತಮ್ಮ ಹೆಸರನ್ನು ಸೇರಿಸಿ ಹಾಗೂ ಚಂದಾದಾರರ ಸಂಖ್ಯೆಯನ್ನು ಸೇರಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ.

koravanjiaparanji@gmail.com

ಅಪರಂಜಿ ಹವ್ಯಾಸೀ ಲೇಖಕರು ಸೇರಿ ನಡೆಸುತ್ತಿರುವ ಒಂದು ಸಾಹಸ. ಇದಕ್ಕೆ ಜಾಹೀರಾತು ದೊರಕಿದರೆ ನಮ್ಮ ಕೆಲಸ ಸುಗಮ. ಈ ನಿಟ್ಟಿನಲ್ಲಿ ತಾವು ಸಹಕರಿಸಲು ಇಚ್ಛಿಸಿದರೆ ದಯವಿಟ್ಟು ವಿವರಗಳಿಗೆ ನಮ್ಮನ್ನು ಸಂಪರ್ಕಿಸಿ:

koravanjiaparanji@gmail.com

# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಆ**

- ನಮ್ಮ ದೇಶದ ರಾಷ್ಟ್ರ ಪ್ರಾಣಿ – ಹುಲಿ, ರಾಷ್ಟ್ರ ಪಕ್ಷಿ – ನವಿಲು, ರಾಷ್ಟ್ರ ಭಾವ – ಆತಂಕ? ಹೌದೆ?
- ಅಕ್ಕಿ ಇದ್ದರೆ ಚಿತ್ರಾನ್ನ ಮಾಡಬಹುದು, ಪಲಾವ್ ಮಾಡಬಹುದು, ಬಿರಿಯಾನಿ ಮಾಡಬಹುದು.
- ನಮ್ಮ ಬಗ್ಗೆ ಜೋಕ್ ಹೇಳಿಕೊಂಡು ಕೋತಿಗಳು ಖುಷಿಯಾಗಿರಬಹುದೆ?

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ವೀಡ್ಸ್ ಆರ್ ಫ್ಲವರ್ಸ್ ಟೂ ಒನ್ಸ್ ಯು ಗೆಟ್ ಟು ನೊ ದೆಮ್.
- ಮೌನವ್ರತ ಆಚರಿಸುತ್ತಿರುವಾಗ ಬೆಂಕಿ ಕಾಣಿಸಿಕೊಂಡರೆ ಮೌನವ್ರತವನ್ನು ಮುರಿಯಬೇಕು.
- ತಪ್ಪು ಮಾಡುವುದು ಸಹಜ. ಅದಕ್ಕೆ ಇತರರನ್ನು ದೂರುವುದು ರಾಜಕೀಯ.
- ಬದುಕು ಎಂದರೆ ನಾವು ಇದುವರೆಗೆ ಮಾಡಲಾಗದೆ ಇದ್ದುದಲ್ಲ; ಇನ್ನು ಮಾಡಬಹುದಾದವುಗಳ ಬಗ್ಗೆ.
- ನೂಡಲ್ ತಿನ್ನುವಾಗ ಶಬ್ಧ ಮಾಡುವುದನ್ನು ತಪ್ಪಿಸಲು ಸೆನ್ಸರ್ ಇರುವ ಫೋರ್ಕ್ ಬಂದಿದೆಯಂತೆ. ಅದರ ಬೆಲೆ ಕೇಳಿದರೆ ಆ ಶಬ್ಧವನ್ನೂ ಮೀರಿಸುವ ಉದ್ಗಾರ ಹೊರಡುತ್ತದೆ!
- ವಾಟ್ ಯು ಗೆಟ್ ಬೈ ಅಚೀವಿಂಗ್ ಯುವರ್ ಗೋಲ್ ಈಸ್ ನಾಟ್ ಆಸ್ ಇಂಪಾರ್ಟೆಂಟ್ ಆಸ್ ವಾಟ್ ಯು ವಿಲ್ ಬಿಕಂ ಬೈ ಅಚೀವಿಂಗ್ ಯುವರ್ ಗೋಲ್.
- ಇನ್ನೊಂದು ಪ್ರಾಣಿಯ ಹಾಲನ್ನು ಕುಡಿಯುವ ಏಕೈಕ ಪ್ರಾಣಿ ಎಂದರೆ ಮನುಷ್ಯ ಮಾತ್ರ.
- ನಾವು ನಮ್ಮ ಸಮಸ್ಯೆಗಳಿಗಿಂತ ಇತರರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಪ್ರವೀಣರು.
- ಲೈಫ್ ಬಿಕಂಸ್ ಈಸಿಯರ್ ವೆನ್ ವಿ ಲರ್ನ್ ಟು ಅಕ್ಸೆಪ್ಟ್ ಅನ್ ಅಪಾಲಜಿ ವಿ ನೆವರ್ ಗೆಟ್.
- ಮಾನವ ಮಂಗನಾಗುತ್ತಾನೋ ಇಲ್ಲವೊ ಆದರೆ ಶಾಸಕನಾಗಲು ಸಾಧ್ಯ.
- ಒಳ್ಳೆ ಕಂಪನಿ ಇದ್ದರೆ ಯಾವ ರಸ್ತೆಯೂ ಉದ್ದ ಎನಿಸುವುದಿಲ್ಲ.
- ಸೊನ್ನೆಗಿಂತಲೂ ಅರ್ಧ ವಾಸಿ ಅಲ್ಲವೆ

# ರಿಟೈರ್ಡ್ ಲೈಫು.....

**- ಎಚ್. ಗೋಪಾಲಕೃಷ್ಣ**

ರಿಟೈರ್ ಆದಮೇಲೆ ಜೀವನ ಹೇಗೆ ಸುಖಮಯ ಮಾಡಿಕೊಳ್ಳಬೇಕು ಅಂತ ಒಂದು ತರಗತಿ ನಡೀತಿತ್ತು ಆಗ, ನಾನು ಇನ್ನೂ ಸರ್ವೀಸ್‌ನಲ್ಲಿ ಇದ್ದಾಗ. ಮೂರು ದಿವಸದ ಕ್ಲಾಸು. ಊಟ, ತಿಂಡಿ, ಕಾಫಿ ಇದೆಲ್ಲಾ ಅವರೇ ಕೊಟ್ಟು ಕ್ಲಾಸು ಮಾಡೋರು. ಅದಕ್ಕೆ ಅದೆಷ್ಟೋ ಫೀಸು ಅಂತ ಇತ್ತು. ಕೆಲವು ಸಾವಿರ ಅಂತ ಕಾಣುತ್ತೆ, ನಮ್ಮ ಜೇಬಿಗೆ ಎಟುಕೋ ಅಷ್ಟೇ. ಎಂ.ಎನ್.ಸಿ. ಕಲ್ಚರಿನ ಒಂದು ಭಾಗ ಅದು ಅಂತ ನಮ್ಮ ನಂಬಿಕೆ. ನಮ್ಮ ಬಾಸು ಬಲವಂತ ಮಾಡುತ್ತಿದ್ದ ನಮಗೆ ಈ ಕ್ಲಾಸಿಗೆ ಹೋಗಿ ಬನ್ರೀ ತುಂಬಾ ಉಪಯೋಗ ಆಗುತ್ತೆ ಅಂತ. ಅಷ್ಟೊಂದು ಕಾಸು ಕೊಟ್ಟು ಯಾರು ಹೋಗ್ತಾರೆ ಅದಕ್ಕೆ, ನಮಗಿಂತ ಮೊದಲು ರಿಟೈರು ಆದೋರೆಲ್ಲಾ ಈ ಕ್ಲಾಸಿಗೆ ಹೋಗಿದ್ರಾ? ಅವರೆಲ್ಲಾ ಸುಖವಾಗಿ ಜೀವನ ಮಾಡ್ತಿಲ್ವೇ ಈಗ.... ಅಂತ ಮೊಂಡು ವಾದ ಹೂಡಿ ಬಾಸಿನ ಬಾಯಿ ಮುಚ್ಚಿಸುತ್ತಿದ್ದೆವು.

ಕೆಲವು ಸಲ ಒತ್ತಡ ಹೆಚ್ಚಾದಾಗ ಸಾರ್ ಅಷ್ಟೊಂದು ಫೀಸು ಕೊಟ್ಟು ಕ್ಲಾಸಿಗೆ ಹೋಗೋ ಅಷ್ಟು ಸಾಹುಕಾರರು ಅಲ್ಲ ನಾವು ಅಂತ ಸಬೂಬೂ ಹೇಳುತ್ತಿದ್ದೆವು. ಸುಮಾರು ದಿವಸ ಈ ಹಗ್ಗ ಜಗ್ಗಾಟ ನಡೆದ ಮೇಲೆ ನಮ್ಮ ಕಂಪನಿ ಅವರೇ ಅದರ ಅಂದರೆ ಕ್ಲಾಸಿನ ವೆಚ್ಚ ಹೊತ್ತು ನಮ್ಮನ್ನ ಬಲವಂತವಾಗಿ ಕಳುಹಿಸೋರು. ಬೇರೆ ದಾರಿ ಇಲ್ಲದೇ ನಾವೂ ಕುರಿಗಳ ಹಾಗೆ ಕ್ಲಾಸಿಗೆ ಹೋಗುತ್ತಿದ್ದೆವು.

ಮೂರು ದಿವಸ ಅವರು ಹೇಳಿದ ಹಾಗೆ ಡ್ರಿಲ್ಲು, ಯೋಗ, ಪ್ರಾಣಾಯಾಮ ಎಲ್ಲವನ್ನೂ ಮಾಡಿ ಮೈ ಹಗುರ ಮಾಡಿಕೊಳ್ಳುವ ತಂತ್ರಕಲಿತೆವು ಅಂತ ಅಂದುಕೊಂಡು ಬೀಗಿದವರೂ ಇದ್ದರು. ಲಿಮಿಟೆಡ್ ಫುಡ್ ತಿಂದು ಅಷ್ಟೇ ರಿಟೈರಾದ ಮೇಲೂ ತಿನ್ನಬೇಕು ಅಂತ ಕೆಲವರು ನೋಟ್ಸು ಮಾಡಿಕೊಂಡಿದ್ದರು.

ಇಷ್ಟು ವರ್ಷ ನೀವು ಅದೇನೇನೋ ಮಾಡಬೇಕು ಅಂತ ಅಂದುಕೊಂಡಿರ್ತೀರಿ, ಸಮಯ ಸಿಕ್ಕಿರುಲ್ಲ, ಇನ್ಮೇಲೆ ಬೇಕಾದಷ್ಟು ಸಮಯ ಸಿಗುತ್ತೆ ಆಗ ನೀವು ಅಂದುಕೊಂಡಿದ್ದ ಕೆಲಸಗಳನ್ನು ಮಾಡಿಕೊಳ್ಳಬಹುದು, ಅದರ ಒಂದು ಪಟ್ಟಿ ಮಾಡಿ ಇಟ್ಟುಕೊಳ್ಳಿ ಅಂತ ಪಾಠ ಕೇಳಿ ಕೆಲವರು ಪಟ್ಟಿ ಸಹ ತಯಾರಿಸಿಕೊಂಡರು.

ಅದೇರೀತಿ ಓದಬೇಕಾದ ಪುಸ್ತಕಗಳು, ಮುಗಿಸಬೇಕಾದ ಜವಾಬ್ದಾರಿಗಳು, ಕಾಪಾಡಿಕೊಳ್ಳಬೇಕಾದ ಆರೋಗ್ಯ... ಹೀಗೆ ಹಲವು ನೂರು ವಿಷಯಗಳು ನಮಗೆ ಪಾಠ ಆಗಿದ್ದು.

ಪ್ರತಿದಿನ ಕೊನೇ ಘಂಟೆಯಲ್ಲಿ ಒಂದು ಪ್ರಶ್ನೋತ್ತರ. ಅದರಲ್ಲಿ ನಮಗೆ ಅಂದರೆಟು ಬಿ ಸೀನಿಯರ್ ಸಿಟಿಜನ್ಸ್‌ಗೆ ಸೂಕ್ತ ಸಲಹೆ ಮತ್ತು ಜೀವನ ಹಸನು ಮಾಡಿಕೊಳ್ಳುವ ಬಗ್ಗೆ ಪರಿಣತರೊಬ್ಬರಿಂದ ಆಪ್ತ ಸಮಾಲೋಚನೆ!

ಮೂರುದಿವಸದ ತರಗತಿ ಮುಗಿದ ನಂತರ ಕೆಲವರಿಗೆ ಹೊಸಾ ಹುರುಪು ಬಂತು, ಜೀವನ ರೂಪಿಸಿಕೊಳ್ಳಲು ಅದೆಂತಹ ಅವಕಾಶ ಸಿಕ್ಕಿದೆ ಅಂತ ಖುಷಿಪಟ್ಟರು.

ನಮ್ಮಂತಹ ಕೆಲವರು ಸೀರಿಯಸ್ಸಾಗಿ ಕೆಲವು ಸಂಗತಿ ನೋಟ್ ಹಾಕಿಕೊಂಡಿದ್ದೆವು. ಅವು ಯಾವುವು ಅಂದರೆ ಎಷ್ಟೋ ಪುಸ್ತಕಗಳನ್ನು ಓದಬೇಕು ಅಂತ ಅಂದುಕೊಂಡಿರುತ್ತೀರಿ, ಓದೋಕ್ಕೆ ಆಗಿರಲ್ಲ. ಅವನ್ನೆಲ್ಲಾ ಕೊಂಡು ಇಟ್ಕೊಳ್ಳಿ. ರಿಟೈರ್ ನಂತರ ನೆಂಟರು ಸ್ನೇಹಿತರ ಮನೆಗಳಿಗೆ ಹೊತ್ತುಗೊತ್ತು ಇಲ್ಲದೆ ಹೋಗಿ ಪಿಶಾಚಿ ಬಂತು ಅಂತ ಅನಿಸ್ಕೋಬೇಡಿ. ಎಲ್ಲರೂ ಅವರವರ ಕೆಲಸದಲ್ಲಿ ಮುಳುಗಿರ್ತಾರೆ, ನೀವು ಅವರ ಸಮಯ ವೇಸ್ಟು ಮಾಡಬೇಡಿ.

ಪ್ರತಿದಿನ ರಿಚುಯಲ್‌ನ ಹಾಗೆ ವಾಕಿಂಗ್ ಮಾಡಿ, ಅದರಿಂದ ನಿಮಗೆ ಬರೋ ಎಷ್ಟೋ ಖಾಯಿಲೆ ದೂರ ಮಾಡಬಹುದು.

ತಿಂಗಳಿಗೆ ಒಂದುಸಲ ಖಂಡಿತವಾಗಿ ಮೆಡಿಕಲ್ ಚೆಕ್‌ಅಪ್ ಮಾಡಿಸಿಕೊಳ್ಳಿ, ನಾಳೆಗೆ ಏನಾಗುತ್ತೆ ಅಂತ ಗೊತ್ತಿರಲ್ಲ.

ಹಣಕಾಸಿನ ಬಗ್ಗೆ ಜೋಪಾನ. ನಿಮ್ಮ ಹತ್ತಿರ ಬಂದು ಕಷ್ಟ ಸುಖ ಹೇಳಿಕೊಂಡು ನಿಮ್ಮನ್ನ ಕರಗಿಸಿ ನೀರು ಮಾಡುವ ಚಾಣಾಕ್ಷತೆ ಹಲವರಲ್ಲಿ ಇರುತ್ತೆ. ಕರಗಬೇಡಿ ಸುಲಭವಾಗಿ....

ಮನೇಲಿ ಕರಿದತಿಂಡಿ ಮಾಡಿಕೊಡೋಲ್ಲ ಅಂತ ರಸ್ತೆಬದಿ ಮಾರೋತಿಂಡಿ ತಿನ್ನಬೇಡಿ...

ಈ ರೀತಿಯ ಕೆಲವು ನೋಟುಗಳು ಇನ್ನೂ ನನ್ನ ನೋಟ್ ಬುಕ್ಕಿನಲ್ಲಿ ಇವೆ.

ಎಳೆಗರುಂ ಎತ್ತಾಗುವ ಹಾಗೆ ರಿಟೈರ್ ಆದೆನಾ? ಅದಕ್ಕೆ ಮೊದಲು ಪುಸ್ತಕದ ಅಂಗಡಿಗಳಿಗೆ ಸುತ್ತಾಡಿ ಎರಡು ಮೂಟೆ ಪುಸ್ತಕಗಳನ್ನು ಕೊಂಡುಕೊಂಡು ಟೆಂಪೋದಲ್ಲಿ ಹಾಕಿಕೊಂಡು ಮನೇಗೆ ತಂದಿದ್ದೆ. ಹೆಂಡತಿ ಗಾಭರಿಯಿಂದ ಇದೇನು ಇಷ್ಟೊಂದು ಕಸ ಅಂತ ಕಣ್ಣು ಕೆಕ್ಕರಿಸಿದ್ದಳು. ರಿಟೈರ್ ಆದಮೇಲೆ ಓದುಕ್ಕೆ ಅಂತ ತಂದಿದ್ದೀನಿ..... ಅಂದಿದ್ದೆ.

ರಿಟೈರ್ ಆದಮೇಲೆ? ಅಂತ ಕೊಶ್ಚನ್ ಎಸೆದಿದ್ದಳು.

ಹೌದು, ರಿಟೈರ್ ಆದಮೇಲೆ ಓದುಕ್ಕೆ ಅಂತ ತಂದಿರೋದೂ.. ಅಂದಿದ್ದೆ.

ಎಷ್ಟಾಯಿತು ಕಾಸು? ಅಂತ ಪ್ರಶ್ನೆ ಎಸೆದಿದ್ದಳು. ಬಾಯಲ್ಲಿ ಹೇಳಿದರೆ ಕುಸಿದು ಬಿದ್ದಾಳು ಅಂತ ಕಾಸು ಎಷ್ಟಾಯಿತು ಅನ್ನುವ ಪ್ರಶ್ನೆಗೆ ಜೇಬಿನಿಂದ ಬಿಲ್ ತೆಗೆದು ಮಡಿಸಿದ್ದ ಬಿಲ್ ಅಗಲ ಮಾಡಿ ತೋರಿಸಿದ್ದೆ.

ಕಣ್ಣು ಕೆಂಪಗೆ ಮಾಡಿಕೊಂಡು ಈ ಕಸಕ್ಕೆ ಇಷ್ಟಾ ಕೊಡೋದೂ..... ಅಂತ ಎರಡು ದಿವಸ ಜಗಳ ಆಡಿದ್ದಳು.

ನೋಡು ನನ್ನ ಕಡಲೆ..... ಅಂತ ಯಾವುದೋ ಓಬೀರಾಯನ ಕಾಲದ ಗಾದೆ ಹೇಳಿದ್ದೆ.

ಜಗಳ ವಿಕೋಪಕ್ಕೆ ಹೋದಾಗ ನಾನು ಮನೆ ಯಜಮಾನ, ನನ್ನ ಸಂಬಳದಲ್ಲಿ ನನಗೆ ಖರ್ಚು ಮಾಡುವ ಹಕ್ಕು ಇಲ್ಲವೇ? ಜೀವನ ಪೂರ್ತಿ ನಿಮಗೇ ದುಡಿದಿದೀನಿ ಅಂತ ರೇಗಿ ಹೆಂಡತಿ ಬಾಯನ್ನ ಮೊದಲ ಬಾರಿಗೆ ಮುಚ್ಚಿಸಿಬಿಟ್ಟಿದ್ದೆ.

ಆ ಸಮಯಕ್ಕೆ ಬಾಯಿ ಮುಚ್ಚಿದ್ದರೂ ಗಂಟೆಗೆ ಹತ್ತುಸಲ ಕಸ ಕಸ ಕಸ ಅಂತ ನನಗೆ ಕೇಳಿಸುವ ಹಾಗೇ ಪೊರಕೆ ಆಡಿಸುತ್ತಾ ಇದ್ದದ್ದು ಕಿವಿಗೆ ಬಿದ್ದರೂ ಕೇರ್ ಮಾಡದೇ ಇದ್ದೆ.

ಪುಸ್ತಕದ ಗಂಟು ತೆಗೆದು ಹಾಗೇ ಶೆಲ್ಫಿನಲ್ಲಿ ಜೋಡಿಸಿ ಇಟ್ಟಿದ್ದೆ. ಒಂದೇ ಒಂದು ದಿವಸವೂ ಅದನ್ನು ಓದುವ ಆಸೆ ಹೋಗಲಿ ನೋಡುವ ಆಸೆಯೂ ಇಲ್ಲದ ಹಾಗೆ ಬಿಸಿಯಾಗಿ ಬಿಟ್ಟಿದ್ದೆ.

ರಿಟೈರಾದವರಿಗೆ ಸಿಕ್ಕಾಪಟ್ಟೆ ಸಮಯ ಇರುತ್ತೆ ಅಂತ ಸಾಮಾನ್ಯ ನಂಬಿಕೆ. ಆದರೆ ಅವರಿಗೆ ಸಮಯವೇ ಇರೋಲ್ಲ ಅಂತ ಅವರ ಗುಂಪಿಗೆ ಸೇರಿದೋರಿಗೆ ಮಾತ್ರಾ ಗೊತ್ತಿರುತ್ತೆ.

ಪುಸ್ತಕದ ಗಂಟು ತಂದಿದ್ದೆ ಅಂತ ಹೇಳಿದೆ ಅಲ್ಲವೇ? ಮೊದಲು ಎರಡು ವಾರ ಈ ಗಂಟು ನನ್ನನ್ನು ನೋಡಿ ಬಾರೋ ಮಾರಾಯಾ ಗಂಟು ಬಿಚ್ಚೋ ಅಂತ ಕರೆದ ಹಾಗೆ ಭಾಸವಾಗುತ್ತಿತ್ತು. ಗಂಟು ಬಿಚ್ಚಿ ಪುಸ್ತಕ ಜೋಡಿಸೋಣ ಅಂತಲೂ ಅದರ ಹತ್ತಿರ ಹೋಗುತ್ತಿದ್ದೆ. ಅಯ್ಯೋ ಇದಕ್ಕೇನು ಅರ್ಜೆಂಟು ಈಗ, ನಾಳೆ ನೋಡಿದರೆ ಆಯಿತು ಬಿಡು ಅಂತ ಅಂತರಾತ್ಮ ಹೇಳೋದೂ, ನಾನೂ ಸರಿ ಅಂತ ಅಂತರಾತ್ಮದ ಮಾತು ಕೇಳೋದೂ ನಡೆದು ಪುಸ್ತಕದ ಗಂಟು ಹಾಗೇ ಬಿದ್ದಿದೆ ಮತ್ತು ನನ್ನಾಕೆ ಮನೆಗೆ ಬಂದವರಿಗೆಲ್ಲಾರನ್ನೂ ರೂಮಿಗೆ ಕರೆದುಕೊಂಡು ಹೋಗಿ ಈ ಗಂಟು ತೋರಿಸಿ ನನ್ನ ಸಾಹಸ ಬಣ್ಣಿಸಿ ಹಾಳು ಕಸ ಅನ್ನುವ ಅವಳ ಡಯಲೋಗು ಹೊಡೆಯುವುದು ಮುಂದುವರೆದಿದೆ. ಯಾರಾದರೂ ಈಚೆಗೆ ಏನು ಓದಿದಿರಿ ಅಂತ ಕೇಳಿದರೆ ಮೊದಲು ಅಂದರೆ ನನ್ನ ಪೂರ್ವಜನ್ಮದಲ್ಲಿ ಎರಡು ಪೇಜು  ಏನು ಓದಿದೆ ಅಂತ ಹೇಳುತ್ತಿದ್ದವನು ಈಗ ತಡಬಡಾಯಿಸಿ ಹಲ್ಲು ಕಿಸೀತಾ ಅಯ್ಯೋ ಟೈಮೇ ಇಲ್ರೀ ಏನು ಓದೋಕ್ಕೊ ಅಂತ ಹೇಳಿ ಈಗ ನೋಡಿ ಓದು ಪಾದು ಇಲ್ಲದೇ ಆರಾಮಾಗಿದೀನಿ, ಏನೂ ಟೆನ್ಷನ್ನೇ ಇಲ್ಲ ಅಂತ ಕೊಚ್ಚಿಕೊಳ್ಳೋದೂ ಇದೆ. ಅದರ ಜತೆಗೆ ಈಗ ಯಾರ್ರೀ ಒಳ್ಳೇ ಪುಸ್ತಕ ಬರೀತಿದಾರೆ? ಎಲ್ಲಾ ಆ ಕಾಲಕ್ಕೇ ಆಗಿಹೋಯ್ತುರೀ ಅಂತ ಓದುವವರ ಅಭ್ಯಾಸದ ಮೇಲೂ ತಣ್ಣೀರು ಎರಚುವ ಕೆಲಸ ಮಾಡುತ್ತೇನೆ.

ಇನ್ನು ವಾಕಿಂಗ್ ವಿಷಯ ಕೇಳುವಿರಾ? ಎರಡು ಜತೆ ವಾಕಿಂಗ್ ಶೂ ತಂದಿದ್ದೆ ಇನ್ನೂ ಕೆಲಸದಲ್ಲಿ ಇದ್ದಾಗಲೇ. ರಿಟೈರ್ ಆದಮೇಲೆ ಎರಡು ತಿಂಗಳು ಅದನ್ನು ಹಾಕಿಕೊಂಡು ಅದರ ಸಂಗಡವೇ ತಂದಿದ್ದ ಟ್ರಾಕ್ ಸೂಟ್ ಸಹ ತೊಟ್ಟು ಪಕ್ಕದ ಪಾರ್ಕಿಗೆ ವಾಕಿಂಗ್ ಹೋಗಿ ಬಂದು ಹೋ ಇವತ್ತು ಆರು ಚಮಚ ಬೆವರು ಸುರಿಸಿದೆ ಅಂತ ಸಿಕ್ಕಿದವರ ಎದುರು ಕೊಚ್ಚಿದ್ದೆ. ನೋಡಿ ನಾನು ಸಣ್ಣ ಆಗಿದ್ದೀನಿ ಅಲ್ಲವಾ ಅಂತ ಸಿಕ್ಕಿದ ಎಲ್ಲರನ್ನೂ ಕೇಳಿದ್ದೆ.

ಅಯ್ಯೋ ಹೌದಾ ಸಾರ್ ಗೊತ್ತೇ ಆಗಲಿಲ್ಲವೇ ಸಾರ್ ಅಂತ ಅವರುಗಳೂ ಉತ್ತರಿಸಿದ್ದರು. ಎರಡನೇ ತಿಂಗಳಿನ ಕೊನೇ ದಿವಸ ಹೋಟೆಲ್ಲಿಗೆ ಹೋಗಿ ಎರಡು ಬೆಣ್ಣೆ ಮಸಾಲೆ, ಒಂದು ಮಂಗಳೂರು ಬಜ್ಜಿ ಹೊಡೆದು ಅಲ್ಲೇ ಇದ್ದ ತೂಕದ ಮೇಜಿನ ಮೇಲೆ ನಿಂತೆ. ಕಿಂಡಿ ಒಳಗೆ ಒಂದು ರೂಪಾಯಿ ಕಾಯಿನ್ ಹಾಕಿದರೆ ಏನಾಗಬೇಕು?

ಮೆಷೀನ್ ಒಳಗೆ ಅದೇನೋ ಗರ್ರ್ ಅಂತ ಶಬ್ದ ಬಂತು, ಸಣ್ಣಗೆ ಹೊಗೆ ಕಾಣಿಸಿತು. ಮೆಷೀನು ವಾಲಿತು. ಹೋಟಲು ಗಲ್ಲಾ ಮೇಲೆ ಕೂತಿದ್ದೋರನ್ನ ಕರೆದೆ. ಅವರು ಬಂದರು. ವಾಲಿದ್ದ ಮೆಷೀನು ನೋಡಿದರು. ಅದರೊಳಗೆ ಬರುತ್ತಿದ್ದ ಹೊಗೆ ನೋಡಿದರು.

ಸಾರ್, ನೀವು ಇದರ ಮೇಲೆ ಹತ್ತಿದ್ದಿರಾ ಅಂದರು.

ಹೌದು ಅಂದೆ.

ಸಾರ್ ಇದು ಓನ್ಲಿ ಅಪ್ಟು ಒನ್ ಫಿಫ್ಟಿ ಕೇಜೀಸ್.. ಅಂದರು.

ನಾನು ನೈನ್ಟಿ ರೀ ಅಂದೆ.

ಅವರು ನಗು ತಡೆದು ಬೇರೆಕಡೆ ನೋಡೀ ಸಾರ್ ಅಂದರು.

ಬೇರೆಕಡೆ ಬೇಡ ಬನ್ನಿ ಒಳಗೆ ಅಂತ ಅವರ ಸ್ಟೋರ್ ರೂಮಿಗೆ ಕರೆದುಕೊಂಡು ಹೋದರು. ಅಲ್ಲಿ ಸೌದೆ ತೂಗುವ ತಕ್ಕಡಿಯಲ್ಲಿ ನನ್ನ ಕೂಡಿಸಿ ಇನ್ನೊಂದು ಕಡೆ ರಾಸು ಅಂದರೆ ತೂಕ ಇಟ್ಟರು. ಮುನ್ನೂರ ಐವತ್ತು ಕೇಜಿ ತೋರಿಸಬೇಕೇ ಅದು? ಅವತ್ತೇ ಟ್ರ್ಯಾಕ್ ಸೂಟು , ಶೂ ಬಿಟ್ಟೆ. ಅವತ್ತಿಂದ ತೂಕದ ಮೆಷೀನಿನ ಕಡೆಗೂ ಹೋಗಿಲ್ಲ.

ಡಾಕ್ಟರ ಹತ್ತಿರ ಹೋಗೋದಿಕ್ಕೆ ಅದೇನೂ ಸೀರಿಯಸ್ ಖಾಯಿಲೆ ಅಮರಿಲ್ಲ ಅನ್ನೋದು ಒಂದು ಕಾರಣ. ಆದರೆ ಯಾವುದೇ ಡಾಕ್ಟರು ನನ್ನನ್ನು ನೋಡಿದ ಕೂಡಲೇ ರೀ ಸಾಮೀ ತೂಕ ಕಡಿಮೆ ಮಾಡ್ಕಳ್ರೀ ಅಂತ ಹೇಳುವುದು ನನಗೆ ಮೊದಲಿಂದ ರೂಢಿ. ಯಾರೋ ಗೊತ್ತುಗುರಿ ಇಲ್ಲದೇ ಇರೋರ ಹತ್ತಿರ ತೂಕ ಕಡಿಮೆ ಮಾಡ್ಕೊಳ್ರೀ ಅಂತ ಹೇಳಿಸಿಕೊಳ್ಳೋದು ನನಗೆ ನೀವೇನಾದ್ರೂ ಅಂದ್ಕೊಳ್ಳಿ ಇವರೇ, ಒಂದು ಥರಾರೀ ಅದಕ್ಕೇ ವೈದ್ಯರಿಗೂ ನನಗೂ ಗಾವುದ ದೂರ. ಸೀರಿಯಸ್ ಖಾಯಿಲೆ ಬಂದರೆ ದೊಡ್ಡ ಆಸ್ಪತ್ರೆ ಇಲ್ವಾ ಅನ್ನೋದು ನನ್ನ ಪ್ರಶ್ನೆ.

ಅದರ ಜತೆಗೆ ಇನ್ನೂ ಕೆಲವು ಹಳೇ ಅಭ್ಯಾಸಗಳು ನನ್ನನ್ನು ಇನ್ನೂ ಬಿಟ್ಟಿಲ್ಲ. ಬೋಂಡ ಮತ್ತು ಪಕೋಡದ ವಾಸನೆ ನನ್ನ ಮೂಗಿಗೆ ಹತ್ತು ಮೈಲಿ ದೂರದಲ್ಲೇ ಹೊಡೆಯುತ್ತೆ ಮತ್ತು ಅವು ಹಾಗೆ ಜೋರಾಗಿ ವಾಸನೆ ಬೀರಿ ಅವು ನಮ್ಮನ್ನು ಕೂಗಬೇಕಾದರೆ ಅದನ್ನು ಸೇವಿಸದೇ ಇರೋದನ್ನ ಯಾವ ಭಗವಂತ ಮೆಚ್ತಾನೆ ಹೇಳಿ? ಆದರಿಂದ ಯಾರು ಏನೇ ಹೇಳಲಿ ನಾನು ಬೋಂಡ ಮೊದಲಾದವನ್ನು ಬಿಟ್ಟಿಲ್ಲ ಮತ್ತು ಬಿಡುವುದೂ ಇಲ್ಲ!

ಅದರಿಂದ ಅಂದರೆ  ಮುನ್ನೂರು ಪ್ಲಸ್ ಕೇಜಿ ತೂಕದಿಂದ ಒಂದು ಅನುಕೂಲ ಆಗಿದೆ. ಅದೇನಪ್ಪಾ ಅಂದರೆ ಯಾವುದೇ ಬಿಎಮ್‌ಟಿಸಿ ಬಸ್ಸು ಹತ್ತಿ. ಕಂಡಕ್ಟರು ಪ್ರೀತಿಯಿಂದ ಒಳಗೆ ಬನ್ನಿ ಸಾರ್ ಅಂತ ಕೂಗ್ತಾನೆ. ಒಳಗೆ ಹತ್ತಿಸಿಕೊಂಡು ಸೀದಾ ಕೊನೇ ಸೀಟಿಗೆ ಕರೆದುಕೊಂಡು ಹೋಗಿ ಅಲ್ಲಿಕೂತಿರೋರನ್ನ ಎಬ್ಬಿಸಿ ನನಗೆ ಜಾಗ ಮಾಡಿಕೂಡಿಸುತ್ತಾನೆ. ನನ್ನ ವಯಸ್ಸಿಗೆ ಮರ್ಯಾದೆ ಕೊಡ್ತಿದಾರೆ ಅಂತ ಮೊದಲು ಅಂದುಕೊಂಡಿದ್ದೆ. ಅದರ ಗುಟ್ಟು ಮೊನ್ನೆ ಗೊತ್ತಾಯಿತು. ಬೆಂಗಳೂರಿನ ರಸ್ತೇಲಿ ಬಸ್ಸುಗಳು ಹಳ್ಳಕೊಳ್ಳದಲ್ಲಿ ಹೋಗಿ ಹಾರುತ್ತವಂತೆ. ಅದನ್ನ ತಡೆಯೋದಿಕ್ಕೆ ಕಂಡಕ್ಟರುಗಳು ಕ್ಯೂಸೀಸಿ ಮಾಡಿದರಂತೆ. ಹಿಂದೆ ಭಾರ ಹೇರಿದರೆ ಬಸ್ಸು ಕುಲುಕಲ್ಲ ಅಂತ ಕಂಡುಹಿಡಿದರಂತೆ. ಅದರ ಪ್ರಾಕ್ಟಿಕಲ್ ಪ್ರಯೋಗ ಯಶಸ್ವಿಯಾಗಿದ್ದು ನನ್ನಿಂದ ಅಂತೆ. ಅದಕ್ಕೇ ನಾನು ಎಲ್ಲಿ ಕಂಡರೂ ನನ್ನನ್ನು ಬಸ್ಸಿಗೆ ಹತ್ತಿಸಿಕೊಂಡು ಕೊನೇಸೀಟಿನಲ್ಲಿ ಕೂಡಿಸಿ ಡ್ರೈವರು ನಿರಾಳವಾಗಿ ಬಸ್ಸು ಓಡಿಸ್ತಾನಂತೆ. ಮೊನ್ನೆ ಮೆಜೆಸ್ಟಿಕ್‌ನಲ್ಲಿ ಬಸ್ಸಿಗೆ ಕಾಯುತ್ತಿದ್ದೆ. ಬೋಂಡ ವಾಸನೆ ಬಂತು ಅಂತ ಹತ್ತಿರದ ಕ್ಯಾಂಟೀನ್‌ಗೆ ನಡೆದೆ. ಮೂರನೇ ಪ್ಲೇಟು ಬೋಂಡ ಮುಗಿಸಬೇಕಾದರೆ ಇಬ್ಬರು ಕಂಡಕ್ಟರು ಮಾತಾಡಿಕೊಳ್ಳುತ್ತಿದುದು ನನ್ನ ಕಿವಿಗೆ ಬಿತ್ತು. ನಾನು ಅಲ್ಲಿರೋದು ಅವರಿಗೆ ಗೊತ್ತಿರಲಿಲ್ಲ....! ನನಗೆ ಬೆನ್ನು ಮಾಡಿಕೊಂಡು ಮುಂದೆ ನಿಂತು ಅವರು ಕ್ಯೂಸೀಸಿ ವಿವರ ಹಂಚಿಕೊಂಡರು.

ರಿಟೈರ್ ಆದಮೇಲೆ ನಾನು ಎಂಥೆಂತಾ ಅನುಭವಗಳನ್ನು ಪಡೆದಿದೀನಿ ಅಂದರೆ ಅದರ ಬಗ್ಗೆ ಒಂದು ಥೀಸೀಸ್ ಬರೆದು ಡಾಕ್ಟರೇಟು ಪಡೀಬಹುದು ಅಷ್ಟು. ಯಾವುದಾದರೂ ಯೂನಿವರ್ಸಿಟಿ ಡಾಕ್ಟರೇಟು ಕೊಡ್ತೀನಿ ಅಂದರೆ ನಾನು ರೆಡಿ.....

ಅಯ್ಯೋ ರಿಟೈರ್ ಆಗಿಬಿಟ್ಟೆ ಅಂತ ಕೊರಗುವವರನ್ನು ನೋಡಿದರೆ ನನಗೆ ಅಯ್ಯೋ ಪಾಪ ಮುಂಡೇವು ಜೀವನ ಅನುಭವಿಸೋದು ಕಲೀಲಿಲ್ಲವೇಂತ ಅವರ ಬಗ್ಗೆ ಬೇಜಾರಾಗುತ್ತೆ.

ಸಮಯ ಸಿಕ್ಕಾಗೆಲ್ಲ ನಿದ್ದೆ ಮಾಡಬೇಕಂತೆ. ಅದು ಸರಾಗವಾಗಿ ಮಾಡುತ್ತೇನೆ. ❁

# ನೂತನ ಸಂವತ್ಸರ ಫಲಂ ನಿಮಗೆಲ್ಲ ಭವಿಷ್ಯ ವಲಂ!

- ಎಚ್.ಆರ್. ಹನುಮಂತ ರಾವ್

**ಸೂ**ಚನೆ: ಈ ಭವಿಷ್ಯ ಓದುವುದಕ್ಕೆ ಮುಂಚೆ ಇದನ್ನು ಓದಿ, ಇಷ್ಟವಾದರೆ ನಂತರ ಮುಂದುವರೆಯಿರಿ.

*ನಂಬಿದರೆ ನಂಬಿ, ಇಲ್ಲವಾದರೆ ಬರೀ ಬುರುಡೆ ಎನ್ನಿ. ಹಾಯದಿರಿ ಸುಳ್ಳಾದರೆ, ಮರೆತು ನಕ್ಕುಬಿಡಿ ನಿಜವಾದರೆ,*

*ನಂಬದಿದ್ದರೆ ನಷ್ಟವ ಹೊಂದಿ ಕರಟ ಹಿಡಿಯುವುದೇನಿಲ್ಲ, ನಂಬಿ ನಂಬಿ ಮೋಸ ಹೋಗುವದಕೇನ ಬ್ಲಾಕ್ಮನಿಯಲ್ಲ,*

*ಹಣೆಯಲೊಂದ ದೊಡ್ಡ ನಾಮ ಯಾ ವಿಭೂತಿ ಪಟ್ಟೆಯ ಹಚ್ಚಿ, ಮಿರಮಿರ ಹೊಳೆಯುವ ಕಚ್ಚೆ ಪಂಚೆಯ, ಹೆಗಲಿಗೊಂದ,*

*ಕಲಾಪತ್ತಿರ ಶಾಲು ಹಸ್ತೋದಕ ಕೊಡುವ ಕೈಬೆರಳುಗಳ, ಮೈ ತುಂಬ ಚಿನ್ನ, ವಜ್ರದುಂಗುರಗಳ ವೈಭೋಗದ ಮೆರವಣಿಗೆ.*

*ಎಮಗಿಲ್ಲ ಈ ಪರಿಯ ಟೀವೀ ಜನರ ಮೋಡಿ, ಸೊಗಸು, ಠೀವಿ, ಆಡಿದ್ದೇ ಮಾತು, ನುಡಿ, ಸುಳ್ಳೋ ನಿಜವೋ ಚಿಂತೆ ಅವರಿಗಿಲ್ಲ,*

*ನಿಮಗೂ ಅಷ್ಟೇ, ನಮ್ಮ ನುಡಿ ಕೇಳಿ, ಕಿವಿಯಲೊಂದ ಹೂವನಿಟ್ಟು, ತೆಪ್ಪಗಿರಿ, ನಾವು ನಿಮಗೆ ಹಿತವೆನಿಸಿದರೆ, ನಕ್ಕು ಎಲ್ಲ ಮರೆತು ಬಿಡಿ.*

ಈಗ ಓದಿ.....

**ಮೇಷ ಲಗ್ನದವರಾದರೆ :** ಜನವರಿಯಿಂದ ನಿಮಗೆ ಶನಿಯ ಕಾಟವಿಲ್ಲ, ನೋ ವರಿ ಅಟಾಲ್, ಕ್ಲಬ್ಬಿನಿಂದ ರಾತ್ರಿ ಲೇಟಾಗಿ ಬಂದ್ರು ಹೆಂಡತಿಯ ಮಾತಿಗೆ ಹೆದರಬೇಕಿಲ್ಲ. ಗುರು ಷಷ್ಠ್ಯದಲ್ಲಿದ್ದು ಆರೋಗ್ಯದಲ್ಲಿ ವ್ಯತ್ಯಾಸ ಕಂಡು ಬಂದರು ಹೆದರಬೇಡಿ, ಆಸಿಡಿಟಿಗೆ ಮಾತ್ರೆ ಪಕ್ಕದಲ್ಲೇ ಇದ್ದರೆ ಸರಿ. ನಿಮ್ಮ ಬಾಸ್ ರಸಿಕನಾಗಿದ್ದು ನಿಮಗೆ ಅವರಿಂದ ತೊಂದರೆ ಕಾಣಬರುತ್ತಿಲ್ಲ, ಮುನ್ನುಗ್ಗಿ.

**ವೃಷಭ ಲಗ್ನದವರಾದರೆ :** ಅಷ್ಟಮ ಶನಿ ಆಗಾಗ್ಗೆ ಕಾಡುತ್ತೈತಿ, ಸಂಸಾರದಲ್ಲಿ ಡೆಲಿಕೇಟಾಗಿ ಎಲ್ಲರಲ್ಲೂ ವರ್ತಿಸಿ, ಹೆಂಡತಿ ಯಾ ಪತಿಯನ್ನು ಅನಾವಶ್ಯಕ ಎದುರು ಹಾಕಿಕೊಂಡು ಹ್ಯಾಪಿ ಮೋರೆ ಹಾಕಿಕೊಳ್ಳುವ ಬದಲು ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಟೈಟ್ ಮಾಡಿ, ವೃಥಾ ಯಾರಿಗೂ ಹಣ ಖರ್ಚು ಮಾಡಿ ಮೈ ಪರಚಿಕೊಳ್ಳುವಂತೇ ಮಾಡದೆ ಜಾಣತನವಿರಲಿ. ಹೇಗಿದ್ದರು ಗುರು ನಿಮ್ಮ ಆಪತ್ಬಾಂದವ, ನಿಮ್ಮ ತಂದೆಯಾ ಮಾವನ ಹತ್ತಿರ ನಯವಾಗಿ ವರ್ತಿಸಿಕೊಳ್ಳಿ, ಲಾಭವಿದೆ.

**ನೀವು ಮಿಥುನ ಲಗ್ನದವರಾದರೆ :** ಇಂದು ನಿಮ್ಮ ಬುದ್ಧಿ ಶಕ್ತಿಗೆ (ಇರಲಿ, ಬಿಡಲಿ ಅದು ಬೇರೆ) ಬೆಲೆಕೊಡುವ ಹಿರಿಯ ಅಧಿಕಾರಿಗಳಿದ್ದಾರೆ, ಅಂಥವರುಗಳಿಗೆ ಸ್ವಲ್ಪ ಹೆಚ್ಚಿಗ್ಗೇನೇ ಬೆಣ್ಣೆ

ಹಚ್ಚುವದರಿಂದ ಉಪಯೋಗವಿದೆ. ಸಮಯ ನೋಡಿ ಮೋಡಿ ಮಾಡಿ (ಇಲ್ಲಿ, 'ಮೋಡಿ'ಯ ಜಾಗದಲ್ಲಿ 'ಮೋದಿ' ಎಂಬ ಪ್ರಯೋಗ ಸರಿಯಾದರೂ ನಾವು ಹಾಗೆ ಹೇಳುತ್ತಿಲ್ಲ.) ಉದ್ಯೋಗದಲ್ಲಿ ಪ್ರತಿಷ್ಠೆ, ಲಾಭ, ಪ್ರಮೋಷನ್ನಗೆ ಅವಕಾಶ ಉಂಟು. ಫಲಿತಾಂಶ ನೀಡುವಾಗ ಶನಿಯು ನಿಧಾನ ಮಾಡಿದರೂ, ಭಾಗ್ಯಕ್ಕೆ ಇಂಬು ಕೊಡುವುದಿದೆ. ರೇಸ್ ಕೋರ್ಸಿಗೂ ಮುನ್ನುಗ್ಗಿ. ಅಳಿಯಂದಿರ ಬಳಿ ಸುತಾರಾಂ ಚರ್ಚೆ ಬೇಡ.

**ನೀವು ಕಟಕ ಲಗ್ನದವರಾದರೆ :** ಗುರುವು ತನ್ನದೇ ಸ್ವಂತವಾದ ಭಾಗ್ಯಸ್ಥಾನಕ್ಕೆ ದೃಷ್ಟಿ ನೇರ ಬೀರುವುದರಿಂದ ನಿಮಗೆ ಅತಿಶಯವಾದ ಗೌರವ, ಸನ್ಮಾನ ಲಭ್ಯವಿದೆ. ಎರಡೂ ಕೈಗಳಿಂದ ಬಾಚಿ ಕೊಳ್ಳಿ. ಆದರೆ ತಿನ್ನುವುದರಲ್ಲಿ ಹಿತ ಮಿತವಿರಲಿ, ಅಜೀರ್ಣ ರೋಗಕ್ಕೆ ಅವಕಾಶವಿದೆ, ಹಾಲು ನಿಮ್ಮ ಮಿತ್ರ, ಆಲ್ಕೋಹಾಲು ಅಲ್ಲ, ಅರ್ಥವಾಯಿತಲ್ಲಾ? ಅನಾವಶ್ಯಕ ತೊಂದರೆಗಳನ್ನು ಹೆಗಲಿಗೆ ಹಾಕಿಕೊಳ್ಳುವುದುಂಟು. ಮನೆಯಲ್ಲಿ ಶಾಂತಿ ಕಾಪಾಡಿಕೊಳ್ಳುವುದು ನಿಮ್ಮ ಪ್ರಾತಃಸ್ಮರ ಕಾರ್ಯವಾಗಲಿದೆ. ಮೊದಲೇ ಹೇಳಲಿಲ್ಲ ಎನ್ನಬೇಡಿ.

**ನೀವು ಸಿಂಹ ಲಗ್ನದವರಾದರೆ :** ಕುಟುಂಬ ಸ್ಥಾನದ ಗುರು. ತ್ರಿಕೋನದಲ್ಲಿ ಶನಿ ಹೆಚ್ಚೇನು ತೊಂದರೆ ಕಾಣಿಸುತ್ತಿಲ್ಲ, ಆಗಾಗ್ಗೆ ಲಾಭವು ಉಂಟು. ಆದರೂ ಹುಷಾರು, ಸಪ್ತಮಾಧಿಪತಿ ಶನಿಯೇ ಮರೆಯಬೇಡಿ, ಹೆಂಡತಿಯ ನಾಲಿಗೆಗೆ ಹೆದರಬೇಕಾಗುತ್ತದೆ. ಅಂಥ ವೇಳೆ ಜಾಗ ಖಾಲಿ ಮಾಡಿ, ಮಾತಿಗೆ ನಿಂತರೆ, ನಮ್ಮ ಗ್ರಹಚಾರ ನಿಮಗೆ ಕೈಕೊಡುವುದಿದೆ. ಭಾವಮೈದುನರನ್ನು ದೂರವಿಟ್ಟಷ್ಟೂ... ಯು ಕ್ಯಾನ್ ಫಿಲ್ ಅಪ್ ಬ್ಲಾಂಕ್ಸ್

**ನೀವು ಕನ್ಯಾ ಲಗ್ನದವರಾದರೆ :** ನಿಮ್ಮ ದಶಾ ಭುಕ್ತಿ ಹೇಗಾದರೂ ಸರಿ, ''ಗುರುವಿನ ಗುಲಾಮನಾಗುವ ತನಕ...'' ಗೊತ್ತಲ್ಲಾ ದಾಸನ ಮಾತು? ಈಗ ಗುರು ನಿಮ್ಮ ಕೈ ಹಿಡಿದಿದ್ದಾನೆ, ಗಟ್ಟಿಯಾಗಿ ಸಗಣಿ ಹಿಡಿದ ಕೈ ಆದರೂ ಬಂಗಾರವಾಗಬಲ್ಲದು. ಬಾಚಿಕೊಳ್ಳಿ, ಆದರೆ ಮರೆಯದಿರಿ. ಬಾಚಿಕೊಂಡದ್ದರಲ್ಲಿ ನಿಮಗೆ ಗೊತ್ತಿಲ್ಲದಂತೆ ನಿಮ್ಮ ಹೆಂಡತಿಗೇ ಮುಕ್ಕಾಲು ಪ್ಲಸ್ ಮೂರೂ ಪಾಲು ಹೋಗಿ ಸೇರಿಬಿಟ್ಟಿರುತ್ತೆ! ಇನ್ನು ಮಿಕ್ಕಿದ್ದರೆ ನಮ್ಮ ಕ್ಲಬ್ ತನಕ ಬರಲಿ.

**ನೀವು ತುಲಾ ಲಗ್ನದವರಾದರೆ :** ಹನ್ನೆರಡರಲ್ಲಿ ಗುರು, ನಿಮ್ಮ ಸ್ವಾಭಿಮಾನ, ಪ್ರತಿಷ್ಠೆಗೆ ಧಕ್ಕೆ ಉಂಟು. ನಮ್ಮ ಮಾತು ನಂಬಿ, ಹೆಣ್ಣು ಕೊಟ್ಟ ಮಾವನ ಬಳಿ ಮಾತಿಗೆ ನಿಲ್ಲಬೇಡಿ, ವಿದ್ಯಾರ್ಥಿಗಳಾದರೆ ಪ್ರೊಫೆಸರಗಳ ಬಳಿ ಸಿಕ್ಕಿ ಹಾಕಿಕೊಳ್ಳುವ ಸಂದರ್ಭಗಳು ಹೇರಳವಾಗಿವೆ. ಶನಿ ತಕ್ಕಮಟ್ಟಿಗೆ ಅವನ ಹಿಡಿತದಿಂದ ಬಿಟ್ಟು ಬೇರೆಡೆ ಗಮನ ಬೀರುವುದರಿಂದ ಅಲ್ಲಿಯ ತನಕ ಕುಟುಂಬದಲ್ಲಿ ಶಾಂತಿ, ನೆಮ್ಮದಿ ಉಂಟು. ಮಕ್ಕಳಲ್ಲಿ ರಾಜಿ ಸೂತ್ರಗಳು ಫಲಿಸಲಿವೆ. ನಿಮ್ಮ ಸಂಗಡಿಗ, ಹೆಂಡತಿ, ಬಾಸುಗಳು ನಿಮ್ಮ ಬಗ್ಗೆ ಮರುಕ ತೋರುವುದಿದೆ. ಆ ಕ್ಷಣಗಳನ್ನು ಸರಿಯಾಗಿ ಉಪಯೋಗಿಸಿಕೊಂಡರೆ ನಿಮ್ಮ ಇಷ್ಟಾರ್ಥ ಸಿದ್ಧಿಸುವ ಸಂಭವವುಂಟು.

**ನೀವು ವೃಶ್ಚಿಕ ಲಗ್ನದವರಾದರೆ :** ನಿಮ್ಮ ಸ್ವಭಾವವೇ ಇನ್ನೊಬ್ಬರನ್ನು ಚೇಳು ಕುಟುಕಿದಂತೆ ಮಾಡುವದಿದ್ದು, ಈ ಎರಡು....., ಮತ್ತಾರು ಮಾಸ ಅಂಥಹ ಕೆಲಸಕ್ಕೆ ಕೈ ಹಾಕದಿರಿ. ಶನಿ ನಿಮಗೆ ಅಷ್ಟಮ ಫಲ ಕಾರಕ, ಮರೆಯದಿರಿ. ಇದುವರೆಗೆ ಅಂದರೆ ನಿನ್ನೆ ಮೊನ್ನೆವರೆಗೆ ನೀವು ಆಡಿದಂತೆ ನಡೆಯುವದಿತ್ತು. ಇನ್ನ ಮುಂದೆ ಯೋಚಿಸಿ, ಸೂಕ್ಷ್ಮವಾಗಿ ವರ್ತಿಸಿ. ಸದ್ಯಕ್ಕೆ ಗುರು

ಲಾಭಕಾರಕನಾಗಿದ್ದು ಆಗಸ್ಟ್ ನಂತರ ಅವನೂ ನಿಮ್ಮನ್ನು ಕಂಡರೆ ಸೆಟೆದುಕೊಳ್ಳುವದಿದ್ದು ಖರ್ಚು-ವೆಚ್ಚಗಳ ಬಗ್ಗೆ ಯೋಚಿಸಿ, ತೂಗಿ ನೋಡಿ ಮುಂದುವರೆಯಿರಿ. ಸಂಸಾರ ಗುಟ್ಟು, ವ್ಯಾಧಿ ರಟ್ಟು ಅನ್ನುವ ಹಾಗೆ ನಡೆದರೆ ಕ್ಷೇಮ.

**ನೀವು ಧನುರ್ ಲಗ್ನದವರಾದರೆ :** ಕರ್ಮ ಸ್ಥಾನ ಹಾಗೂ ಲಗ್ನಾಧಿಪತಿ ಗುರು ನಿಮ್ಮ ಉದ್ಯೋಗದಲ್ಲಿ ಆಗಸ್ಟ್ ಮಾಸದವರೆಗೂ ಏನೆಲ್ಲಾ ಅನುಕೂಲ, ಬಡತಿ ಕೊಡುವ ಸಾಧ್ಯತೆ ನಿಚ್ಚಳವಾಗಿ ನಮ್ಮ ಸ್ಪೆಷಲ್ ದುರ್ಬೀನು ಮೂಲಕ ಕಾಣುತ್ತಿದೆ. ಆದರೆ ಮರೆಯದಿರಿ, ಛಾಯಾಪುತ್ರನು ಲಗ್ನದಲ್ಲೇ ಇದ್ದು ಅದೇ ಸಪ್ತಮ ಹಾಗೂ ಹತ್ತರ ಮೇಲೆ ಕಣ್ಣು ಹಾಯಿಸಿ, ಆಗಾಗ್ಗೆ ದುರ್ಬೀನಿನಲ್ಲಿ ಅಡ್ಡಡ್ಡ ಬಂದು ನಿಧಾನ ಮಾಡುವದು ಕಾಣಬರುತ್ತಿದೆ. ಸಾಕಷ್ಟು ಎಳ್ಳೆಣ್ಣೆ, ಬತ್ತಿ ದೀಪ ಹಚ್ಚಿ, ಸಿಕ್ಕಸಿಕ್ಕವರಿಗೆಲ್ಲ ಡೊಗ್ಗು ಸಲಾಮು ಹಾಕುವ ಬದಲು ಶನಿ ದೇವರಿಗೆ (ನೀವು ನಾಸ್ತಿಕರಾದರೆ ಈ ಭವಿಷ್ಯ ಓದಬೇಕಿಲ್ಲ) ಹಾಕಿ ಸುಧಾರಿಸಿಕೊಳ್ಳಿ. ಮಿಕ್ಕ ವಿಚಾರಕ್ಕೆ ನಮ್ಮನ್ನು ಬಂದು ಕಾಣಿ. ನಾವು ನಿಮಗೆ ಬಾ ಎಂದು ಹೇಳಲಾಗದಷ್ಟೇ.

**ನೀವು ಮಕರ ಲಗ್ನದವರಾದರೆ :** ನಿಮ್ಮ ಲಗ್ನಾಧಿಪತಿ ಸೂರ್ಯಪುತ್ರ ವ್ಯವಸ್ಥಾನದಲ್ಲಿದ್ದ ನಿಮ್ಮ ಇಡೀ ಜೀವನವೆ ತಪ್ಪು ನಂಬರಿನ ರೇಸ್ಕುದುರೆಯ ಬಾಲಕ್ಕೆ ಕಟ್ಟಿದ ಹಣದಂತೆ ನಷ್ಟವಾದಂತೆ ಅನಿಸಿದರೂ ಗುರು ನಿಮ್ಮ ಆಪತ್ಕಾಲಕ್ಕೆ ಮಕ್ಕಳ ಮೂಲಕ ಸಾಕಷ್ಟು ರಿಪೇರಿ ಮಾಡುವನು. ತಂದೆಯಂತಹವರ ಸಹಾಯವು ನಿಚ್ಚಳವಾಗಿದೆ. ಹಾಗೆಂದು ಸುಮ್ಮನಿರದಿರಿ. ''ಗೋವಿಂದನ ದಯೆಯಿರಲಿ'' ಎಂದು ನಿತ್ಯ ಭಜನೆ ಮಾಡಿ.

**ನೀವು ಕುಂಭ ಲಗ್ನದವರಾದರೆ :** ನೀವು ಬಹು ವಿವೇಕಸ್ಥರೆಂದು ಅನೇಕ ಜರತಾರಿ ಗುರುಗಳು ಹೇಳುವುದಿದೆ. ಆದರೆ ನಾವು ಯಾವುದನ್ನು 'ಪ್ರತ್ಯಕ್ಷ ನೋಡು, ನಂತರ ಪ್ರಮಾಣಿಸಿ ಮಾತಾಡು' ಅನ್ನೋ ತತ್ವದವರು. ಕುಂಡಲಿಯಲ್ಲಿ ಏನು ಹೇಳುತ್ತದೆ? ನಿಮ್ಮ ಲಗ್ನಾಧಿಪತಿ ಶನಿಯು ನಿಮ್ಮ ಕರ್ಮಸ್ಥಾನದಿಂದ ನೋಡುತ್ತಾ ಒಳ್ಳೆಯದನ್ನೇ ಮಾಡ ಬಯಸುತ್ತಾನೆ. ಗುರು ದೃಷ್ಟಿ ವಕ್ರವಾಗಿದ್ದರೆ ಯೋಚನೆ ಬೇಡ. ಮಾವನನ್ನು ವಿಚಾರಿಸಿಕೊಂಡು ಅವರ ಹಿತೋಪದೇಶಕ್ಕೆ ಅರ್ಥಾತ್ ನಿಮ್ಮ ಪಾರ್ಟನರ್ ಮಾತಿಗೆ ಬೆಲೆ ಕೊಟ್ಟು ದಾರಿ ನೋಡಿಕೊಳ್ಳಿ. ಮೇ ಗಾಡ್ ಬ್ಲೆಸ್ ಯು. ಏನಾದರೂ ಟೀವೀಗಳಲ್ಲಿ ಕಾಣಿಸಿಕೊಳ್ಳುವ ಸಂಖ್ಯಾಶಾಸ್ತ್ರ ಪ್ರವೀಣರುಗಳಿಂದ ಮೈಲಿಯಷ್ಟು ಅಂತರ ಕಾಯ್ದುಕೊಳ್ಳಿ.

**ನೀವು ಮೀನ ಲಗ್ನದವರಾದರೆ :** ನಿಮಗೆ ಯಾರ ಬೆಂಬಲ ಬೇಡವೇ ಬೇಡ ನಿರಂತರ ಗುರು ಸಂಬಂಧ ಇರಿಸಿಕೊಂಡು ನೀವು ಆಡಿದ್ದೇ ಆಟ ಅನ್ನುವ ತರಹ ಆಗಸ್ಟ್‌ವರೆಗೆ ನಡೆಯುವುದಿದೆ. ಆದ್ದರಿಂದ ಹಿಗ್ಗಿ, ಬೀಗಿ ಎಲ್ಲರನ್ನು ಎದುರು ಹಾಕಿಕೊಳ್ಳುವ ಕೆಲಸಕ್ಕೆ ಕೈ ಹಾಕದಿರಿ. ಕಾರಣ ಶನಿ ನಿಮಗೆ ತಗ್ಗಿಸಲು ಮಾಡುತ್ತಿರುವುದನ್ನ ನಮ್ಮ ವಿಚಿತ್ರ ದುರ್ಬೀನಿನಲ್ಲಿ ರಂಗುರಂಗಾಗಿ ಕಾಣುತ್ತಿದೆ. ನಮ್ಮ ಈ ಮಾತಿನಲ್ಲಿ ಅನುಮಾನವಿದ್ದರೆ ಜರತಾರಿ ಪಂಚೆ, ಶಾಲುಧಾರಿಗಳನ್ನು ವಿಚಾರಿಸಿ, ಮತ್ತೆ ನಮ್ಮ ಬಳಿ ಕಾಲು ಇಡಬೇಡಿ. ಒಟ್ಟಿನಲ್ಲಿ ಹೆಂಡತಿ ಈ ವರುಷ ನಿಮಗೆ ಹಿತವಾದಿ.

# ವ್ಯಂಗ್ಯ ಮೆಲುಕು

- ಪ್ರಕಾಶ್ ಶೆಟ್ಟಿ

ದಿನಪತ್ರಿಕೆಗಳ ಮುಖಪುಟದಲ್ಲಿ ಪಾಕೆಟ್ ಕಾರ್ಟೂನ್ ಅಂಕಣ ಪ್ರಕಟಿಸುವ ರೂಢಿ ಬಹುಶಃ ಭಾರತದಲ್ಲಿ ಮಾತ್ರ ಇದೆಯೆಂದು ಕಾಣುತ್ತದೆ. ಐವತ್ತರ ದಶಕಗಳಿಂದಲೂ ಓದುಗರಿಗೆ ಇದೊಂದು ರೀತಿಯಲ್ಲಿ ಉಪ್ಪಿನಕಾಯಿ. ವಕೀಲರಾಗಿದ್ದ ರಘು ಅವರು 'ನವಭಾರತ'ಕ್ಕಾಗಿ ರಚಿಸುತ್ತಿದ್ದ 'ಶಿಂಗಣ್ಣಾ', ಕರ್ತರ ಹೆಸರೇ ಇಲ್ಲದೆ ಪ್ರಕಟವಾಗುತ್ತಿದ್ದ 'ಪ್ರಜಾವಾಣಿ'ಯ 'ಚಿನಕುರಳಿ' ಮತ್ತು 'ಕನ್ನಡ ಪ್ರಭ'ದ 'ಇದು ಪ್ರಪಂಚ ' 'ಸಂಯುಕ್ತ ಕರ್ನಾಟಕ'ದಲ್ಲಿ ನರೇಂದ್ರ ಅವರ 'ಮನೆ ಮಾತು'

ಶಿಂಗಣ್ಣಾ .....



"ಮಹಾಜನರೇ, ನಾನು ಹೇಳುತ್ತಿರುವುದು ನಿಜ, ಸತ್ಯ... ನಾನು ಒಬ್ಬ ಮಂತ್ರಿಯೆಂದು.... ನಾನು ಹೇಳುವುದನ್ನು ನಂಬದೆ ಇರಬೇಡಿ....!"

ಚಿನಕುರಳಿ



ಇದು ಪ್ರಪಂಚ




ಇನ್ನು ಕರಟಕ್ಕೂ ಬಲು ಡಿಮಾಂಡ್!

ಮನೆ ಮಾತು

ನರೇಂದ್ರ



ಚುನಾವಣೆ ಫಲಿತಾಂಶದ ಮೇಲೆ ನನ್ನ ಜತೆ ಪಣ ಕಟ್ಟಿ ಸೋತವ ನನ್ನ ಪತ್ತೆ ಹಚ್ಚೋದು ನನಗೆ ಈವರೆಗೂ ಸಾಧ್ಯವಾಗಿಲ್ಲ.

# ''ರೆಸಲ್ಯೂಷನ್ ಹಾವಳಿ''

**- ಲತಾ ಹೆಗಡೆ**

ಅಷ್ಟೇನೂ ಕಾಡದ ಈ ವರ್ಷದ ಮಾಗಿಯ ಚಳಿ ಒಂದೆಡೆಯಾದರೆ; ಸಡಗರ, ಸಂಭ್ರಮ, ಸ್ನೇಹ, ಸೌಹಾರ್ದ, ಬಳುವಳಿಗಳನ್ನು ಹಂಚಿಹೋದ ಸಾಂತಾ ಅಜ್ಜನ ಗುಂಗು ಇನ್ನೊಂದೆಡೆ. ಇವೆಲ್ಲದರ ನಡುವೆ ಹೊಸ ಆಸೆ ಆಕಾಂಕ್ಷೆ ಭರವಸೆಗಳ ಮೂಟೆ ಹೊತ್ತು ಯುಗಪುರುಷ ಹೊಸವರುಷವೆಂಬ ಅಂಗಿಯ ತೊಟ್ಟು ಹರುಷದಿಂದ ಹೊಸ್ತಿಲಲ್ಲಿ ನಿಂತಿದ್ದಾನೆ. ನಮ್ಮ ಹೊಸವರುಷದ ಸಂಭ್ರಮ ಚೈತ್ರ ಮಾಸದ ಆರಂಭವಾದರೂ ದೈನಂದಿನ ಬದುಕಲ್ಲಿ ಆಂಗ್ಲ ಕ್ಯಾಲೆಂಡರ್‌ನ ಬಳಕೆ ಹಾಸು ಹೊಕ್ಕಾಗಿರುವುದರಿಂದ ಜನವರಿ ಒಂದನ್ನು ವರ್ಷದ ಆದಿ ಎಂದು ಪರಿಗಣಿಸಿ ಆಚರಿಸುವುದೂ ಸಾಮಾನ್ಯವಾಗಿಬಿಟ್ಟಿದೆ. ಇನ್ನು ಧಾವಂತ ಯುಗದ ಪ್ರಭಾವವೆಂಬಂತೆ ವರ್ಷಗಳೂ ಪುರುಸೊತ್ತಿಲ್ಲದಂತೆ ಅಷ್ಟೇ ವೇಗದಲ್ಲಿ ಉರುಳುತ್ತವೆ. ಕಾಲದ ಮಹಿಮೆಯೋ ಅಥವಾ ಬದಲಾದ ದೃಷ್ಟಿಕೋನವೋ ಒಟ್ಟಿನಲ್ಲಿ ಮನುಷ್ಯನ ರೀತಿ ನೀತಿ ರಿವಾಜುಗಳೂ ಅಷ್ಟೇ ಶೀಘ್ರದಲ್ಲಿ ಬದಲಾಗಿ, ಮಾಲ್ ಸಂಸ್ಕೃತಿ ಎಲ್ಲೆಲ್ಲೂ ವಿಜೃಂಭಿಸುತ್ತಿದೆ. ಹೊಸವರ್ಷದ ನೆಪದಲ್ಲಿ ಮೋಜು, ಮಸ್ತಿ, ಕುಡಿತ, ಕುಣಿತ, ದುಂದುವೆಚ್ಚ ಮಿತಿಮೀರುತ್ತಿದ್ದರೆ ಕೈಗೊಳ್ಳುವ ತರಹೇವಾರಿ ನಿರ್ಣಯಗಳ ಭರಾಟೆಯೇ ನನ್ನನ್ನು ಅತಿಯಾಗಿ ಕಾಡುತ್ತಿದೆ!

ಹೇಳುವುದಾದರೆ ಇತ್ತೀಚಿನ ವರುಷಗಳಲ್ಲಿ ಹೊಸವರ್ಷಕ್ಕೆ ಹೊಸ ನಿರ್ಣಯಗಳನ್ನು ಕೈಗೊಳ್ಳುವುದು ಸಂಪ್ರದಾಯವಾಗಿಬಿಟ್ಟಿದೆ. ಆರಂಭಶೂರರಂತೆ ನಿರ್ಣಯಗಳನ್ನು ಕೈಗೊಂಡು ನಂತರದಲ್ಲಿ ಪಾಲಿಸಲಾಗದೇ ಗಾಳಿಗೆ ತೂರಲ್ಪಟ್ಟಿದ್ದೂ ಅಷ್ಟೇ ಸತ್ಯವಾದರೂ ಯಾರೇ ಸಿಗಲಿ ಹೊಸವರ್ಷದ ಅಭಿನಂದನೆಗಳ ವಿನಿಮಯದ ನಂತರ ತೂರಿ ಬರುವ ಮೊದಲ ಪ್ರಶ್ನೆಯೇ 'ಹೊಸ ವರ್ಷಕ್ಕೇನು ರೆಸಲ್ಯೂಷನ್?' ಕೇಳುವುದೇ ಒಂದು ಫ್ಯಾಶನ್ ನಂತಾಗಿದೆ. ಮೊದಮೊದಲು ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯೇ ಮೋಜೆನ್ನಿಸಿತ್ತು. ಯಾರ ನಿರ್ಣಯಗಳು ಯಾವುವು? ಯಾರೆಷ್ಟು ಪಾಲಿಸಿದ್ದಾರೆಂಬುದನ್ನ ಪರೀಕ್ಷಿಸುವುದರಲ್ಲಿ ಕೆಟ್ಟ ಕುತೂಹಲ ತೋರುತ್ತಾ ಕಾಲೆಳೆಯುವುದನ್ನು ರೂಢಿಸಿಕೊಂಡಿದ್ದೆ. ಆದರೆ ಕಾಲಾನಂತರದಲ್ಲಿ ನಾನೂ ಕೂಡ ಸಮೂಹಸನ್ನಿಗೊಳಗಾದವಳಂತೆ ಹೊಸವರ್ಷಕ್ಕೆ ನಿರ್ಣಯಗಳನ್ನು ಕೈಗೊಳ್ಳತೊಡಗಿದ್ದೆ. ಕೆಲವೊಂದು ನಿರ್ಣಯಗಳನ್ನು ಪಾಲಿಸುವ ನಿಟ್ಟಿನಲ್ಲಿ ಭಾಗಶಃ ಯಶ ಕಂಡೆನಾದರೂ ಅದೊಂದು ನಿರ್ಣಯ ಮಾತ್ರ ತೃಣಮಾತ್ರವೂ ಯಶ ಕಾಣದೇ ಮನದ ಮೂಲೆಯಲ್ಲಿ ಗೂಟ ಹೊಡೆದು ಕುಳಿತು ಇನ್ನೂ ಅಣಕಿಸುತ್ತಲೇ ಇದೆ. ಎಷ್ಟೆಂದರೂ ನಾಯಿ ಬಾಲ ಡೊಂಕೇ ಅಲ್ಲವೇ?

ವರ್ಷಗಳ ಹಿಂದೆ ಯಾರನ್ನೂ ವಿನಾಕಾರಣ ಸಂಶಯಿಸಬಾರದು, ಅವರಾಡುವ ಮಾತಲ್ಲಿ ಅಪಾರ್ಥ ಹುಡುಕಬಾರದು ಎಂಬ ಅತೀ ಸರಳ (ಹಾಗೆಂದುಕೊಂಡಿದ್ದೆ!) ನಿರ್ಣಯ ಕೈಗೊಂಡಿದ್ದೆ. ಅದನ್ನು ಪಾಲಿಸುವ ಹುರುಪಿನಲ್ಲಿ ಸ್ವಲ್ಪ ದಿನಗಳೂ ನಿರ್ವಿಘ್ನವಾಗಿ ಸರಿದಿದ್ದವು. ಅದೊಂದು ದಿನ ತಯಾರಾಗಿ ಎಲ್ಲೋ ಹೋಗುತ್ತಿದ್ದಾಗ ಉರಿಯೋ ಬೆಂಕಿಗೆ ತುಪ್ಪ ಸುರಿಯುವಲ್ಲಿ ಚಾಣಾಕ್ಷರಾದ ಆ ಪರಿಚಯಸ್ಥರು ಎದುರಾಗಬೇಕೇ? ''ಯಾಕ...

ಆರಾಮಿಲ್ಲೇನು ಹಿಂಗ್ಯಾಕ್ ಒಂದ್ ನಮೂನಿ ನಡ್ಯಾಕ್ ಹತ್ತೀರಿ'' ಬಿಟ್ಟ ಬಾಣ ಗುರಿ ತಲುಪಿತ್ತು! ಮೊದಲೇ ಕೊಂಕಿಗೆ ನಿಸ್ಸೀಮರು ಬೇಕೆಂದೇ ಹೇಳುತ್ತಿರಬೇಕು. ಗುಂಗೀಹುಳ ಗುಂಯ್ಗುಡಲಾರಂಭಿಸಿದ್ದೇ ತಡ ''ನಂಗೇನಾಗ್ಯದ ಧಾಡಿ ನಿಮ್ ಚಷ್ಮಾ ನಂಬರ್‍ರ‍ು ಚೇಂಜ್ ಆಗಿರ್ಬೇಕು, ಸ್ವಲ್ಪ ತಪಾಸು ಮಾಡಸ್ಕೊಳ್ರಲ್ಲ'' ಹಲ್ಲು ಕಿರಿಯುತ್ತಲೇ ಮುಖಕ್ಕೆ ಹೊಡೆದಂತೆ ಅಡ್ಡ ಮಾತಾಡಿ ಕಾಲು ನೋಯುತ್ತಿದ್ದ ಅವಶ್ಯಕತೆಗಿಂತಲೂ ಹೆಚ್ಚು ವೇಗದಲ್ಲಿ ಬಿರಬಿರನೆ ನಡೆದಿದ್ದೆ! ಅದೇ ಗುಂಗಿನಲ್ಲಿ ಹೋಗುತ್ತ ವಿಚಾರ ಮಾಡಿದಾಗ ಅನ್ನಿಸಿತ್ತು ನನ್ನ ನಿರ್ಣಯವನ್ನು ಪಾಲಿಸುವುದು ಎಷ್ಟು ಕಷ್ಟ ಎಂದು. ಅವರೇನೋ ಸಹಜವಾಗಿಯೇ ಕೇಳಿರಬಹುದು. ಅವರ ಕಳಕಳಿಯನ್ನು ಸಂಶಯಿಸಿದ್ದು ಸರಿಯೇ? ನನ್ನ ನಿರ್ಣಯವನ್ನೊಮ್ಮೆ ಮನನ ಮಾಡಿಕೊಂಡೆ. ಇನ್ನು ಹೀಗೆಲ್ಲ ವರ್ತಿಸಬಾರದು ಎಂದು ಗಟ್ಟಿ ತೀರ್ಮಾನಕ್ಕೆ ಬದ್ಧಳಾದದ್ದು ಹೌದಾದರೂ ನಂತರದಲ್ಲಿ ಅದ್ಯಾವ ಮಾಯದಲ್ಲೋ ನನ್ನರಿವಿಲ್ಲದೆಯೇ ಅಪಾರ್ಥ ಮಾಡಿಕೊಳ್ಳುವ ನನ್ನ ಹಳೇ ಚಾಳಿಗೇ ಜೋತುಬೀಳುವುದೂ ಅಷ್ಟೇ ಸಾಮಾನ್ಯವಾಗಿ ಒಂದು ರೀತಿಯ ಚಟದಂತಾಗಿಬಿಟ್ಟಿತ್ತು.

ಅಂತಹದ್ದೇ ಇನ್ನೊಂದು ಸಂದರ್ಭ. ಸಂತೆಗೆ ಹೋಗಿ ಸಾಮಾನು ಹೊತ್ತು ಹಿಂದಿರುಗುತ್ತಿದ್ದಾಗ ರಸ್ತೆಯಲ್ಲಿ ನಿಂತು ಹರಟುತ್ತಿದ್ದ ಆ ಇಬ್ಬರು ಸ್ನೇಹಿತೆಯರು ಕಂಡಿದ್ದರು. ದೂರದಿಂದಲೇ ನನ್ನನ್ನು ಗಮನಿಸುತ್ತಿರುವ ರೀತಿಗೆ ಅವರೇನಾದರೂ ಕಮೆಂಟ್ ಮಾಡಬಹುದು, ತಲೆಕೆಡಿಸಿಕೊಳ್ಳದೇ ಗಂಭೀರವಾಗಿ ಮುನ್ನಡೆಯಬೇಕೆಂದು ಮನಸ್ಸನ್ನು ಹದಗೊಳಿಸಿಕೊಂಡಿದ್ದೆ. ಆದರೆ ನಾನು ಸಮೀಪಿಸುತ್ತಲೇ ಅವರಾಡುವ ಮಾತಿಗೆ ಬ್ರೇಕ್ ಹಾಕಿ ಸುಮ್ಮನೆ ನಗುತ್ತ ನಿಂತದ್ದು ಮಾತ್ರ ಅರಗಿಸಿಕೊಳ್ಳಲಾಗಿರಲಿಲ್ಲ. ಅವರೇಕೆ ನನಗೇನೂ ಕಮೆಂಟ್ ಮಾಡಲಿಲ್ಲ? ಆಡುತ್ತಿರುವ ವಿಷಯಕ್ಕೆ ಬ್ರೇಕ್ ಹಾಕಿದ್ದು ಏಕೆ? ಬಹುಶಃ ನನ್ನನ್ನು ಕುರಿತಾಗಿಯೇ ಮಾತಾಡುತ್ತಿರಬೇಕು. ಇದೀಗ ನನ್ನ ಬೆನ್ನ ಹಿಂದೆ ಖಂಡಿತವಾಗಿಯೂ ಆಡಿಕೊಳ್ಳುತ್ತಿರುತ್ತಾ.. ಮತ್ತೆ ಗುಂಗೀಹುಳದ ಅಬ್ಬರ ಮಾತಾಡಿದರೂ ತಪ್ಪು, ಮಾತಾಡದಿದ್ದರೂ ತಪ್ಪಾಗಿ ಭಾವಿಸುವ ಚಿತ್ತ ಚಾಂಚಲ್ಯಕ್ಕೆ ನಗುವೂ ಬಂದಿತ್ತಾದರು ಗುಂಗೀಹುಳದ ಆರ್ಭಟವೇ ಜೋರಾಗಿ ಮೇಲುಗೈ ಸಾಧಿಸಿತ್ತು.

ಎಷ್ಟೇ ಪ್ರಯತ್ನ ಪಟ್ಟರೂ ಈ ಸರಳ ನಿರ್ಣಯವನ್ನು ಮಾತ್ರ ಯಶಸ್ವಿಯಾಗಿ ಜಾರಿಗೊಳಿಸಲು ಇನ್ನೂ ನನ್ನಿಂದ ಸಾಧ್ಯವಾಗುತ್ತಿಲ್ಲ. ನನ್ನ ನಿರ್ಣಯ ಬಹಳ ಸರಳವೆನ್ನಿಸಿ ತಮಾಷೆಯಾಗಿ ಕಂಡರೂ ಅನುಷ್ಠಾನಕ್ಕೆ ತರುವುದು ಬಲು ಕ್ಲಿಷ್ಟವೆನ್ನಿಸಿದರೆ ಬೆಂಬಿಡದ ತ್ರಿವಿಕ್ರಮನಂತೆ ಅದೇ ನಿರ್ಣಯವನ್ನು ಅನೇಕ ಬಾರಿ ಕೈಗೊಳ್ಳುತ್ತಿರುವೆನಾದರು ಸೋತು ಸುಣ್ಣವಾಗಿ ದ್ರಾಕ್ಷಿಯೇ ಹುಳಿ ಎಂಬ ಗುಳ್ಳೇನರಿಯ ತೀರ್ಮಾನಕ್ಕೆ ಬದ್ಧಳಾಗಿಬಿಟ್ಟಿದ್ದೆ. ಎಷ್ಟೆಂದರೂ ನಾನು ಹುಲು ಮಾನವಳಲ್ಲವೇ? ತಾವೂ ಕೂಡ ದೇವಮಾನವರೋ ಹುಲುಮಾನವರೋ ಎಂದು ತಿಳಿದುಕೊಳ್ಳಲಿಚ್ಚಿಸುತ್ತಿರುವೆ? ಹಾಗಿದ್ದರೆ ಇನ್ನೇಕೆ ತಡ, ಈ ಸರಳ ನಿರ್ಣಯ ಒಮ್ಮೆ ಕೈಗೊಂಡು ನೋಡಿ ಆದರೆ ನಿಮಗೊಂದು ಕಿವಿಮಾತು ಸ್ನೇಹಿತರೇ.. ಕೊಂಕಾಡುವವರೇ ಎಲ್ಲೆಡೆ ತುಂಬಿದ್ದಾರೆ ಜಾಗ್ರತೆ!

❋

# ಮಧುರ ಪ್ರೀತಿ

**ಸುಧಾಮ**

**ಪು**ರಂದರ ದಾಸರು ಹೇಳಿದರು ಅಲ್ಲಿದೆ ನಮ್ಮನೆ ಇಲ್ಲಿ ಬಂದೆ ಸುಮ್ಮನೆ ಅಂತ. ಇಲ್ಲಿ ಸುಮ್ಮನೆ ಬಂದವರಿಗೂ ಒಂದು ಮನೆ ಅಂತ ಇರುತ್ತೆ, ಸಂಸಾರ ಅಂತ ಇರುತ್ತೆ. ಒಂದಲ್ಲ ಒಂದು ದಿನ ನಾವು ಎಲ್ಲವನ್ನೂ ಬಿಟ್ಟಿದ್ದು ಬಿಟ್ಟ ಹಾಗೆ ಬಿಟ್ಟು ಹೋಗಬೇಕು ಅನ್ನೋದು ಎಲ್ಲರಿಗೂ ತಿಳಿದಿದ್ದರೂ ನಾನು, ನನ್ನದು ಎಂದು ಹೊಡೆದಾಡಿಕೊಂಡೇ ಇರುತ್ತೇವೆ. ಆದರೆ ಈ ಪ್ರೀತಿಯ ಮಾತು ಎಷ್ಟು ಮಧುರ . ಒಂದು ದಿನ ತುಂಬಾ ಪ್ರಶಾಂತವಾದ ಮನೆಯಲ್ಲಿ ಒಂದು ಧ್ವನಿ ಬಂತು.

ಒಂದ್ಲೋಟ ನೀರು ತಂದ್ ಕೊಡ್ತೀಯಾ ಗಂಡಿನ ಧ್ವನಿ ಮನೆಯ ವರಾಂಡದಿಂದ.

ಅವರ ಹೆಸರು ಸದಾಶಿವರಾಯರು ವಯಸ್ಸು ಹತ್ತಿರ ಹತ್ತಿರ ಎಪ್ಪತ್ತು.

ಬಂದೇ – ಹೆಣ್ಣಿನ ಧ್ವನಿ – ಅಡಿಗೆ ಮನೆಯಿಂದ ಆಕೆಯ ಹೆಸರು ಮಧುಮತಿ – ಸದಾಶಿವರಾಯರ ಹೆಂಡತಿ.

ಏನೋ ನೆನಪಿಸಿಕೊಂಡು ತಮ್ಮ ಬೋಡು ತಲೆಯ ಮೇಲೆ ಮೆತ್ತಗೆ ತಾವೇ ಹೊಡೆದುಕೊಂಡು ತಕ್ಷಣ ತಾವೇ ಎದ್ದು ಅಡಿಗೆ ಮನೆಗೆ ಹೋಗಿ ನೀರು ಕುಡಿದರು. ಮತ್ತೆ ಹಿಂದಿರುಗಿ ಬಂದು ಸೋಫಾದಲ್ಲಿ ಕೂತರು. ಸ್ವಲ್ಪ ಹೊತ್ತಿನ ನಂತರ ಅವರ ಹೆಂಡತಿ ಹಿತ್ತಲ ಬಾಗಿಲಿನಿಂದ ಬಂದು ಗಂಡನನ್ನು " ನಿಮ್ಮ ಧ್ವನಿ ಕೇಳಿಸಿದ ಹಾಗಿತ್ತು, ನೀವೇನಾದರೂ ನನ್ನನ್ನು ಕೂಗಿದಿರಾ" ಅಂತ ಕೇಳಿದರು

"ಕುಡಿಯೋಕ್ಕೆ ನೀರು ಬೇಕಾಗಿತ್ತು, ನಿನಗೆ ಕಾಲು ನೋವು ಅನ್ನೋದನ್ನೇ ಮರೆತು ಕೂತ ಕಡೆಯಿಂದಲೇ ಕೂಗಿಬಿಟ್ಟೆ" ಅಂದರು ಬೇಜಾರಿನಿಂದ.

ಹೆಂಡತಿ ಬಂದು ಮಂಚದ ಮೇಲೆ ತಮ್ಮ ಬಳಿ ಕೂತ ಮೇಲೆ ಹತ್ತಿರ ಹೋಗಿ ಹೆಂಡತಿಯ ಕಾಲನ್ನು ತಮ್ಮ ತೊಡೆಯ ಮೇಲಿರಿಸಿಕೊಂಡು ಹಿತವಾಗುವ ಹಾಗೆ ನೀವಿದರು.

"ನೀವು ಹೀಗೆ ಆರೈಕೆ ಮಾಡ್ತಾ ಇದ್ರೆ ನೋವು ನನ್ನನ್ನು ಬಿಟ್ಟು ಹೋಗೋದೇ ಇಲ್ಲ" ಅಂದರು ಮಧುಮತಿ.

"ನನಗಿಂತ ನಿನಗೆ ಐದು ವರ್ಷ ವಯಸ್ಸು ಹೆಚ್ಚು ಅದಕ್ಕೇ ನೋವು ನಿನಗೆ ಮೊದಲೇ ಬಂದಿದೆ" ಅಂದರು.

"ನಾನು ನಿಮಗಿಂತ ದೊಡ್ಡೋಳು ಅನಿಸಿದ ಆ ದಿನ ನಿಮಗೆ ಇವಳು ನನಗೆ ಬೇಡ ಅನಿಸಿರಲಿಲ್ವಾ" ಕೇಳಿದರು ಮಧುಮತಿ.

“ಛೀ ಹುಚ್ಚಿ ಪ್ರೀತಿಗೆ ವಯಸ್ಸೇನೇ, ಈಗ ವಯಸ್ಸಾಗಿರೋದು ನಮ್ಮ ದೇಹಕ್ಕೇ ಹೊರತು ಪ್ರೀತಿಗಲ್ಲ. ಕುಳ್ಳು, ದಪ್ಪ, ಎತ್ತರ, ಕಪ್ಪು, ಅಂತೆಲ್ಲ ನೋಡ್ತೀವಿ. ಆದರೆ ಪ್ರೀತಿ ಹಾಗಲ್ಲ. ಅದಿಕ್ಕೆ ಯಾರ ಮೇಲೆ ಇಷ್ಟ ಆಗುತ್ತೋ ಅಲ್ಲೇ ಟೆಂಟ್ ಹಾಕಿಬಿಡುತ್ತೆ “ ಅಂದರು.

“ಸಾಕು ಸಾಕು ವ್ಯಾಖ್ಯಾನ – ಒಂದು ಕೇಳಿದರೆ ಹತ್ತು ಹೇಳ್ತೀರ, ಒಂದು ಕೇಳಿದರೆ ಹತ್ತು ಕೊಡಿಸ್ತೀರ, ಇದು ನಿಮ್ಮ ಸ್ವಭಾವ.”

“ನಿಮ್ಮ ಪ್ರೀತಿನ ಈ ಜನ್ಮದಲ್ಲಿ ಅರಗಿಸಿಕೊಳ್ಳೋಕೇ ಆಗ್ತಿಲ್ಲ”

ಸದಾಶಿವರಾಯರು ನಕ್ಕರು “ನಿನಗೊಂದು ವಿಚಾರ ಗೊತ್ತಾ, ನಾನು ನಿನಗೆ ಏನು ಕೊಟ್ರೂ ಅದು ನಾನು ನಿನಗೆ ಕೊಡ್ತಿದೀನಿ ಅನಿಸ್ತನೇ ಇರ್ಲಿಲ್ಲ. ನನಗೆ ನಾನೇ ಕೊಟ್ಕೊತಾ ಇದೀನಿ ಅನಿಸೋದು. ಯಾಕೇಂದ್ರೆ ನಿನ್ನೊಳಗೆ ಇರೋದು ನಾನೇ ತಾನೇ”

ಮಧುಮತಿ ತುಸು ವಾರೆಯಾಗಿ ನಕ್ಕರು

“ನಿಮ್ಮದು  ಮಾಗಿದ ಪ್ರೀತಿಯೂ ಹೌದು, ನನ್ನ ಪಾಲಿಗೆ ಮಾಗದ ಪ್ರೀತಿಯೂ ಹೌದು . ಈ ನಿಮ್ಮ ಪ್ರೀತಿಯನ್ನು ಮುಂದಿನ ಜನ್ಮಕ್ಕೆ ಕ್ಯಾರೀ ಫಾರ್ವರ್ಡ್ ಮಾಡೋಣ.”

“ನೀನೇನು ನನಗೆ ಕಡಿಮೆ ಪ್ರೀತಿ, ಸಂತೋಷ ಕೊಟ್ಟಿದೀಯ ಹೇಳು. ಕೇಳಿದಷ್ಟು, ಕೇಳಿದಾಗ, ಕೇಳದೇ ಇದ್ದಾಗಲೂ ಬೊಗಸೆ ಬೊಗಸೆಯಾಗಿ ಕೊಟ್ಟಿದ್ದೀಯ, ಅಲ್ವೇನೇ”

ಇಬ್ಬರ ಕಣ್ಣಲ್ಲೂ ನೀರು ಬಂತು.

ಮದುಮತಿ  ಗಂಡನಿಗೆ ಒತ್ತಿಕೊಂಡು “ ರೀ, ನಾನಿಲ್ದೇ ಇದ್ರೆ ನೀವು ಏನು ಮಾಡ್ತೀರ” ಅಂತ ಕೇಳಿದಳು

“ಏನು ಪ್ರಶ್ನೆ ಇದು. ಸರಿ ನೀನು ಮೊದಲು ಹೇಳು ನಾನಿಲ್ದೇ ಇದ್ರೆ ನೀನು ಏನು ಮಾಡ್ತೀಯ” ಸದಾಶಿವರಾಯರು ಮರುಪ್ರಶ್ನೆ ಹಾಕಿದರು

ಮಧುಮತಿ ತುಟಿಯೂದಿಸಿ “ಮೊದಲು ನಾನು ಪ್ರಶ್ನೆ ಕೇಳಿದ್ದು. ನೀವು ಉತ್ತರ ನೀಡಿ. ನಂತರ ನಿಮ್ಮ ಪ್ರಶ್ನೆಗೆ ನಾನು ಉತ್ತರ ನೀಡ್ತೀನಿ. ಎಲ್ಲಿ ಹೇಳಿ, ನೀವು ನಾನಿಲ್ದೆ ಇದ್ರೆ ಏನು ಮಾಡ್ತೀರ”

“ಅಂಥಾ ದಿನ ಎಲ್ಲೇ ಬರುತ್ತೆ”

“ಬಂದ್ರೆ ಏನು ಮಾಡ್ತೀರ” ಅಂತ

“ನೀನಿಲ್ದೆ ಇದ್ರೆ ನಾನೆಲ್ಲೇ ಇರ್ತೀನಿ, ಅಷ್ಟೂ ಗೊತ್ತಾಗಲ್ವ ಹುಚ್ಚಿ ಕಣೆ ನೀನು” ಅಂದರು

ಮುಂದೆ ಇಬ್ಬರಿಗೂ ಮಾತಾಡಲಾಗಲಿಲ್ಲ.

ಕಾಮನ್ ರೂಂ ಕಹಾನಿ

# ಟೆಂಪಲ್ ರನ್

• ಗಣೇಶ ಹೆಗ್ಗಡೆ

**ಟೆಂಪಲ್ ರನ್ನೋ ಟೆಂಪಲ್‌ನಿಂದ ರನ್ನೋ..?**

ಕಾಮನ್ ರೂಮು ಸಭೆಗಳಿಗೆ ಎಂದೂ ತಡವಾಗಿ ಬರದ ರಾಯರು ಅಂದು ಒಂದು ಘಂಟೆ ಲೇಟಾಗಿ ಬಂದು 'ಉಸ್ಸಪ್ಪಾ' ಎಂದು ಅಧ್ಯಕ್ಷ ಪೀಠದಲ್ಲಿ ಕುಳಿತುಕೊಂಡಾಗ ನಾವೆಲ್ಲಾ ವಿಚಲಿತಗೊಂಡೆವು. ರಾಯರ ಮನೆ ಇದ್ದುದು ನಮ್ಮೂರಿನ ಪ್ರಸಿದ್ಧ ಕೆಳಕೋಟೆ ನಾರಾಯಣ ಸ್ವಾಮಿ ದೇಗುಲದ ಬಳಿ. ಅಲ್ಲಿಂದ ಈ ಸಭಾ ಸ್ಥಳಕ್ಕೆ ಬರಲು ಹತ್ತು ನಿಮಿಷದ ನಡಿಗೆ ಸಾಕು. ಒಂದು ಘಂಟೆಯ ಮುಂಚೆ 'ಮನೆಯಿಂದ ಹೊರಟಿದ್ದೇನೆ' ಎಂಬ ಸಂದೇಶ ರವಾನಿಸಿದ್ದ ರಾಯರು ಹೀಗೇಕೆ ಶಿಷ್ಟಾಚಾರ ಮುರಿದರು? ಎಂಬ ಬಗ್ಗೆ ನಮ್ಮೆಲ್ಲರ ಮುಖಾರವಿಂದಗಳಲ್ಲಿ ಪುಟಿದೇಳುತ್ತಿದ್ದ ಪ್ರಶ್ನಾರ್ಥಕ ಗೆರೆಗಳನ್ನು ಸೂಕ್ಷ್ಮವಾಗಿ ಗ್ರಹಿಸಿದ ರಾಯರು, 'ಸಾರಿ ಫ್ರೆಂಡ್ಸ್, ಇವತ್ತು ಮನೆಯ ಹತ್ತಿರ ಎಂಥಹ ಪ್ರಮಾದ ಆಯ್ತೂಂದ್ರೆ....' ಕಹಾನಿ ಪ್ರಾರಂಭಿಸಿದರು.

'ನಾನು ಮನೆಯ ಗೇಟಿನ ಬಳಿ ಬಂದಾಗ ದೂರದಲ್ಲಿ ಯಾರೊ ತರುಣ ದೇವಸ್ಥಾನದತ್ತ ಅಭಿಮುಖ ಮಾಡಿ ಹೆಚ್ಚು ಕಡಿಮೆ ಓಡಿಕೊಂಡು ಬರುತ್ತಿದ್ದಂತೆ ಭಾಸವಾಯ್ತು. ಬಿಳಿ ಪೈಜಾಮ, ಜುಬ್ಬಾ, ವೇಸ್ಟ್ ಕೋಟು, ಕುರುಚಲು ಗಡ್ಡದ ಈ ವ್ಯಕ್ತಿಯನ್ನು ಒಂದು ದೊಡ್ಡ ಗುಂಪು ಹಿಂಬಾಲಿಸಿ ಕೊಂಚ ಅಂತರದಲ್ಲಿ ಬರುತ್ತಿದ್ದುದು ಹತ್ತಿರ ಹತ್ತಿರ ಬಂದಾಗ ಸ್ಪಷ್ಟವಾಯ್ತು. ಇಕ್ಕೆಲಗಳಲ್ಲಿ ಪೋಲೀಸರೂ ಓಡಿಕೊಂಡು ಬರುತ್ತಿರುವುದು ಕಂಡು ಗಾಬರಿ ಆಯ್ತು. ಇಡೀ ರಸ್ತೆಯೆ ಬ್ಲಾಕ್ ಆಗಿ ವಾಹನಗಳೆಲ್ಲಾ ತಟಸ್ಥವಾಗಿ ನಿಂತಿದ್ದವು. ನಮ್ಮೂರಿನ ಜಾತ್ರೆ ಕಳೆದು ಎರಡು ತಿಂಗಳ ಮೇಲಾಗಿದೆ. ಅದ್ಯಾಕೆ ಆ ತರುಣ ಮತ್ತು ಹಿಂಬಾಲಕರು ಹಾಗೆ ಗಾಬರಿಯಿಂದ ದೇವಸ್ಥಾನದ ಕಡೆಗೆ ಓಡಿ ಹೋಗುತ್ತಿದ್ದಾರೆ? ಮೊನ್ನೆ ಟಿ.ವಿ. ಮಾಧ್ಯಮದವರು ಹೆದರಿಸಿದ ಹಾಗೆ ಗ್ರಹಣದ ಪ್ರಭಾವವೇ.... ಮುಂತಾದ ಅನುಮಾನ ಸಹಜವಾಗಿ ನನ್ನನ್ನು ಕಾಡುವ ವೇಳೆಗೆ, ಎಪ್ಪತ್ತು–ಎಪ್ಪತ್ತೈದು ವರ್ಷದ ವೃದ್ಧರೊಬ್ಬರು ಓಡುವುದನ್ನು ನಿಲ್ಲಿಸಿ, ಆ ಗುಂಪಿನಿಂದ ಬೇರ್ಪಟ್ಟು, ತೂರಾಡಿಕೊಂಡು ನನ್ನ ಬಳಿ ಬಂದು ಏದುಸಿರಿನಲ್ಲಿ, 'ಸಾರ್, ಅರ್ಜೆಂಟಾಗಿ ಕುಡಿಯೊಕ್ಕೆ ನೀರು ತೆಗೆದುಕೊಂಡು ಬನ್ನಿ, ಹಾರ್ಟ್ ಪೇಷೆಂಟು ನಾನು, ತುಂಬಾ ಸುಸ್ತಾಗಿದೆ' ಎಂದು ಅಲವತ್ತುಕೊಂಡು, ಗೇಟಿಗೆ ಶರೀರವನ್ನು ವಾಲಿಸಿ ಬೀಳದಂತೆ ನಿಂತುಕೊಂಡರು. ನೀರನ್ನು ಗಟಗಟನೆ ಕುಡಿಯುವಾಗ ಇವರನ್ನೆಲ್ಲೊ ನೋಡಿದ ನೆನಪು ನನಗೆ. ಕೇಳಲೋ?... ಬ್ಯಾಡವೊ...? ಎಂಬ ದ್ವಂದ್ವವನ್ನು ಮೆಟ್ಟಿ, 'ತಾವ್ಯಾರು ಸಾರ್? ಹೀಗೇಕೆ ನೀವೆಲ್ಲಾ ಓಡುತ್ತಿದ್ದೀರಿ? ಅಸಲಿಗೆ ಮುಂಚೂಣಿಯಲ್ಲಿ ಓಡುತ್ತಿರುವ ಆ ತರುಣ ಯಾರು? ಮತ್ತೆ ತಮ್ಮದು ಪರಿಚಿತ ಮುಖ ನನಗೆ' ಎಂದು ಕೇಳಿದಾಗ ಅವರ ಉತ್ತರ ಏನಿತ್ತು ಗೊತ್ತೆ?...

* * *

ರಾಯರು ಕಹಾನಿ ನಿಲ್ಲಿಸಿ ನಮ್ಮತ್ತ ದೃಷ್ಟಿ ಹರಿಸಿದಾಗ, ನಾವೆಲ್ಲಾ ಮತ್ತಷ್ಟು ಕುತೂಹಲಗೊಂಡೆವು. ಕಹಾನಿ ಮುಂದುವರೆಯಿತು.

"ಅವರು ಬೇರ್‍ಯಾರೂ ಅಲ್ಲ, ನಮ್ಮೂರಿನ ಎಂ.ಎಲ್.ಎ. ರಾಮಪ್ಪನವರು. ಅವರು ನಮ್ಮೂರಿಗೆ ಬಂದು ಹೆಚ್ಚೂ ಕಡಿಮೆ ನಾಲ್ಕು ವರ್ಷಗಳಾಗಿತ್ತು. ಕಳೆದ ಚುನಾವಣೆಯಲ್ಲಿ ನೋಡಿದ್ದ ನೆನಪು.

'ಅದ್ಯಾಕ್ ಹೀಗೆ ಆಯಾಸ ಮಾಡ್ಕೊಂಡು ಓಡ್ತಿದ್ದೀರಿ...? ನಿಮ್ಮ ವಯಸ್ಸಿಗೆ ಇದು ಸೂಕ್ತವಲ್ಲ ...ಡೇಂಜರ್' ಎಂಬ ನನ್ನ ಪ್ರಶ್ನೆ ಮತ್ತು ಸಲಹೆಗೆ ನೀರು ಕುಡಿದ ದಾಕ್ಷಿಣ್ಯಕ್ಕೊ ಏನೋ ಉತ್ತರಿಸಲು ಎರಡು ನಿಮಿಷದ ಬಿಡುವು ಮಾಡಿಕೊಂಡರು.

'ಏನು ಹೇಳಿದ್ರು ಸಾರ್?' ಎಂದೆವು ಅಚ್ಚರಿ ತಡೆಯಲಾಗದೆ.

"ಮುಂಚೂಣಿಯಲ್ಲಿ ಓಡುತ್ತಿರುವ ಆ ಹುಡುಗ ಬೇರ್‍ಯಾರೂ ಅಲ್ಲ, ನಮ್ಮ ಪಕ್ಷದ ಅಧ್ಯಕ್ಷರು. ಮೇ ತಿಂಗಳಲ್ಲಿ ಎಲೆಕ್ಷನ್ ಇದೆಯಲ್ಲಾ ಅದಕ್ಕೆ ದೂರದ ದಿಲ್ಲಿಯಿಂದ ನಮ್ಮ ಊರಿಗೆ ಬಂದಿದ್ದಾರೆ. ಇವತ್ತು ಬೆಳಿಗ್ಗೆ ಹಮ್ಮಿಕೊಂಡಿರುವುದು ಒಂದು 'ಟೆಂಪಲ್ ರನ್' ಎಂಬ ಕಾರ್ಯಕ್ರಮ. ಗುಜರಾತ್ ಚುನಾವಣೆಯಿಂದ ಪ್ರಭಾವಿತರಾಗಿ ಅಧ್ಯಕ್ಷರೇ ಯೋಜಿಸಿದ ಕಾರ್ಯಕ್ರಮ ಇದು. ಇಂಥಹ ಸಂದರ್ಭದಲ್ಲಿ ನಮ್ಮಂಥಹ ಪದಾಧಿಕಾರಿಗಳು, ಪಕ್ಷದ ಕಾರ್ಯಕರ್ತರು ಮತ್ತು ನಾವೇ ಕಷ್ಟಪಟ್ಟು ಜಮಾಯಿಸಿದ ಜನ ಅವರ ಹಿಂದೆ ಓಡದಿದ್ದರೆ, ಅವರಿಗೆ ತುಂಬಾ ಸಿಟ್ಟು ಬರುತ್ತದೆ. ವಂಶ ಪಾರಂಪಾರ್ಯವಾಗಿ ಬಂದಿರುವ ಅವರ ಮತ್ತೊಂದು ಗುಣವೆಂದರೆ ಅವರ ಮುಂದು ನಾವ್ಯಾರೂ ಓಡುವಂತಿಲ್ಲ. ನನ್ನ ಗ್ರಹಚಾರ ಸರಿಯಿಲ್ಲ, ಅವರ ಹಿಂದೆ ಟಿಕೆಟ್‌ಗೋ ಏನೋ ಒಬ್ಬ ನಟೀ ಮಣಿ ಬ್ಯಾರೇ ಓಡ್ತಿದ್ದಾಳೆ. ನಾನು ಕೊಂಚ ಯಾಮಾರಿದರೂ ಟಿಕೆಟು ಸಿಗುವ ಅವಕಾಶ ನನಗೆ ತಪ್ಪಿಹೋಗುತ್ತದೆ...' ಇಷ್ಟು ವಿವರಿಸಿದ್ದೇ ಹೆಚ್ಚೆಂದು ಭ್ರಮಿಸಿದ ರಾಮಪ್ಪನವರು, ನನ್ನಿಂದ ಬೀಳ್ಕೊಂಡು ಮತ್ತೆ ಓಡಲು ಪ್ರಾರಂಭಿಸಿ, ಗುಂಪಿನಲ್ಲಿ ಗೋವಿಂದ ಆದಾಗ, ನನಗೆ ಕರುಣೆ ಉಕ್ಕಿ ಬಂತು. ಆ ಅಧ್ಯಕ್ಷ ಕೊಡುವ ಟಿಕೆಟ್ಟಿಗೆ ಮುಂಚೆಯೆ... ಇವರು ಟಿಕೆಟ್ ತೆಗೆದುಕೊಂಡು ಬಿಟ್ಟರೆ?...ನೆನೆದು ಭಯವೂ ಆಯಿತು".

ರಾಯರು ಕಹಾನಿ ನಿಲ್ಲಿಸಿ, ಕರ್ಚೀಫಿನಿಂದ ಮುಖವರೆಸಿಕೊಂಡರು.

ಮುಂದೇನಾಯ್ತು ಸರ್? ಎಂದೆವು ಕುತೂಹಲ ತಡೆಯಲಾರದೆ.

'ಆ ಗುಂಪು ಕರಗಿ ಟ್ರಾಫಿಕ್ ಫ್ರೀ ಆಗಿ, ನಾನು ಇಲ್ಲಿ ಬಂದು ತಲುಪುವುದಕ್ಕೆ ಒಂದು ಘಂಟೆ ಹಿಡೀತು, ಐ ಪ್ರಸ್ಯೂಮ್ ದಟ್ ಯು ಆರ್ ಆಲ್ ಕನ್ವಿನ್ಸ್‌ಡ್' ಎಂದರು ರಾಯರು.

"ಸರ್ ನನ್ನದೊಂದು ಚಿಕ್ಕ ಡೌಟು? ಈ 'ಟೆಂಪಲ್ ರನ್' ದೇಗುಲದ ಹೆಬ್ಬಾಗಿಲವರೆಗೋ? ಅಥವಾ ಗರ್ಭಗುಡಿಯವರೆಗೊ?" ಎಂದೆ.

'ನ್ಯಾಚುರಲಿ ಗರ್ಭಗುಡಿಯವರೆಗೆ' ಸಿಲ್ಲಿ ಕ್ವೆಶ್ಚನ್ ಎಂದು ಸಣ್ಣಗೆ ಗದರಿಕೊಂಡರು ರಾಯರು.

'ಹಾಗಲ್ಲ ಸರ್ ನನ್ನ ಆತಂಕ ಏನೂಂದ್ರೆ, ಹೆಬ್ಬಾಗಿಲಿನಿಂದ ಗರ್ಭಗುಡಿಯವರೆಗೆ ಸಿಕ್ಕಾಪಟ್ಟೆ ಬ್ಯಾರಿಕೇಡುಗಳನ್ನು ಹಾಕಿದ್ದಾರೆ. ಓಡುವ ಹುರುಪಿನಲ್ಲಿ ಅಧ್ಯಕ್ಷರು ಏನಾದ್ರೂ ಎಡವಟ್ಟು ಮಾಡಿಕೊಂಡು ಬಿದ್ದುಗಿದ್ದಾರೂ ಅಂತ.'

ಹಾಗಾದ್ರೆ ಒಂಥರಾ ಒಳ್ಳೇದೆ ಆಯ್ತು. ಇಷ್ಟು ದಿನ ಎಲೆಕ್ಷನ್ ಟೈಮಿನಲ್ಲಿ ಜನರ ಮುಂದೆ

ಬೀಳ್ತಿದ್ರು. ಈಗ ದೇವರ ಮುಂದೆ ಬೀಳ್ತಾರೆ. ಇನ್ನೂ ಸ್ವಾರಸ್ಯ ಕೇಳು. ಹೀಗಾದ್ರು ಆಗಬಹುದು. ಅಧ್ಯಕ್ಷರು  ಬಿದ್ದರು ಅಂತ, ಅವರನ್ನೇ ಹಿಂಬಾಲಿಸಿ ಓಡಿ ಹೋಗಿರುವ ನಮ್ಮ ಎಂಎಲ್‌ಎ ರಾಮಪ್ಪನವರು ಎಲೆಕ್ಷನ್ ಹುಂಡಿಯೆಂದು ಭ್ರಮಿಸಿ ದೇವರ ಹುಂಡಿಯ ಮುಂದೆ ಬಿದ್ದರೂ ಬೀಳಬಹುದು.'

ಸರ್ ಈ 'ಟೆಂಪಲ್ ರನ್' ಕಾನ್ಸೆಪ್ಟ್ ಹುಟ್ಟಿದ್ದಾದರು ಹೇಗೆ? ಬೇರೆ ಪಕ್ಷದವರ ಮುಂದೆ ಇವೆಲ್ಲಾ ನಗೆ ಪಾಟಲು ಆಗುವುದಿಲ್ಲವೆ?'

'ನೆವರ್ ಮೈ ಬಾಯ್' ಈ ರಾಜಕಾರಣಿಗಳೆಲ್ಲಾ ಬರ್ಡ್ಸ್ ಆಫ್ ದಿ ಸೇಮ್ ಫೆದರ್, ಅನ್ನೋ ಜಾತಿಯವರು. ಒಂದಿಪ್ಪತ್ತು ವರ್ಷದ ಹಿಂದಕ್ಕೆ ಹೋಗು. ಆಗ ಜನರ ಗುಂಪು ತಲಾ ಕೈಯಲ್ಲೊಂದು ಇಟ್ಟಿಗೆ ಹಿಡಿದುಕೊಂಡು ರಾಮ್....ರಾಮ್.. ಅನ್ನುತ್ತಾ ಟೆಂಪಲ್ಲು ದಿಕ್ಕಿಗೆ ಓಡಿತ್ತು. ಅಲ್ಲಿಂದ ಪ್ರಾರಂಭವಾಯ್ತು ನೋಡು ಈ ಕಾನ್ಸೆಪ್ಟ್. ಇದರ ಆಧಾರದ ಮೇಲೆಯೇ ಒಂದು ರಾಜಕೀಯ ಪಕ್ಷ ದೇಶದ ಹಲವು ಕಡೆ ಅಧಿಕಾರದ ಗದ್ದುಗೆಗೇರಿತು. ಈಗ ಡಿಜಿಟಲ್ ಯುಗ ಎಂಥಹ ಬದಲಾವಣೆ ತಂದಿತು ನೋಡು. ಈಗ ಇಟ್ಟಿಗೆ ಬದಲಿಗೆ, ಪ್ರತಿಯೊಬ್ಬ ಪ್ರಜೆಯೂ ಕೈಯಲ್ಲಿ ಮೊಬೈಲ್ ಹಿಡಿದು ರಾಮ್ ರಾಮ್ ಎಂದು ಜಪಿಸುತ್ತಿದ್ದಾರೆ. ಈಗ ಜನರು ಎಷ್ಟು ಮುಂದುವರೆದಿದ್ದಾರೆಂದರೆ ಯಾವ ರ್‍ಯಾಲಿಯೂ ಅಥವಾ 'ಟೆಂಪಲ್ ರನ್ನೂ' ಅವರ ಮೇಲೆ ಪರಿಣಾಮ ಬೀರುವುದಿಲ್ಲ. ಇವೆಲ್ಲಾ ಗಿಮಿಕ್ಸ್, ಈಸ್ ಇಟ್ ನಾಟ್ ಟ್ರೂ?'

'ಟ್ರೂ ಸರ್' ಎಂದೆವು.

ಸಭೆ ಬರಖಾಸ್ತು' ಎಂದ ರಾಯರು ಎದ್ದು ನಿಂತರು.

ಸರ್ ರಸ್ತೆಯಲ್ಲಿ ಮತ್ತೆ ಗದ್ದಲ ಕೇಳಿಸುತ್ತಿದೆ. ಅದೇ 'ಟೆಂಪಲ್ ರನ್' ಗುಂಪು ವಾಪ್ಸು ಬರುತ್ತಿರಬೇಕು ಅಂದೆ. ರಾಯರು ಕಿಟಕಿಯಾಚೆ ನೋಡಿ 'ಓ ಮೈ ಗಾಡ್' ! ಎಂದು ಜೋರಾಗಿ ಕಿರುಚಿಕೊಂಡರು. ನಾವೆಲ್ಲಾ ಅವರ ಸಹಾಯಕ್ಕೆ ಧಾವಿಸಿದೆವು.

'ಇಷ್ಟು ಹೊತ್ತೂ ನಾವು 'ಟೆಂಪಲ್ ರನ್' ಬಗ್ಗೆ ಡಿಸ್ಕಸ್ ಮಾಡ್ತಿದ್ವಿ. ಅಲ್ನೋಡಿ ಡಿಫರೆಂಟ್ ಕೇಸು. ಟೆಂಪಲ್ಲಿನಿಂದಲೇ ರನ್ನಾಗುತ್ತಿರುವ ಕೇಸು! ಹಾಗೆ ಮುಂದೆ ಓಡುತ್ತಿರುವವರು ನಮ್ಮ ದೇವಸ್ಥಾನದ ಅರ್ಚಕರು. ಅವರನ್ನು ಅಟ್ಟಾಡಿಸಿಕೊಂಡು ಹಿಂದೆ ಓಡುತ್ತಿರುವವರು ಮಫ್ತಿಯಲ್ಲಿರುವ ನಮ್ಮೂರಿನ ಪೊಲೀಸರು.'

"ಏನ್ ಪ್ರಮಾದವಾಯ್ತು ಸಾರ್"?

"ಇತ್ತೀಚೆಗೆ ದೇವರ ಶಿರದಲ್ಲಿದ್ದ ಕಿರೀಟದಲ್ಲಿ ವಜ್ರಗಳೇ ನಾಪತ್ತೆಯಾಗಿದ್ದವು. ಈ ಸಂಬಂಧ ಎಫ್‌ಐಆರ್ ಕೂಡ ದಾಖಲಾಗಿತ್ತು. ಈಗ ಎವಿಡೆನ್ಸ್ ಸಿಕ್ಕಿರಬೇಕು."

ಸರ್ ಇಷ್ಟು ದಿನ ಹುಲು ಮಾನವನಿಗೆ ಸಂಕಷ್ಟ ಬಂದಾಗ ನಾವುಗಳು 'ಟೆಂಪಲ್ ರನ್' ಮಾಡಿ  'ದೇವ್ರೇ....ಕಾಪಾಡಪ್ಪ' ಎಂದು ಬೇಡಿಕೊಳ್ಳುತ್ತಿದ್ದೆವು. ಈಗ ದೇವ್ರೀಗೇ ಈ ದುರ್ಗತಿ ಬಂದರೆ?

"ವಿಧಿಯಿಲ್ಲ, ಅವನಿಗಿರುವುದು ಈಗ ಒಂದೇ ದಾರಿ. ಈ ಟೆಂಪಲ್ಲಿನಿಂದಲೇ ಅವನು ತಡಮಾಡದೇ 'ರನ್' ಆಗಬೇಕು' ಎಂದರು ರಾಯರು. ಯಾಕೊ ಈ ಕಾನ್ಸೆಪ್ಟ್ ನೆನೆದೇ ನನ್ನ ಮೈ ಬೆವರಲಾರಂಭಿಸಿತು.

* * *

# ಉಡುಗೊರೆ

**– ಸಿಂಚನ**

**ಅ**ವರಿಬ್ಬರ ಹುಟ್ಟಿದ ಹಬ್ಬವೂ ಒಂದೇ ದಿನ – ಫೆಬ್ರವರಿ 15 – ಆದರೆ ವರ್ಷ ಬೇರೆ. ಇಷ್ಟು ವರ್ಷ ಒಬ್ಬರಿಗೊಬ್ಬರು ಉಡುಗೊರೆ ಕೊಟ್ಟುಕೊಂಡೇ ಬಂದಿದಾರೆ. ಅವಳು ನಂದಿನಿ ಅವನು ಪರಮೇಶ – 25 ವರ್ಷಗಳ ಸಾರ್ಥಕ ದಾಂಪತ್ಯ. ನಂದಿನಿ ಪರಮೇಶನ ಹಿಂದೆ ಏಳು ಹೆಜ್ಜೆ ಇಡೋ ಮೊದಲು ಪರಮೇಶ ನಂದಿನಿಯ ಹಿಂದೆ ಏಳು ನೂರೋ ಏಳು ಸಾವಿರವೋ ಹೆಜ್ಜೆ ಇಟ್ಟಿದ್ದ. – ಅವಳ ಪ್ರೀತಿ ಗಿಟ್ಟಿಸಿಕೊಳ್ಳಲು.

ರೀ ಈ ವರ್ಷದ ಹುಟ್ಟಿದಬ್ಬದ ಉಡುಗೊರೆ ಏನು ಅಂತ ಕೇಳಿದಳು

ನಾಳೆಯವರೆಗೂ ಗುಟ್ಟು ಅಂದ.

ಮರುದಿನ ಪರಮೇಶ ನಂದಿನಿಯನ್ನು ಕಾರಿನಲ್ಲಿ ಕರೆದುಕೊಂಡು ಹೋಗಿ ಒಂದು ಕಟ್ಟಡದ ಮುಂದೆ ನಿಲ್ಲಿಸಿದ. ಮುಂದೆ ಅವರು ಹೆಜ್ಜೆ ಇಟ್ಟದ್ದು ಮೂರು ಬೆಡ್ ರೂಂಗಳ ಫ್ಲಾಟ್ ಒಳಗೆ

ನಂದಿನಿ ಪ್ಲಾಟನ್ನು ಕಣ್ಣು ತುಂಬಿಕೊಂಡಳು. ಸಖತ್ತಾಗಿದೆ ಅಂತ ಕುಣಿದಾಡಿದಳು.

ಇದುವರೆಗೂ ನಾನು ತಂದುಕೊಟ್ಟ ಯಾವ ಉಡುಗೊರೆಯನ್ನೂ ನೀನು ಹೀಯಾಳಿಸಿಲ್ಲ. ಹಂಗಿಸಿಲ್ಲ, ತಿರಸ್ಕರಿಸಿಲ್ಲ.

ಹೌದು ನೀವು ಅಂಥಾದ್ದೇನನ್ನೂ ತಂದುಕೊಟ್ಟೇ ಇಲ್ವಲ್ಲ ಅಂದು ನಕ್ಕು ಅವನ ಭುಜ ಹಿಡಿದು

ಇರೋದು ನಾವಿಬ್ಬರು – ಮಕ್ಕಳು ದೂರದ ಊರಿನಲ್ಲಿ ಹೀಗಿರುವಾಗ ಮೂರು ಕೋಣೆ ಪ್ಲಾಟ್ ಯಾಕೆ?

ನನಗೊಂದು ನಿನಗೊಂದು ಮಕ್ಕಳು ಬಂದಾಗ ಅವರಿಗೊಂದು.

ನಾವಿಬ್ಬರೇ ಇದ್ದಾಗ ಒಂದರಲ್ಲಿ ನಾವಿಬ್ಬರೂ ಜೊತೆಜೊತೆಯಾಗಿ – ಒಂದು ವೇಳೆ ನಾವಿಬ್ಬರೂ ಜಗಳವಾಡಿದರೆ ಈ ಕೋಣೆ ಇಬ್ಬರಿಗೂ ಬೇಡ ಇರುವ ಇನ್ನೆರಡು ಕೋಣೆಗಳಲ್ಲಿ ಒಂದರಲ್ಲಿ ನೀನು ಇನ್ನೊಂದರಲ್ಲಿ ನಾನು.

ನಾವು ಜಗಳ ಆಡ್ತೀವಾ ಅಂತ ಹುಬ್ಬೇರಿಸದಳು

ರುಚಿಕರ ಊಟದ ನಡುವೆ ಒಂಚೂರು ಖಾರದ ಉಪ್ಪಿನಕಾಯಿ ಎಂಥಾ ಮಜ ಕೊಡುತ್ತೆ ಅಲ್ವೇನೇ ಅಂದ.

ಅವಳು ತುಟಿಯೂದಿಸಿ "ಬೇಡ, ಈಗಾಗಲೇ ಸಾಕಷ್ಟು ಉಪ್ಪಿನಕಾಯಿ ತಿಂದಿದೀವಿ ಇನ್ನೇನಿದ್ದರೂ ಬರೀ ಊಟ. ಉಪ್ಪಿನಕಾಯಿ ಇಲ್ಲದ ಊಟ ಅಷ್ಟೆ. ರೀ ನಿಮಗೆ ಗೊತ್ತಾ, ನಮ್ಮ ಸಮಾಜದಲ್ಲಿ ಮೊನ್ನೆ ಪಂಕಜ ಹೇಳ್ತಿದ್ರು ಬದುಕಿನಲ್ಲಿ ಉಪ್ಪಿನಕಾಯಿಗೇನಾದರೂ ಒಂದು ಚೂರು ಅವಕಾಶ ಕೊಟ್ಟರೂ ಸಾಕು ಅದು ಬಂದು ಇಡೀ ಬದುಕನ್ನು ಆಕ್ರಮಿಸಿಕೊಂಡುಬಿಡುತ್ತೆ. ನನಗೆ ರುಚಿಕರ ಊಟ ಬೇಕು, ಉಪ್ಪಿನಕಾಯಿ ಬೇಡ" ಅಂದಳು.

ಅವರಿಬ್ಬರೂ ಆ ಪ್ಲಾಟ್‌ಗೆ ಸ್ಥಳಾಂತರಗೊಂಡಾಗ ಅವಳು ಮಕ್ಕಳು, ನೆಂಟರು ಹೀಗೆ ಯಾರಾದರೂ ಬಂದರೆ ಮಾತ್ರ ತೆಗೆಯುತ್ತೇನೆ ಅಂತ ಇನ್ನೆರಡು ಕೋಣೆಗಳಿಗೂ ಬೀಗ ಹಾಕಿದಳು.

# ಮುನ್ಸಿಪಾಲಿಟಿಯ ಪಾಲಿಟಿಕ್ಸ್

**• ಇ.ಆರ್. ರಾಮಚಂದ್ರನ್**

**ಅಂದು ಇಂದು, ಗೆಲ್ಲುವ ಸ್ಟ್ರಾಟೆಜಿ ಒಂದೇ...**

**ತಿಂ**ಬ್ಳೂರಲ್ಲಿ ಬರುವ ಮುನ್ಸಿಪಾಲಿಟಿಯ ಎಲೆಕ್ಷನ್ಗೆ ಪಾರ್ಟಿಯ ಸಭೆ ಸೇರಿತ್ತು. ಪಾರ್ಟಿ ಅಧ್ಯಕ್ಷ ಕೆಂಪಯ್ಯನವರಿಗೆ ಒಂದೇ ಯೋಚನೆ. ಹೇಗೆ ಗೆಲ್ಲೋದು ಈ ವರ್ಷ? ಇದೇ ಅವರ ಚಿಂತೆ.

ತುಂಬಿದ್ ಸಭೇಲಿ ಶುರು ಮಾಡ್ದ್ರು ಅವ್ರ ಅಳಲು ತೋಡ್ಕೊಳಕ್ಕೆ...

"ನೋಡ್ರಪ್ಪಾ.. ನಾನ್ ಈಗ್ಲೇ ಏಳ್ತಿನಿ. ಈ ವರ್ಸಾನೂ ನಾವು ಗೆಲ್ತೀವಿ ಅಂತ ಕಣ್ಮುಚ್ಕೊಂಡ್ ಕೂತ್ರೆ ಎಲ್ಲಾ ಕೊಚ್ಚಕೊಂಡ್ ಓಗ್ತದೆ. ಆಮ್ಯಾಕೆ ಏನೂ ಇರಾಕಿಲ್ಲ... ಜನ ನಮ್ಮನ್ನ ಕಸ ಅಂತ ಮುನ್ಸಿಪಾಲ್ಟಿ ತೊಟ್ಟೀಲಿ ಎಸ್ದುಬಿಡ್ತಾರೆ. ನಮ್ಮ ಮೆಂಬರ್ಸ್ಗೋಳು ಪ್ರತಿ ವಾರ್ಡುಗೋ ಓಗಿ ನಮ್ಗೆ ಓಟ್ಕೊಡೀ ಅಂತ ಕೇಳ್ಕೊಂಡ್ರೆ ಉಂಟು. ಇಲ್ದಿದ್ರೆ ನಮ್ದು ನಾಯಿ ಪಾಡೇ! ನಾವು ಸೋತ್ರೆ, ನಾನೂ ಸತ್ತಂಗೆ.. ತಿಳೀತ್ರಾ ನಾ ಏಳಿದ್ದು? ಏನು?"

"ಅಣ್ಣ! ನಮ್ಮೆದ್ರು ಪಾರ್ಟಿ ಈ ಸಲ ಸ್ಟ್ರಾಂಗ್ ಆಗವ್ರೆ.. ಅವ್ರ ಮುಖಂಡ್ರು ಅಲ್ಲಿರೋ ಮೆಂಬ್ರುಸ್ನ ಚೆನ್ನಾಗ್ ನೋಡ್ಕೊಳ್ತವ್ರೆ...ಅವ್ರು ಸೋತಿದ್ರೂ ನಮ್ಗಿನ್ನ ಮೇಲು".

"ಲೇ! ಅವ್ರು ಏನ್ ಮಾಡವ್ರೆ ಏಳೊ.. ನಾನೂ ಕಂಡೀದಿನಿ."

"ಆಣ್ಣಾ! ಅವರ್ನೆಲ್ಲಾ ವಾರಾ ವಾರ ದೊಡ್ಡಣ್ಣ ಆಲ್ಗೆ ಕರ್ಕೊಂಡು ಫ್ರೀಯಾಗಿ ಕಿಂಗ್ಕಾಂಗ್, ಜೆಬಿಸ್ಕೊ, ದಾರಾಸಿಂಗ್ದು ಕುಸ್ತಿ ತೋರ್ಸವ್ರೆ! ಮೂರ್ಕಾಸು ಖರ್ಚಿಲ್ಲ ! ಚಿಕ್ಪೇಟೆಲಿ ಉಡುಪಿ ಕೃಷ್ಣ ಭವನ್ನಾಗೆ ಸ್ವೀಟು, ಖಾರ, ಕಾಫಿ ಕೊಡ್ಸಿ ಕುಸ್ತಿಗೆ ಕರ್ಕೊಂಡು ಓಯ್ತಾರೆ. ಜಾಮೂನ್, ರವೆ ವಡೆ, ಮಸಾಲ್ದೋಸೆ, ಕಾಫಿ ಆದ್ಮೇಲೆ ಬೀಡಿ ಹತ್ತಿಸ್ಬಿಟ್ಟೇ ಕುಸ್ತಿಗೆ ಓಗೋದು! ಭಾನುವಾರ ಮದ್ಯಾಹ್ನ ತಿಗುಳ್ರ ಪೇಟೆ ತಿಮ್ಮಕ್ನ ಮೆಸ್ನಲ್ಲಿ ಮುದ್ದೆ ಕೋಳಿ ಸಾರು ತಿನ್ಸಿ ಕಬ್ಬನ್ ಪಾರ್ಕನಾಗೆ ಆರ್ಕೆಸ್ಟರಾಗೆ ಕರ್ಕೊಂಡು ಓಗವ್ರೆ. ಗಣೇಶ ಬೀಡಿ ಕಂತೆ ಒಬ್ಬೊಬ್ರ ಜೇಬ್ಗೂ ತುರುಕ್ತಾರೆ. ಬರೋ ಕರ್ಗಕ್ಕೆ ಎಲ್ರಿಗೂ ಎಲ್ದು ಜತೆ ಚೆಡ್ಡಿ, ಬನೀನು ಫ್ರೀಯಾಗಿ ಒಲ್ಸಿ ಕೊಡ್ತಾರಂತೆ! ನಿಮ್ ಪಾರ್ಟಿ ಬಿಟ್ ಬಾ ಅಂತಾನೆ ನಮ್ಮ ಸೋದರ್ಮಾವ. ಇಲಿಯೇನ್ ಸಿಗ್ತದೆ ಅಣ್ಣಾ? ನಂಗೆ ನಾಚ್ಕೆ ಆಯ್ತದೆ ನಮ್ಮ ಸೋದ್ರಮಾವನ್ಮುಂದೆ.."

"ನಾ ನಂಬಾಕಿಲ್ಲ ಅದ್ನ.."

"ಅವ್ನು ಏಳಿದ್ದೂ ನಿಜಾ ಕಣಣ್ಣಾ.. ಒಂದ್ ಕಿತ ಬಳೇಪೇಟೆ ಮಲಬಾರ್ ಲಾಜ್ನಲ್ಲಿ ಕೇಸ್ರಿ ಭಾತ್, ಖಾರ ಪೊಂಗಲ್ ಔವಲಟಿನ್ ಕೊಟ್ರಂತೆ... ಅಲ್ಲಿಂದ ಸಿಮೆಂಟ್ ಲಾರೀಲಿ ಎಲ್ಲಾರ್ನೂ ಆಕ್ಕೊಂಡು ಬಸಂಗುಡಿ ದೇವಸ್ಥಾನಕ್ಕೆ ಒಯ್ದು ಕಳ್ಳೇಕಾಯಿ ಪರ್ಸೆ ದಿವ್ಸ ಎಲ್ರಿಗೂ ಎರೆಡರೆಡು ಸೇರು ಸಿಪ್ಪೆಕಡ್ಲೇ ಬೀಜ, ಎಳ್ಳಿ ಅಣ್ಣು, ಸಕ್ರೆ ಅಚ್ಚು, ಅವ್ರ ಸೈಕಲ್ಗೆ ವಾಲ್ಟ್ಯೂಬ್, ಸೀಮಣ್ಣೆ ಡಬ್ಬಿ ಲೈಟು ಕೊಟ್ರಂತೆ ಅಣ್ಣಾ. ನಮ್ ಪಕ್ಕದ್ಮನೆ ಉಡ್ಗ ತೋರಿಸ್ದ. ಬುಡ್ಡಿ ದೀಪ ಸಂದಾಕಿ ಉರಿಯುತ್ತೆ.. ಸೈಕಲ್ನಾಗೆ ಸುತ್ತಾಡಿ ರಾತ್ರಿ ಕೆಲ್ಸ ಮಾಡ್ಬೆಕೂಂತ ಉಕುಮ್ ಮಾಡವ್ರಂತೆ.. ನಮ್ಗೆ ಇಲ್ಲಿ ಏನೂ ಸಿಕ್ಕೈತೆ...?"

"ನಾನ್ ನಿಮ್ಗೆ ಏನ್ ಕಡಿಮೆ ಮಾಡಿದ್ನೋ? ಮಾರಮ್ಮನ್ ಅಬ್ಬಕ್ಕೆ ಎಲ್ರಿಗೂ ಠರ್ರಾ ಕುಡ್ಸಿ ಈರುಳ್ಳಿ ಬಜ್ಜಿ ಮಾಡಿಸ್ಲಿಲ್ವಾ? ಪ್ರತಿ ಕೆಲ್ಸಕ್ಕೂ ಮೇಲ್ ಬಂದಿದ್ ದುಡ್ನ ಎಲ್ರ

ಜೊತೆ ಅಂಚ್ಕೊಳ್ತಿಲ್ವಾ? ರಸ್ತೆಲಿ ಡಾಮ್ರು ಉಯ್ದಾಗ, ನೀರಿನ್ ಪೈಪು ಹೊಸ್ದಾಗಿ ಆಕ್ಸಿದ್ದಾಗ.... ಮರ್ರು ಬಿಟ್ರೇನೋ ಸುವರ್ಣನ್ನನ್ಮಕ್ಳಾ"!

"ಅದೆಲ್ಲಾ ಸರಿ ಕಣಣ್ಣಾ.....ಅವ್ರು ದೊಡ್ಡೋವ್ರಿಗೆ ರಾತ್ರಿ ಡ್ರಿಂಕ್ಸು ಆಕ್ಸಿ ಆಂಟಿ ಮನೇಲಿ ಚಿಕನ್, ಮಟನ್ ಉಣ್ಸಿಟ್ಟು ರಾತ್ರಿ ಮನೀಗೆ ನಾಲ್ಕೋ ಐದ್ಕೋ ಘಂಟೆಗೆ ಕರ್ಕೊಂಡ್ ಓಗಿ ಬಿಟ್ರಂತೆ."

"ಸಾಕು.. ನಿಲ್ಸೋ!"

"ಇನ್ನಂದ್ ವಿಸ್ಯ ಅಣ್ಣಾ ! ಅವರ್ನೆಲ್ಲಾ ಬಸ್ ಮಾಡ್ಕೊಂಡ್ ಮೈಸೂರ್ ಪ್ಯಾಲೆಸ್ಸು, ಜೋಗ್ಗು, ಸಿವನ ಸಮುದ್ರ ಎಲ್ಲಾ ತೋರಿಸ್ಕೊಂಡ್ ಬಂದವ್ರೆ ಕಣಣ್ಣಾ! ಕೂಲಿಂಗ್ ಗ್ಲಾಸ್ ಏರ್ಸಿ ಫೊಟೋ ತೆಗೆಸ್ಕೊಂಡವ್ರೆ ಕನ್ನಂಬಾಡಿಲಿ. ಫ್ಯಾಮಿಲಿನೂ ಇದ್ರು ಫೋಟೋನಲ್ಲಿ."

"ನಿಲ್ಸೋ! ನಿಲ್ಸಿ!"

***

ಈಗೀಗ:

ತಿಂಬ್ಳೂರ್ ಬೆಳ್ದು ಬೆಳ್ದು ಈಗ ತಿಂಬಳೂರು ಆಗಿದೆ. ಮಾಮೂಲಿನಂತೆ ಪಾರ್ಟಿ ಪ್ರೆಸಿಡೆಂಟ್ ಕೆಂಪಯ್ಯನವ್ರ ಮೊಮ್ಮಗ ಮಿಸ್ಟರ್ ಅನಿಲ್ ರಾಯ್ ಸಭೆಯನ್ನು ಉದ್ದೇಶಿಸಿ ಮಾತಾಡ್ದ್ರು.

"ವೆಲ್ಕಮ್ಮು ಎವ್ರಿಬಡಿ. ಎಲ್ರಿಗೂ ವಾಟ್ಸಪ್ನಲ್ಲಿ ಮೆಸೇಜ್ ಕಳ್ಸಿದ್ದೆ. ಸ್ವಲ್ಪ ಜನ ಸ್ಕೈಪ್ ನಲ್ಲಿ ಬಂದಿದೀರ. ವೆಲಕಮ್ ಟು ಯು ಆಲ್ಸೊ. ಬರೋ ಎಲೆಕ್ಷನ್ ಫೇಸ್ ಮಾಡಕ್ಕೆ ನನ್ಗೆ ದಮ್ಮೇ ಇಲ್ಲ. ನಮ್ ಪಾರ್ಟಿ ಮೆಂಬರ್ರು ಆರ್ ನಾಟ್ ಸೀರಿಯಸ್. ಹೀಗೆ ಆದರೆ ಬರೋ ಎಲೆಕ್ಷನ್‌ನಲ್ಲಿ ನಾವು ಸೋಲೋದು ಡೆಫಿನೆಟ್ಟು. ಇದಕ್ಕೆ ಎನಿ ಸಜೆಷನ್ಸ್, ಕಾಮೆಂಟ್ಸ್?"

"ಏನು ಕಾಮೆಂಟು? ಗೆದ್ದು ಪವರ್ ನಮ್ಕೈಲಿದ್ರೂ ನಮ್ ಪಾರ್ಟಿಲಿ ಲೈಫೇ ಇಲ್ಲ! ಎಲೆಕ್ಷನ್ ನಲ್ಲಿ ಸೋತ್ರೂ ಅವ್ರ ಪಾರ್ಟಿ ಮೆಂಬರ್ರು ಚೆನ್ನಾಗಿ ಮಜ ಮಾಡ್ತಿದಾರೆ."

"ಹಾಗೆ ಏನ್ ಮಾಡಿದಾರೆ ಅವರ್ಗೆ?"

" ಅನಿಲ್ ರಾಯ್ ಮೆಂಬರ್ಸ್ನೆಲ್ಲಾ ಕರ್ಕೊಂಡು ಸಿಂಗಪೂರ್, ಬ್ಯಾಂಕಾಕ್ಗೆ ಹೋಗಿದ್ರು. ಟೂ ನೈಟ್ಸ್ ಪಟ್ಟಾಯಾಲಿ ಪಟ್ಟಾಗಿ ಸ್ಟೇ ಮಾಡಿದಾರೆ. ಆಲ್ ಎಕ್ಸ್ಪೆನ್ಸಸ್ ಪೇಡು. ಅವರ್ನ ನೋಡಿ ನಾವ್ ಕಲ್ತ್ಕೋ ಬೇಕು."

"ನಾವು ಸುಮ್ಸುಮ್ನೆ ಮನಿ ವೇಸ್ಟ್ ಮಾಡಲ್ಲ."

"ಇದು ವೇಸ್ಟ್ ಅಲ್ಲ ಬಾಸ್! ಡೆಮಾಕ್ರಸಿಲಿ ಇದೆಲ್ಲಾ ಬೇಕಾಗುತ್ತೆ. ಇಟ್ ಈಸ್ ಎ ನೀಡ್."

"ಇಫ್ ವಿ ಗೆಟ್ ಎಲೆಕ್ಟೆಡ್ ನಾವೂ ಖಂಡಿತ ಮಾಡ್ತಿವಿ".

"ಬಿಗ್ ಇಫ್ ಗುರೂ! ನಮ್ಮ ರೈವಲ್ಸ್ ಎಲ್ಲಾ ಮೆಂಬರ್ರ್ಸ್ಗ್ಗೆ ಡೆಲ್ ಲ್ಯಾಪ್‌ಟಾಪ್ ಕೊಟ್ರು. ಉಗಾದಿಗೆ ಸ್ಯಾಂಸಂಗ್ ಗ್ಯಾಲಕ್ಸಿ ಸ್ಮಾರ್ಟ್ 6 ಕೊಟ್ಟಿದಾರೆ. ವಾಟ್ಸ್ ಅಪ್ ಕನೆಕ್ಷನ್, ವೈಫೈ ಎಲ್ಲಾ ಮಾಡ್ಸವ್ರೆ."

“ಅದಿರ್ಲಿ...ಸಂಥಿಂಗ್ ಇಂಪಾರ್ಟಟೆಂಟ್..... ನಾವೀಗ ವೆರಿ ಡಿಫಿಕಲ್ಟ್ ಸಿಚುಏಷನ್ ನಲ್ಲಿದೀವಿ...... ರೈವಲ್ಸ್ ನಮ್ಮ ಮೆಂಬರ್ಸ್ನ ಕಿಡ್ನಾಪ್ ಮಾಡ್ತಾರೆಂದು ನನಗೆ ನಿನ್ನೆ ರಾತ್ರಿ ಸೀಕ್ರೆಟ್ ನ್ಯೂಸ್ ಬಂತು. ಮನಿ ಪವರ್ ನಿಂದ ನಮ್ಮವರ್ನ ಹಾರ್ಸ್ ಟ್ರೇಡಿಂಗ್ ಮಾಡಿ ಅವರ್ಕಡೇ ತೊಗೊಳ್ತಾರೆಂತ. ಇದೇ ಅವ್ರ ಗೇಮ್ ಪ್ಲಾನ್. ನಾವೆಲ್ಲಾ ಹುಷಾರಾಗಿರ್ಬೇಕು.”

“ರೇಟು ಎಷ್ಟಂತೆ? ಎಷ್ಟು ಹುಷಾರಾಗಿದ್ರೂ ನಾವೆಲ್ಲಾ ಅಲ್ಟಿಮೇಟ್ಲೀ ಹ್ಯೂಮನ್ ಅಲ್ವಾ! ನಾವೆಲ್ಲಾ ಅವರು ತೋಡಿದ ಹಳ್ಳಕ್ಕೆ ನಾವು ಬೀಳಬಾರದೆಂದ್ರೆ ವಿ ಹ್ಯಾವ್ ಟೂ ಆಲ್ಟರ್‌ನೇಟೀವ್ಸ್.”

“ಏನದು?”

“ಎಲೆಕ್ಷನ್ಗೆ ಒಂದು ತಿಂಗಳಿದೆ ಒಂದು, ನಾವೆಲ್ಲಾ ಈಗ್ಲೇ ಈಗಲ್ಟನ್ ಗಾಲ್ಫ್ ಕೋರ್ಸ್‌ಗೆ ಹೋಗಿ ಚೆಕ್ ಇನ್ ಆಗ್ಬಿಡೋದು... ಗುಜರಾತ್ನವರು ಬಸ್ನಲ್ಲಿ ಬಂದಾಗ್ನಿಂದ ಈಗಲ್ಟನ್ ಗಾಲ್ಫಿಗಿಂತ ಈ ತರಹ ಕೆಲಸಕ್ಕೆ ಫೇಮಸ್ ಆಗಿದೆ. ನೆಕ್ಸ್ಟ್ ಟೂ ಯಿರ್ಸ್ ಎಲೆಕ್ಷ್ ಮುಗಿಯೋತನ್ಕ ರಿಸಾರ್ಟ್ ಬುಕ್ ಆಗಿದೆಯಂತೆ. ಗಾಲ್ಫಗೆ ಆಡಕ್ಕೆ ಅಲ್ಲಿಗೆ ಇನ್ನು ಯಾರೂ ಬರಲ್ಲ.”

“ಇನ್ನೊಂದು ಏನು?”

“ಆದ್ರೆ ಅಲ್ಲಿದ್ರೆ ಕೂಡ ಡೇಂಜರ್ರೆ! ಅಲ್ಲಿನ ಮಾಲಿಗಳು, ಸ್ಟಾಫ್ ಕೂಡ ಈ ಹೊಸ ಬಿಸಿನೆಸ್ನ ಚೆನ್ನಾಗಿ ತಿಳಿಕೊಂಡಿದಾರೆ. ಇದು ವರ್ಕ್‌ಔಟ್ ಆಗುತ್ತೋ ಇಲ್ವೋ. ಡಿಕೆಶಿ ತರಹ ಪವರಫುಲ್ ರಾಜಕಾರಿಣಿ ಇಲ್ದಿದ್ರೆ ನಮ್ಮನ್ನ ನಾವು ಬಹಳ ದಿವ್ಸ ಸೇವ್ ಮಾಡ್ಕೊಳ್ಳೊದು ಕಷ್ಟಾನೆ.”

“ದೆನ್ ಸಲ್ಯೂಷನ್ ಏನು?”

“ ನಮ್ಮನ್ನು ಈಗಲೇ ಯೂರೋಪಿಗೆ ಸ್ಟಡಿ ಟೂರ್ ಅಂತ ಹೊರಗಡೆ ಕಳಿಸ್ಬಿಡಿ. ಜರ್ಮನಿ ರಸ್ತೇಲಿ ಹಳ್ಳ ಇರುತ್ತಾ? ಅದನ್ನ ಹೇಗ್ ಮುಚ್ತಾರೆ, ಹಾಲೆಂಡ್‌ನಲ್ಲಿ ಒಳ ಚರಂಡಿ ಹೇಗೆ ಕ್ಲೀನ್ ಮಾಡ್ತಾರೆ, ಲಂಡನ್ ನಲ್ಲಿ ಥೇಮ್ಸ್ನ ಸ್ಲೂಇಸ್ ಗೇಟ್ಸ್ನ ಹೇಗೆ ಮುಚ್ತಾರೆ.. ಅದನ್ನೆಲ್ಲಾ ಒಂದು ತಿಂಗಳು ನಾವು ಎಲ್ಲಾ ಸ್ಟಡಿ ಮಾಡ್ಕೊಂಡು ಬರೋ ಅಷ್ಟರಲ್ಲಿ ಇದೆಲ್ಲಾ ತಣ್ಣಗಾಗಿರುತ್ತೆ. ನೀವು ನಮ್ಗೆ ಸ್ಕೈಪ್ ನಿಂದ ನಮ್ಗೆ ಗೈಡ್ ಮಾಡ್ತಾ ಇರಿ. ಮತ್ತೆ ನೀವು ಇಲ್ಲಿಗೆ ಬಂದ್ರೆ ನಮ್ ಮುಂದಿನ್ ಸ್ಟ್ರಾಟಜಿನ ಒಟ್ಗೆ ಚಾಕೌಟ್ ಮಾಡ್ಬಹುದು. ಈ ಪ್ಲಾನ್ ಅಪ್ರೂವ್ ಮಾಡಿ ಪಾರ್ಟಿಯಿಂದ ಟಿ.ಎ., ಡಿ.ಎ. , ಸೂಟ್, ಸೂಟ್ ಕೇಸ್, ಬ್ರೀಫ್ ಕೇಸ್ ಎಕ್ಸ್ಪೆನ್ಸ್, ಔಟ್ ಅಫ್ ಪಾಕೆಟ್ ಎಕ್ಸಪೆನ್ಸ್ ಕೊಡಿಸಿದ್ರೆ ಎಲೆಕ್ಷನ್ ಹೇಗೆ ಗೆಲ್ಲೋದು ಅನ್ನೋ ಪ್ರಾಬ್ಲಂ ಸಿಂಪಲಾಗಿ ಸಾಲ್ವ್ ಆಗುತ್ತೆ.”

“ಸ್ಕೈಪ್ ನವರೆಲ್ಲಾ ಏನು ಹೇಳ್ತೀರಿ?”

“ಈ ಪ್ಲಾನ್ ಬೆಸ್ಟು ಬಾಸ್! ಆನ್ ದಿ ಸ್ಪಾಟ್ ಅಪ್ರೂವ್ ಮಾಡಿ ನಮ್ಮ ಟಿಕೆಟ್ ಬುಕ್ ಮಾಡ್ಸಿ.”

***

ಯಾವಾಗ್ಲೂ:

ಯಾವ ಇಸವಿನೇ ಆಗಿರ್ಲಿ, ಮುನಿಸಿಪಲ್ ಎಲೆಕ್ಷನ್ ಗೆಲ್ಲಕ್ಕೆ ಒಂದೇ ಸ್ಟ್ರಾಟೆಜಿ ಸಾಕು. ಪಾರ್ಟಿ ಮೆಂಬರ್ರುಗಳನ್ನ ಚೆನ್ನಾಗಿ ನೋಡ್ಕೋಬೇಕು. ಮುಖ್ಯವಾಗಿ ಚೆನ್ನಾಗಿ ತಿನ್ನಿಸ್ಬೇಕು. ಸರ್ವ್ ಮಾಡೋ ಪಬ್ಲಿಕ್‌ಗಿಂತ ಅವ್ರೇ ಬಹಳ ಇಂಪಾರ್ಟೆಂಟು! ಅವ್ರಿಗೆ ತಿನ್ನಿಸಿದ್ರೆ ಜಯ ಸಿದ್ಧ!

**STATEMENT OF OWNERSHIP OF APARANJI**
**(KANNADA MONTHLY)**
**(SEE RULES AND FORM IV)**

| | | | |
|---|---|---|---|
| 1. | Place of Publication | : | Bangalore |
| 2. | Periodicity of Publication | : | Monthly |
| 3. | Printer's Name | : | V.R. Nath |
| | Nationality | : | Indian |
| | Address | : | Ravi Graphics<br>49, 4th Cross, SSI Area<br>Rajajinagar<br>Bangalore - 560010 |
| 4. | Publisher's Name | : | Koravanji Aparanji Trust |
| | Address | : | No 36, 6th Main Road<br>Malleswaram<br>Bangalore - 560003 |
| 5. | Editor's Name | : | M. ShivaKumar |
| | Nationality | : | Indian |
| | Address | : | 36, 6th Main Road<br>Malleswaram<br>Bangalore - 560003 |
| 6. | Name and address of Individuals who own the Paper | : | Koravanji Aparanji Trust<br>36, 6th Main Road<br>Malleswaram<br>Bangalore - 560003 |

I M. Shivakumar hereby declare that the particulars given above are true to the best of my knowledge and belief.

1-3-2018 **M. ShivaKumar**
Bangalore (Signature of the Publisher)